ಮಂಗಳವಾರ, ಮೇ 11, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 131 | ಪುಟ 12

• www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಕ್ಷೇಮ ಕುಶಲ**

ಇಂದಿನ ವಿಷಮ ಸಂದರ್ಭದಲ್ಲಿ ನಮಗೆ ಬೇಕಾಗಿರುವುದು ಸರಿಯಾದ ತಿಳುವಳಿಕೆ ಮತ್ತು ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಬಲ್ಲ ಮಾನಸಿಕ ಮತ್ತು ದೈಹಿಕ ಬಲ.



**ಆಳ-ಅಗಲ** ಸಾಮಾಜಿಕ ಮಾಧ್ಯಮದ ಕಣ್ಣಾಮುಚ್ಚಾಲೆ

ಮಮತಾ ಸಂಪುಟಕ್ಕೆ 44 ಸಚಿವರ ಸೇರ್ಪಡೆ 9

ಹಿಮಂತ ಶರ್ಮಾ ಅಸ್ಸಾಂ ಮುಖ್ಯಮಂತ್ರಿ 9

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 49,502 ▲ | 14,942 ▲ | 73.35 ▲ |

### ಚಾಮರಾಜನಗರ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ 24 ಜನ ಮೃತಪಟ್ಟ ಪ್ರಕರಣ

# ಹೈಕೋರ್ಟ್ ಕಣ್ಗಾವಲಿನ ತನಿಖೆಯೇ ನಡೆಯಲಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಾಮರಾಜನಗರ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಮೇ 3ರಂದು ಆಮ್ಲಜನಕದ ಕೊರತೆಯಿಂದ 24 ಜನರು ಮೃತಪಟ್ಟಿರುವ ಪ್ರಕರಣದ ಕುರಿತು ಹೈಕೋರ್ಟ್ ರಚಿಸಿರುವ ನ್ಯಾಯಮೂರ್ತಿಗಳ ಸಮಿತಿಯ ತನಿಖೆಯೇ ಸೂಕ್ತ, ಅದಕ್ಕೇ ಹೆಚ್ಚು ತೂಕ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಚಾಮರಾಜನಗರ ದುರ್ಘಟನೆ ಬಗ್ಗೆ ಐದು ಬಗೆಯ ತನಿಖೆಗಳು ಆರಂಭವಾಗಿವೆ. ಐಎಎಸ್ ಅಧಿಕಾರಿ ಶಿವಯೋಗಿ ಸಿ. ಕಳಸದ ಪ್ರಾಥಮಿಕ ತನಿಖೆ ನಡೆಸುತ್ತಿದ್ದರೆ, ಆರೋಗ್ಯ ಇಲಾಖೆ ಆಂತರಿಕ ತನಿಖೆ ನಡೆಸುತ್ತಿದೆ. ರಾಜ್ಯ ಮಾನವ ಹಕ್ಕುಗಳ ಆಯೋಗವು ಸ್ವಯಂ-ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು, ತನ್ನದೇ ಪೊಲೀಸ್ ವಿಭಾಗಕ್ಕೆ ತನಿಖೆಯ ಹೊಣೆ ಒಪ್ಪಿಸಿದೆ.

ಈ ಬಗ್ಗೆ ವಿಚಾರಣೆ ನಡೆಸುವ ಕುರಿತಾಗಿ ಆಲೋಚನೆ ನಡೆಸಲಿದ್ದೇವೆ ಎಂದು ಹೈಕೋರ್ಟ್‌ನ ನ್ಯಾಯಪೀಠ ಹೇಳಿತ್ತು. ಏತನ್ಮಧ್ಯೆಯೇ, ನಿವೃತ್ತ ನ್ಯಾಯಮೂರ್ತಿ ಬಿ.ಎ. ಪಾಟೀಲ್ ನೇತೃತ್ವದಲ್ಲಿ ರಾಜ್ಯ ಸರ್ಕಾರ ನ್ಯಾಯಾಂಗ ತನಿಖೆಗೆ ತರಾತುರಿಯಲ್ಲಿ ಆದೇಶ ಹೊರಡಿಸಿದೆ.

8ನೇ ಪುಟ ನೋಡಿ

### ಹೈಕೋರ್ಟ್ ನಿರ್ಧಾರವೇ ಅಂತಿಮ



ಚಾಮರಾಜನಗರ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ನಡೆದ ದುರ್ಘಟನೆ ಕುರಿತು ರಾಜ್ಯ ಮಾನವ ಹಕ್ಕುಗಳ ಆಯೋಗ ಸ್ವಯಂಪ್ರೇರಿತ ವಿಚಾರಣೆ ಆರಂಭಿಸಿದೆ. ಪ್ರಕರಣದ ಕುರಿತು ತನಿಖೆ ನಡೆಸುವಂತೆ ಆಯೋಗದ ಪೊಲೀಸ್ ವಿಭಾಗಕ್ಕೆ ಆದೇಶಿಸಲಾಗಿದೆ. ಆದರೆ, ಈ ವಿಚಾರದಲ್ಲಿ ಹೈಕೋರ್ಟ್ ಮಧ್ಯಪ್ರವೇಶ ಮಾಡಿರುವುದರಿಂದ ಆಯೋಗ ಮುಂದುವರಿಯುವುದಿಲ್ಲ. ಈ ವಿಚಾರದಲ್ಲಿ ರಾಜ್ಯ ಸರ್ಕಾರ, ಮಾನವ ಹಕ್ಕುಗಳ ಆಯೋಗಕ್ಕಿಂತಲೂ ಹೈಕೋರ್ಟ್ ಉನ್ನತವಾದುದು. ರಾಜ್ಯ ಸರ್ಕಾರ ವಿಚಾರಣಾ ಆಯೋಗದ ಕಾಯ್ದೆಯಡಿ ಆಯೋಗ ನೇಮಿಸಿದ್ದರೂ, ಹೈಕೋರ್ಟ್ ನೇಮಿಸಿರುವ ಸಮಿತಿಗೆ ಸಂಪೂರ್ಣ ಸಹಕಾರ ನೀಡಬೇಕಾಗುತ್ತದೆ. ರಾಜ್ಯ ಸರ್ಕಾರ ನ್ಯಾಯಾಂಗ ತನಿಖೆಯ ತನ್ನ ನಿಲುವನ್ನು ಬದಲಿಸಬೇಕಾದ ಅನಿವಾರ್ಯ ಎದುರಾಗಬಹುದು. ಹೈಕೋರ್ಟ್ ಉಸ್ತುವಾರಿಯಲ್ಲಿ ನಡೆಯುವ ತನಿಖೆಯನ್ನು ಸರ್ಕಾರವೂ ಬೆಂಬಲಿಸುವುದು ಉತ್ತಮ.

**ರೂಪಕ್ ಕುಮಾರ್ ದತ್ತ,** ನಿವೃತ್ತ ಡಿಜಿಪಿ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗದ ಸದಸ್ಯ

### ಹೈಕೋರ್ಟ್ ಉಸ್ತುವಾರಿಯ ತನಿಖೆಯೇ ಉತ್ತಮ



ನ್ಯಾಯಾಂಗ ತನಿಖೆಗಳ ವಿಚಾರ ಬಂದಾಗ ನ್ಯಾಯಾಲಯಗಳ ಉಸ್ತುವಾರಿಯಲ್ಲೇ ನಡೆಯಬೇಕು ಎಂಬ ಬೇಡಿಕೆ ಸಾಮಾನ್ಯವಾಗಿ ಕೇಳಿಬರುತ್ತದೆ. ಒಂದು ಪ್ರಕರಣದಲ್ಲಿ ಹೈಕೋರ್ಟ್ ವಿಚಾರಣೆ ಆರಂಭಿಸಿದರೆ ನ್ಯಾಯಾಲಯದ ಉಸ್ತುವಾರಿಯಲ್ಲೇ ತನಿಖೆ ನಡೆದರೆ ಹೆಚ್ಚು ಉತ್ತಮ. ಆದರೆ, ಚಾಮರಾಜನಗರ ಪ್ರಕರಣದಲ್ಲಿ ಸರ್ಕಾರ ಯಾವ ಅಂಶಗಳ ಕುರಿತು ತನಿಖೆ ಆದೇಶಿಸಿದೆ? ಹೈಕೋರ್ಟ್ ಯಾವ ಅಂಶಗಳ ಬಗ್ಗೆ ತನಿಖೆಗೆ ವಹಿಸಿದೆ? ಎಂಬುದನ್ನು ತಿಳಿಯಬೇಕಿದೆ.

ಒಂದೇ ಅಂಶಗಳ ಬಗ್ಗೆ ಎರಡು ತನಿಖೆ ಸರಿಯಲ್ಲ. ಹಾಗೆ ಆದಲ್ಲಿ ತೀರ್ಮಾನಗಳ ಸಂಘರ್ಷಕ್ಕೆ ಕಾರಣವಾಗುತ್ತ-ದೆ. ಆಮ್ಲಜನಕದ ಕೊರತೆ, ಚಿಕಿತ್ಸೆ ಸೇರಿದಂತೆ ಯಾವ ವಿಷಯಗಳ ಕುರಿತು ಎರಡೂ ತನಿಖೆಗಳು ನಡೆಯುತ್ತವೆ ಎಂಬುದು ಸ್ಪಷ್ಟವಾಗಬೇಕು. ಎರಡೂ ತನಿಖೆಗಳು ಒಂದೇ ವಿಷಯದ ಕುರಿತು ನಡೆಯುವುದು ಸರಿಯಲ್ಲ. ಹಾಗೆ ಇರುವುದಾದರೆ ಹೈಕೋರ್ಟ್ ಉಸ್ತುವಾರಿಯಲ್ಲಿ ನಡೆಯುವ ತನಿಖೆಯೇ ಮುಂದುವರಿಯುವುದು ಸೂಕ್ತ.

**ಶಿವರಾಜ್ ವಿ. ಪಾಟೀಲ್,** ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ

### ತರಾತುರಿಯ ತೀರ್ಮಾನ ಹಿಂಪಡೆಯಲಿ



ಬಾನು ಮುಷ್ತಾಕ್

ಚಾಮರಾಜನಗರದಲ್ಲಿ ನಡೆದಿರುವುದು ಸರ್ಕಾರವೇ ನಿರ್ಲಕ್ಷ್ಯದಿಂದ ಮಾಡಿರುವ ಕೊಲೆ. ಸರ್ಕಾರ, ವಿರೋಧ ಪಕ್ಷಗಳು ಘಟನೆಯ ಕುರಿತು ಗಂಭೀರವಾಗಿ ವರ್ತಿಸದ ಸಂದರ್ಭದಲ್ಲಿ ಹೈಕೋರ್ಟ್ ನ್ಯಾಯಾಂಗದ ಕ್ರಿಯಾಶೀಲತೆಯನ್ನು ಪ್ರದರ್ಶಿಸಿದೆ. ತಕ್ಷಣವೇ ರಾಜ್ಯ ಸರ್ಕಾರ ತರಾತುರಿಯಲ್ಲಿ ನ್ಯಾ.ಬಿ.ಎ. ಪಾಟೀಲ್ ನೇತೃತ್ವದ ಆಯೋಗ ನೇಮಿಸಿದ್ದು ಯಾವ ಉದ್ದೇಶಕ್ಕೆ? ಹೈಕೋರ್ಟ್ ಸ್ವತಂತ್ರ ಸಮಿತಿ ನೇಮಿಸುವವರೆಗೂ ಕಾಯಬಹುದಿತ್ತಲ್ಲವೆ?

8ನೇ ಪುಟ ನೋಡಿ

### ನೀವೂ ಪ್ರತಿಕ್ರಿಯಿಸಿ

ಚಾಮರಾಜನಗರ ದುರ್ಘಟನೆ ಕುರಿತು ಯಾವ ತನಿಖೆ ಸೂಕ್ತ ಎಂಬ ಬಗ್ಗೆ ನೀವೂ ಅಭಿಪ್ರಾಯ ತಿಳಿಸಿ. ಹೆಸರು, ವಿಳಾಸ, ಫೋಟೋ ಜತೆಗೆ 60 ಪದಗಳ ಮಿತಿಯಲ್ಲಿ ನಿಮ್ಮ ಪ್ರತಿಕ್ರಿಯೆ ಇರಲಿ.

96060 38256

### ರಾಜ್ಯ ಕೋವಿಡ್ ಅಂಕಿ–ಅಂಶ

| | |
|---|---|
| 19,73,683 ▲ | ಒಟ್ಟು ಸೋಂಕಿತರು (19,34,378 ನಿನ್ನೆಯ ವಿವರ) |
| 5,71,006 ▲ | ಸಕ್ರಿಯ ಪ್ರಕರಣಗಳು |
| 13,83,285 ▲ | ಗುಣಮುಖರಾದವರು |
| 19,372 ▼ | ಒಟ್ಟು ಸಾವು |

ದಿನದ ಏರಿಕೆ

| | | |
|---|---|---|
| ಹೊಸ ಪ್ರಕರಣ | 39,305 | ▼ |
| ಗುಣಮುಖ | 32,188 | ▲ |
| ಸಾವು | 596 | ▲ |

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

### ಮೊದಲ ದಿನ: ಲಾಠಿ ಏಟಿಗೆ ತಲ್ಲಣಿಸಿದ ಶ್ರೀಸಾಮಾನ್ಯ • ಭಾಗಶಃ ಪೊಲೀಸ್ ರಾಜ್ಯವಾಗಿ ಪರಿವರ್ತನೆ

# ಲಾಕ್‌ಡೌನ್: ಎಲ್ಲೆಡೆ ಪೊಲೀಸರ ದಬ್ಬಾಳಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ನಿಯಂತ್ರಿಸಲು ರಾಜ್ಯ ಸರ್ಕಾರ ಸೋಮವಾರದಿಂದ ಜಾರಿಗೊಳಿಸಿರುವ 14 ದಿನಗಳ ಕಠಿಣ ಲಾಕ್‌ಡೌನ್‌ನ ಮೊದಲ ದಿನವೇ ಪೊಲೀಸರು ಕಂಡ ಕಂಡವರ ಮೇಲೆ ಲಾಠಿ ಬೀಸಿದ್ದಾರೆ. ಮಹಿಳೆಯರು, ಮಕ್ಕಳು, ವೃದ್ಧರು, ರೋಗಿಗಳ ಮೇಲೂ 'ಲಾಕ್‌ಡೌನ್' ಹೆಸರಿನಲ್ಲಿ ದೌರ್ಜನ್ಯ ನಡೆಸಿದ್ದು, ಪೊಲೀಸರ ವರ್ತನೆಗೆ ರಾಜ್ಯದಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗಿದೆ.

'ವಾಹನಗಳು ರಸ್ತೆಗೆ ಇಳಿಯದಂತೆ ತಡೆಯಿರಿ' ಎಂಬ ಸರ್ಕಾರದ ಕಟ್ಟಾ-ಜ್ಞೆಯನ್ನು ಅಕ್ಷರಶಃ ಜಾರಿಗೊಳಿಸುವ ಉಮೇದಿನಲ್ಲಿ ಕೆಲವೆಡೆ ಆಸ್ಪತ್ರೆಗೆ ಹೊರಟವರು, ಅಗತ್ಯ ವಸ್ತುಗಳ ಖರೀದಿ ಮತ್ತು ಮಾರಾಟಕ್ಕೆ ಬಂದವರು, ಕೂಲಿಗೆ ಹೊರಟವರನ್ನೂ ಬೆನ್ನತ್ತಿ ಹೋಗಿ ಹಲ್ಲೆ ನಡೆಸಲಾಗಿದೆ. ರಾಜ್ಯದ ಹಲವು ಭಾಗಗಳಲ್ಲಿ ಹಾಲು, ದಿನಸಿ ಸೇರಿದಂತೆ ಅಗತ್ಯ ವಸ್ತುಗಳ ಮಾರಾಟಕ್ಕೂ ಪೊಲೀಸರು ಅಡ್ಡಿಪಡಿಸಿ-ರುವ ಘಟನೆಗಳು ವರದಿಯಾಗಿವೆ.



ವಿಜಯಪುರ ನಗರದಲ್ಲಿ ಸೋಮವಾರ ಕಾರಿನಲ್ಲಿ ತೆರಳುತ್ತಿದ್ದ ವ್ಯಕ್ತಿಯನ್ನು ಅಡ್ಡಗಟ್ಟಿ, ಕೆಳಗಿಳಿಸಿದ ಪೊಲೀಸರು ಲಾಠಿಯಿಂದ ಥಳಿಸಿದರು

ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ

ರಸ್ತೆಯಲ್ಲಿ ಓಡಾಡುವವರು ತಮ್ಮಂತೆ ಮನುಷ್ಯರು, ಕಷ್ಟ ಜೀವಿಗಳು ಎಂಬುದನ್ನೂ ಎಣಿಸದೇ ಹಿಗ್ಗಾಮುಗ್ಗಾ ಥಳಿಸಿ ದಬ್ಬಾಳಿಕೆ ನಡೆಸಿದ ಪೊಲೀಸರ ಕೃತ್ಯ ಸಾರ್ವಜನಿಕ ವಲಯದಲ್ಲಿ ತೀವ್ರ ಖಂಡನೆಗೆ ಗುರಿಯಾಗಿದೆ.

ಬೆಳಿಗ್ಗೆ 6 ರಿಂದ 10ರವರೆಗೂ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡಲಾಗಿದೆ. ಆದರೆ, ದ್ವಿಚಕ್ರ ವಾಹನಗಳಲ್ಲೂ ಸಂಚರಿಸುವುದಕ್ಕೆ ಪೊಲೀಸರು ಅವಕಾಶ ನೀಡಲಿಲ್ಲ. ರಸ್ತೆಗೆ ಬಂದವರನ್ನು ಪೊಲೀಸ್ ಸಿಬ್ಬಂದಿ ಅಡ್ಡಗಟ್ಟಿ ಥಳಿಸಿ, ವಾಹನ ವಶಕ್ಕೆ ಪಡೆಯುತ್ತಿದ್ದ ದೃಶ್ಯ ರಾಜ್ಯದ ಎಲ್ಲೆಡೆಯೂ ಕಂಡುಬಂತು. ಮಲೆನಾಡು, ಕರಾವಳಿ, ಬಯಲುಸೀಮೆ, ಕಲ್ಯಾಣ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಹತ್ತಾರು ಕಿಲೋಮೀಟರ್ ದೂರದ ಪೇಟೆಗಳಿಗೆ ಕಾಲ್ನಡಿಗೆಯಲ್ಲೇ ತೆರಳಬೇಕಾದ ಸ್ಥಿತಿ ನಿರ್ಮಾಣವಾಗಿದ್ದರಿಂದ ಜನರು ಹೈರಾಣಾದರು.

9ನೇ ಪುಟ ನೋಡಿ

### ವಾಹನ ನಿರ್ಬಂಧವಿಲ್ಲ ಡಿಜಿಪಿ ಸೂದ್ ಸ್ಪಷ್ಟನೆ

ಪೊಲೀಸರ ವರ್ತನೆ ಕುರಿತು ಆಕ್ರೋಶ ಹೆಚ್ಚುತ್ತಿದ್ದಂತೆಯೇ ಟ್ವಿಟರ್‌ನಲ್ಲಿ ಸ್ಪಷ್ಟನೆ ನೀಡಿರುವ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, 'ನಗರಗಳಲ್ಲಿ ಸಮೀಪದ ಅಂಗಡಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸಮೀಪದ ಪೇಟೆಯಿಂದ ದಿನಸಿ, ತರಕಾರಿ ಮತ್ತು ಇತರ ಅಗತ್ಯ ವಸ್ತುಗಳನ್ನು ಖರೀದಿಸಿ ತರಲು ವಾಹನಗಳ ಬಳಕೆಗೆ ನಿರ್ಬಂಧ ಇಲ್ಲ' ಎಂದು ತಿಳಿಸಿದ್ದಾರೆ.

'ಈ ಅವಕಾಶವನ್ನು ಜನರು ವಿವೇಚನೆಯಿಂದ ಬಳಸಬೇಕು. ನಿತ್ಯವೂ ಅಂಗಡಿ ಮತ್ತು ಪೇಟೆಗೆ ಹೋಗುವುದಕ್ಕೆ ಪರವಾನಗಿ ಎಂಬುದಾಗಿ ಭಾವಿಸಬಾರದು' ಎಂದು ಮನವಿ ಮಾಡಿದ್ದಾರೆ.

### ಸಾಮಾಜಿಕ ಮಾಧ್ಯಮಗಳಲ್ಲಿ ಆಕ್ರೋಶ

ಲಾಕ್‌ಡೌನ್ ಜಾರಿಯ ಹೆಸರಿನಲ್ಲಿ ಪೊಲೀಸರು ಅತಿರೇಕದಿಂದ ವರ್ತಿಸಿರುವ ಘಟನೆಗಳ ವಿಡಿಯೊಗಳು, ಫೋಟೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಸಾವಿರಾರು ಮಂದಿ, ರಾಜ್ಯ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಕರ್ನಾಟಕ ಪೊಲೀಸ್ ರಾಜ್ಯ ಆಗಿದೆಯೇ' ಎಂಬ ಪ್ರಶ್ನೆಗಳನ್ನೂ ಮುಂದಿಟ್ಟಿದ್ದಾರೆ.

ಇನ್ನಷ್ಟು ಸುದ್ದಿಗಳು 3A

**16,007** ವಶಪಡಿಸಿಕೊಂಡ ವಾಹನಗಳ ಸಂಖ್ಯೆ

**11,657** ದಾಖಲಿಸಿದ ಪ್ರಕರಣಗಳ ಸಂಖ್ಯೆ

**ಜನ ಹೊರಗೆ ಬಾರದಂತೆ ಅವರ ಅಗತ್ಯಗಳನ್ನು ಪೂರೈಸುವ ಮತ್ತು ಪರಿಹಾರ ಒದಗಿಸುವ ಕ್ರಮಗಳತ್ತ ಸರ್ಕಾರ ಗಮನಹರಿಸಬೇಕು**

**ಎಚ್.ಡಿ. ಕುಮಾರಸ್ವಾಮಿ**

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

**ಜನರ ಅನುಕೂಲಕ್ಕಾಗಿಯೇ ಬಿಗಿ ಕ್ರಮ ಕೈಗೊಳ್ಳಲಾಗಿದೆ. ಲಾಠಿ ಪ್ರಯೋಗ ಬಿಟ್ಟು ಕಟ್ಟುನಿಟ್ಟಿನ ಕಾನೂನು ಕ್ರಮಕ್ಕೆ ಪೊಲೀಸರಿಗೆ ಸೂಚಿಸಲಾಗಿದೆ**

**ಬಸವರಾಜ ಬೊಮ್ಮಾಯಿ**

ಗೃಹ ಸಚಿವ

### ಒಳ ಪುಟಗಳು



**ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ**

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-5

**ಇಂದಿನ ಪಾಡ್‌ಕಾಸ್ಟ್ ವಿಶೇಷ**

ಸುದ್ದಿ ಸ್ವಾರಸ್ಯ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

### ‘ಸುಖಾಸುಮ್ಮನೇ ಬಲಪ್ರಯೋಗ ಮಾಡಬೇಡಿ’

**ಬೆಂಗಳೂರು:** ನಗರದಲ್ಲಿ ಸೋಮವಾರ ಲಾಕ್‌ಡೌನ್ ವೇಳೆ ಹಲವೆಡೆ ಪೊಲೀಸರು ಲಾಠಿ ಬೀಸಿದ್ದು, ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದೇ ವಿಚಾರವಾಗಿ ಟ್ವೀಟ್ ಮಾಡಿರುವ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, 'ಸಾರ್ವಜನಿಕರು ಲಾಕ್‌ಡೌನ್ ಮಾರ್ಗಸೂಚಿ ಉಲ್ಲಂಘಿಸಿದ್ದು ಕಂಡುಬಂದಲ್ಲಿ ಮಾತ್ರ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕು. ಅದನ್ನು ಬಿಟ್ಟು ಬೇರೆ ಯಾವುದೇ ರೀತಿಯ ಬಲಪ್ರಯೋಗ ಮಾಡಬಾರದು' ಎಂದು ಪೊಲೀಸರಿಗೆ ಸೂಚನೆ ನೀಡಿದ್ದಾರೆ.



ಕಮಲ್ ಪಂತ್

'ಲಾಕ್‌ಡೌನ್ ಜಾರಿಯಾಗಿರುವ ಸಮಯದಲ್ಲಿ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಒಪ್ಪಿಗೆ ನೀಡಲಾದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅಥವಾ ಕೆಲಸದ ಸ್ಥಳಕ್ಕೆ ಪ್ರಯಾಣಿಸುವ ಸಂದರ್ಭದಲ್ಲಿ ಯಾವುದೇ ಸಮಸ್ಯೆಗಳಾದಲ್ಲಿ ಡಿಸಿಪಿ (ಗುಪ್ತದಳ) ಸಂತೋಷ್ ಬಾಬು ಅವರನ್ನು ಸಂಪರ್ಕಿಸಬಹು-ದು. ದೂರವಾಣಿ ಸಂಖ್ಯೆ 080-22942354' ಎಂದೂ ಅವರು ಹೇಳಿದ್ದಾರೆ.

'ಸಾರ್ವಜನಿಕರು ಆದಷ್ಟು ಮನೆಯಲ್ಲೇ ಇರಿ, ಸುರಕ್ಷಿತವಾಗಿರಿ. ಕೊರೊನಾ ಹರಡುವುದನ್ನು ತಡೆಯಲು ದಯವಿಟ್ಟು ಸಹಕರಿಸಿ' ಎಂದೂ ಕಮಲ್ ಪಂತ್ ಕೋರಿದ್ದಾರೆ.

## ಸಿಗದ ಲಸಿಕೆ: ಗೋಳು ಮುಂದುವರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅವರೆಲ್ಲಾ 70–80 ವರ್ಷದ ಆಸುಪಾಸಿನವರು. ನೆತ್ತಿ ಸುಡುತ್ತಿದ್ದ ಬಿಸಿಲನ್ನೂ ಲೆಕ್ಕಿಸದೆ ಸರತಿ ಸಾಲಿನಲ್ಲಿ ನಿಂತಿದ್ದರು. ತಮ್ಮನ್ನು ಈಗ ಒಳಗೆ ಬಿಡಬಹುದೇನೊ, ಇನ್ನರ್ಧ ಗಂಟೆಯಲ್ಲಿ ಕರೆಯಬಹುದೇನೋ ಎಂದು ಕಾಯುತ್ತಲೇ ಇದ್ದರು. ಹನ್ನೊಂದಾಯಿತು, ಹನ್ನೆರಡು ಗಂಟೆಯೂ ಕಳೆಯಿತು, ಅವರಸರದಿ ಬರಲೇ ಇಲ್ಲ! 'ಲಸಿಕೆ ಇಲ್ಲಾರೀ'ಎಂದು ಸಿಬ್ಬಂದಿ ಹೇಳಿದಾಗ ನಿರಾಸೆಯಿಂದಲೇ ಮನೆಗಳತ್ತ ಹೊರಟರು.

ರಾಜಧಾನಿಯ ಕೆಲ ಆರೋಗ್ಯ ಕೇಂದ್ರಗಳ ಎದುರು ಸೋಮವಾರ ಕಂಡುಬಂದ ಸಾಮಾನ್ಯ ದೃಶ್ಯವಿದು.

ನಗರದಲ್ಲಿ ಹಲವೆಡೆ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದು ಸಾವಿನ ಸಂಖ್ಯೆಯೂ ಏರುತ್ತಲೇ ಇದೆ. ಇದರ ನಡುವೆ ಲಸಿಕೆಯ ಕೊರತೆಯಾಗಿರುವುದು ಜನರನ್ನು ಚಿಂತೆಗೀಡು ಮಾಡಿದೆ.

**ಊಟಕ್ಕೂ ಹೋಗಲಿಲ್ಲ:** ಉಲ್ಲಾಳದ ಪ್ರಾಥಮಿಕ ಆರೋಗ್ಯ ಕೇಂದ್ರದ ಎದುರು ಲಸಿಕೆ ಪಡೆಯಲು ಬೆಳಿಗ್ಗೆಯಿಂದಲೇ ಜನ ಸಾಲುಗಟ್ಟಿ ನಿಂತಿದ್ದರು. 10 ಗಂಟೆಗೆ ಬಂದ ಸಿಬ್ಬಂದಿ ಇನ್ನೊಂದು ಗಂಟೆಯಲ್ಲಿ ಲಸಿಕೆ ಬರಲಿದೆ ಎಂದರು. ಇನ್ನೊಂದು ಗಂಟೆ ಬಿಟ್ಟು ಬಂದ ಅವರು ಮಧ್ಯಾಹ್ನ ಒಂದು ಗಂಟೆ ವೇಳೆಗೆ ತಲುಪುತ್ತದೆ ಎಂದರು. ಜನ ಕಾಯುತ್ತಲೇ ಇದ್ದರು. ಈಗಾಗಲೇ ಮೂರು ಗಂಟೆಯಾಗಿದೆ ಎಲ್ಲರೂ ಮನೆಗೆ ಹೋಗಿ ಊಟ ಮುಗಿಸಿಕೊಂಡು ಬಂದು ಬಿಡಿ ಎಂದರು. ಆದರೆ ಜನ ಕದಲಲಿಲ್ಲ. ಸಾಲು ಬಿಟ್ಟು ಹೋದರೆ ಮತ್ತೆ ಗಂಟೆಗಟ್ಟಲೆ ಕಾಯಬೇಕಾಗಬಹುದು ಎಂಬ ಭಯದಲ್ಲಿ ಕೆಲವರು ಮನೆಯಿಂದಲೇ ಊಟ ತರಿಸಿ ತಿಂದರು. ಆವಲಹಳ್ಳಿ ಆರೋಗ್ಯ ಕೇಂದ್ರದ ಎದುರೂ ಇದೇ ಪರಿಸ್ಥಿತಿ ಇತ್ತು.

9ನೇ ಪುಟ ನೋಡಿ

## ನಗರ ಕೇಂದ್ರಿತ ಮಾರ್ಗಸೂಚಿ ಗ್ರಾಮೀಣರಿಗೆ ಫಜೀತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಲಾಕ್‌ಡೌನ್ ಘೋಷಿಸುವಾಗ ನಗರ-ಪಟ್ಟಣಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾರ್ಗಸೂಚಿ ರೂಪಿಸಿದ್ದರಿಂದಾಗಿ ರಾಜ್ಯದ ಗ್ರಾಮೀಣ ಪ್ರದೇಶದ ಜನ ಪರದಾಡುವ ಸ್ಥಿತಿ ಸೃಷ್ಟಿಯಾಗಿದೆ.

ಮಲೆನಾಡು, ಕರಾವಳಿ ಮತ್ತು ಬಯಲುಸೀಮೆಯಲ್ಲಿರುವ ಗ್ರಾಮೀಣ ಪ್ರದೇಶದ ಜನರು ತಮ್ಮ ದೈನಂದಿನ ಅಗತ್ಯಗಳಿಗೆ ಸಮೀಪದ ಪಟ್ಟಣಗಳನ್ನೇ ಅವಲಂಭಿಸಿದ್ದಾರೆ. ದಿನಸಿ, ಹಣ್ಣು-ತರಕಾರಿ ಮತ್ತು ಕೃಷಿ ಉಪಕರಣಗಳು, ಬಿತ್ತನೆ ಬೀಜ ರಸಗೊಬ್ಬರಗಳಿಗೂ ಪಟ್ಟಣಗಳಲ್ಲಿರುವ ಮಳಿಗೆಗಳಿಗೇ ಹೋಗಬೇಕು.

ಬೆಳಿಗ್ಗೆ 6 ರಿಂದ 10 ರ ಒಳಗೇ ಹೋಗಿ ನಡೆದುಕೊಂಡೇ ಹೋಗಿ ಅವುಗಳನ್ನು ಖರೀದಿಸಿಕೊಂಡು ಬರಬೇಕು. ವಾಹನಗಳ ಬಳಕೆಗೆ ನಿರ್ಬಂಧ ವಿಧಿಸಲಾಗಿದೆ. ಪಟ್ಟಣಗಳಿಗೆ ಹತ್ತಾರು ಕಿಲೊಮೀಟರ್‌ಗಳಷ್ಟು ನಡೆದುಕೊಂಡು ಹೋಗಿ ಅಗತ್ಯ ಸಾಮಗ್ರಿಗಳನ್ನು ತರಲು ಸಾಧ್ಯವಿಲ್ಲ. ಸಣ್ಣ- ಪುಟ್ಟ ವಾಹನಗಳಲ್ಲಿ ತರಲು ಅವಕಾಶ ನೀಡುವುದು ಸೂಕ್ತ ಎನ್ನುತ್ತಾರೆ ಗ್ರಾಮೀಣ ಪ್ರದೇಶದ ನಿವಾಸಿಗಳು.

4ನೇ ಪುಟ ನೋಡಿ

### ಸರ್ಕಾರ ಹೇಳುವುದೇನು?

ಕೃಷಿ ಮತ್ತು ಸಂಬಂಧಿಸಿದ ಎಲ್ಲ ಚಟುವಟಿಕೆಗಳಿಗೂ ಅವಕಾಶ ನೀಡಲಾಗಿದೆ. ಇದಕ್ಕೆ ಪೂರಕವಾಗಿ ನಿರ್ಬಂಧಿತ ವಲಯ ಹೊರತುಪಡಿಸಿ ಉಳಿದ ಕಡೆಗಳಲ್ಲಿ ಅಂಗಡಿ, ಗೋದಾಮುಗಳು ಬೆಳಿಗ್ಗೆ 6 ರಿಂದ 10 ಗಂಟೆಯವರೆಗೆ ವ್ಯಾಪಾರ–ವಹಿವಾಟು ನಡೆಸಬಹುದು. ಮೀನುಗಾರಿಕೆ, ಕೋಳಿ ಸಾಕಣೆ, ಮಾಂಸ ಮತ್ತು ಡೇರಿ ಚಟುವಟಿಕೆಗಳಿಗೂ ಅವಕಾಶ ನೀಡಲಾಗಿದೆ. ಆದರೆ, ಇವುಗಳನ್ನು ವಾಹನಗಳಲ್ಲಿ ಒಯ್ಯುವುದಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಯಲ್ಲಿ ಮಾಹಿತಿ ನೀಡಿಲ್ಲ.

### ಕೋವಿಡ್ ನಿರ್ವಹಣೆ: ‘ಸುಪ್ರೀಂ’ ಮಧ್ಯಪ್ರವೇಶ ಬೇಡ– ಕೇಂದ್ರ

**ನವದೆಹಲಿ (ಪಿಟಿಐ):** ಕೋವಿಡ್–19ರ ನಿರ್ವಹಣೆಯ ವಿಚಾರದಲ್ಲಿ ನ್ಯಾಯಾಂಗದ ಮಧ್ಯಪ್ರವೇಶಕ್ಕೆ ಇರುವ ಅವಕಾಶ ಅತ್ಯಲ್ಪ ಎಂದು ಕೇಂದ್ರವು ಸುಪ್ರೀಂ ಕೋರ್ಟ್‌ಗೆ ಹೇಳಿದೆ. ಕೋವಿಡ್ ಎಂಬುದು ಜಾಗತಿಕವಾದ ಪಿಡುಗು. ಇದನ್ನು ಎದುರಿಸುವ ಕಾರ್ಯತಂತ್ರ ವೈದ್ಯಕೀಯ ಪರಿಣತರು ಮತ್ತು ವೈಜ್ಞಾನಿಕ ಅಭಿಪ್ರಾಯಗಳನ್ನು ಆಧರಿಸಿದೆ ಎಂದು ತಿಳಿಸಿದೆ.

ಕೋವಿಡ್ ನಿರ್ವಹಣೆಗೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಎತ್ತಿದ ಪ್ರಶ್ನೆಗಳಿಗೆ ಉತ್ತರವಾಗಿ ಕೇಂದ್ರ ಭಾನುವಾರ ರಾತ್ರಿ ಪ್ರಮಾಣಪತ್ರ ಸಲ್ಲಿಸಿದೆ. ಕೋವಿಡ್ ನಿರ್ವಹಣೆಗಾಗಿ 12 ಸದಸ್ಯರ ರಾಷ್ಟ್ರೀಯ ಕಾರ್ಯಪಡೆ ರಚಿಸಲು ಸುಪ್ರೀಂ ಕೋರ್ಟ್‌ನಲ್ಲಿ ಕೇಂದ್ರ ಸರ್ಕಾರ ಒಪ್ಪಿದ ಎರಡು ದಿನಗಳ ಬಳಿಕ ಈ ಪ್ರಮಾಣಪತ್ರ ಸಲ್ಲಿಸಲಾಗಿದೆ.

9ನೇ ಪುಟ ನೋಡಿ

### ಚಿನಕುರಳಿ

ಪ್ರಕಾಶ್ ಶೆಟ್ಟಿ



ಹಾಸಿಗೆ ಹಂಚಿಕೆ– ತೇಜಸ್ವಿ ಸೂಚಿಸಿದ ಪರಿಹಾರಕ್ಕೆ ಆಕ್ಷೇಪ • ಇದರಿಂದ ಸಾವಿನ ಸಂಖ್ಯೆ ಹೆಚ್ಚಲಿದೆ: ಅಧಿಕಾರಿಗಳ ಕಳವಳ

## ತುರ್ತು ಹಾಸಿಗೆಗಾಗಿ ಇನ್ನು ಸರದಿಗಾಗಿ ಕಾಯಬೇಕು!

• ಪ್ರವೀಣ್ ಕುಮಾರ್ ಪಿ.ವಿ.

**ಬೆಂಗಳೂರು:** 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ರೋಗಿಗಳಿಗೆ ಸರ್ಕಾರಿ ಕೋಟಾದಡಿ ಹಾಸಿಗೆ ಹಂಚಿಕೆ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು ಕೇವಲ 100 ಗಂಟೆಗಳಲ್ಲಿ ಮಹತ್ವದ ಸುಧಾರಣೆಗಳನ್ನು ತರಲಾಗಿದೆ' ಎಂದು ಸಂಸದ ತೇಜಸ್ವಿ ಸೂರ್ಯ ಪ್ರತಿಪಾದಿಸಿದ್ದಾರೆ.

ಆದರೆ, ಹಾಸಿಗೆ ಹಂಚಿಕೆಯ ಕೇಂದ್ರೀಕೃತ ವ್ಯವಸ್ಥೆಯ (ಸಿಎಚ್‌ಬಿಎಂಎಸ್) ತಂತ್ರಾಂಶ ಸುಧಾರಣೆಗಾಗಿ ಸರ್ಕಾರ ರಚಿಸಿದ್ದ ತಾಂತ್ರಿಕ ಸಲಹಾ ಸಮಿತಿಯು ಕೆಲವು ಬದಲಾವಣೆಗಳ ಕುರಿತು ಸಹಮತ ಹೊಂದಿರಲಿಲ್ಲ. ಇದರಿಂದಾಗುವ ಅಪಾಯಗಳ ಬಗ್ಗೆಯೂ ಎಚ್ಚರಿಸಿತ್ತು ಎಂದು ಗೊತ್ತಾಗಿದೆ.

ಹಾಸಿಗೆ ಹಂಚಿಕೆಯ ಸುಧಾರಣೆಗಳ ಬಗ್ಗೆ ತೇಜಸ್ವಿ ಸೂರ್ಯ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾಹಿತಿ ನೀಡಿದರು. 'ಹಾಸಿಗೆ ಕಾಯ್ದಿರಿಸಲು ಸರದಿ ವ್ಯವಸ್ಥೆ ಜಾರಿಯಾಗಲಿದೆ. ಯಾರೇ ಹಾಸಿಗೆ ಪಡೆಯುವುದಿದ್ದರೂ ತಮ್ಮ ಸರದಿಗಾಗಿ ಕಾಯಬೇಕು. ಸಾಮಾನ್ಯ ಹಾಸಿಗೆಯಿಂದ ಎಚ್‌ಡಿಯು, ಐಸಿಯು ಅಥವಾ ವೆಂಟಿಲೇಟರ್ ಹಾಸಿಗೆಗೆ ವರ್ಗಾಯಿಸುವುದಕ್ಕೂ ಸರದಿ ಪಾಲಿಸಬೇಕು. ಮನೆಯಲ್ಲೇ ಆರೈಕೆಗೆ ಒಳಗಾಗುವವರು ಆಸ್ಪತ್ರೆಗೆ ದಾಖಲಾಗಬೇಕಾದರೆ ವೈದ್ಯರಿಂದ ಪ್ರಮಾಣಪತ್ರ ಹಾಜರುಪಡಿಸಬೇಕು' ಎಂದು ಸ್ಪಷ್ಟಪಡಿಸಿದರು.

**ಇನ್ನಷ್ಟು ಜೀವ ಬಲಿ?:** 'ಸರದಿ ವ್ಯವಸ್ಥೆಗೆ ನಮ್ಮ ಸಹಮತ ಇರಲಿಲ್ಲ. ತುರ್ತು ಅಗತ್ಯವಿರುವವರಿಗೆ ಆದ್ಯತೆ ಮೇರೆಗೆ ಹಾಸಿಗೆ ಹಂಚಿಕೆ ಆಗಬೇಕೇ ಹೊರತು, ಯಾರು ಮೊದಲು ಕಾಯ್ದಿರಿಸಿದರು ಎಂಬ ಆಧಾರದಲ್ಲಿ ಅಲ್ಲ. ಈ ವ್ಯವಸ್ಥೆ ಜಾರಿಯಾದರೆ, ತುರ್ತಾಗಿ ಐಸಿಯು ಅಥವಾ ವೆಂಟಿಲೇಟರ್ ಹಾಸಿಗೆ ಪಡೆಯುವುದಕ್ಕೂ ರೋಗಿಗಳು ತಮ್ಮ ಸರದಿಗಾಗಿ ಕಾಯಬೇಕಾಗುತ್ತದೆ. ಅಷ್ಟರಲ್ಲಿ ರೋಗಿಯು ಜೀವ ಕಳೆದುಕೊಳ್ಳಬೇಕಾದೀತು' ಎಂದು ಹಾಸಿಗೆ ಹಂಚಿಕೆ ವ್ಯವಸ್ಥೆ ಸುಧಾರಣೆಯ ತಾಂತ್ರಿಕ ಸಮಿತಿಯಲ್ಲಿದ್ದ ಅಧಿಕಾರಿಯೊಬ್ಬರು ಕಳವಳ ವ್ಯಕ್ತಪಡಿಸಿದರು.

'ಸರದಿ ವ್ಯವಸ್ಥೆ ಜಾರಿಗೆ ತಂದರೆ ಆಗಲಿರುವ ಅಪಾಯದ ಬಗ್ಗೆ ನಾವು ಮನವರಿಕೆ ಮಾಡಿದರೂ ಅದಕ್ಕೆ ಕಿವಿಗೊಟ್ಟಿಲ್ಲ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಇದಕ್ಕೆ ದನಿಗೂಡಿಸಿದ ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರು, 'ಹೆಚ್ಚಿನವರು ಬಿಬಿಎಂಪಿಯನ್ನು ಸಂಪರ್ಕಿಸುವುದು ತುರ್ತಾಗಿ ಐಸಿಯು ಹಾಸಿಗೆ ಬೇಕಾದಾಗ. ಲಭ್ಯವಿದ್ದರೆ ಅಲ್ಲವೇ ಅವುಗಳನ್ನು ಹಂಚಿಕೆ ಮಾಡಲು ಸಾಧ್ಯ. ಐಸಿಯು ಹಾಗೂ ವೆಂಟಿಲೇಟರ್ ಹಾಸಿಗೆಗಳನ್ನು ಹೆಚ್ಚಿಸದೇ ವಾರ್ ರೂಂನಲ್ಲಿ ಸುಧಾರಣೆ ತಂದೂ ಪ್ರಯೋಜನವಾಗದು' ಎಂದು ಅಭಿಪ್ರಾಯಪಟ್ಟರು.

'ಮನೆಯಲ್ಲೇ ಆರೈಕೆಯಲ್ಲಿರುವ ಕೋವಿಡ್ ರೋಗಿಗೆ ಉಸಿರಾಟ ಸಮಸ್ಯೆ ಎದುರಾದಾಗ ಅವರನ್ನು ತುರ್ತಾಗಿ ಆಸ್ಪತ್ರೆಗೆ ದಾಖಲಿಸಬೇಕಾಗುತ್ತದೆ. ಆಗ ಪ್ರಮಾಣಪತ್ರ ಪಡೆಯಲು ವೈದ್ಯರನ್ನು ಹುಡುಕುತ್ತಾ ಕೂರಲು ಸಾಧ್ಯವೇ' ಎಂದು ಅವರು ಪ್ರಶ್ನಿಸಿದರು.

ತೇಜಸ್ವಿ ಸೂರ್ಯ, 'ಹಾಸಿಗೆ ಹಂಚಿಕೆ ಮಾಡಿದ ತಕ್ಷಣವೇ ಈ ಮಾಹಿತಿಯ ಎಸ್‌ಎಂಎಸ್ ನೇರವಾಗಿ ರೋಗಿಯ ಕಡೆಯವರ ಮೊಬೈಲ್‌ಗೆ ಹಾಗೂ ಆಸ್ಪತ್ರೆಯ ನೋಡಲ್ ಅಧಿಕಾರಿಗೆ ರವಾನೆ ಆಗಲಿದೆ' ಎಂದು ತಿಳಿಸಿದರು. ಆದರೆ, ಈ ವ್ಯವಸ್ಥೆಯು ಹಿಂದೆಯೂ ಇತ್ತು.

### ಸ್ವಾಗತಾರ್ಹ ಸುಧಾರಣೆಗಳು

- ರೋಗಿಗಳನ್ನು ದಾಖಲಿಸಿಕೊಳ್ಳುವಾಗ ಹಾಗೂ ಬಿಡುಗಡೆ ಮಾಡುವಾಗ ಆಧಾರ್ ಸಂಯೋಜಿತ ಬಯೋಮೆಟ್ರಿಕ್ ಅಥವಾ ಓಟಿಪಿ ಬಳಕೆ ವ್ಯವಸ್ಥೆ ಜಾರಿಯಾಗಲಿದೆ. ಬಿಡುಗಡೆಯಾದ ರೋಗಿಯ ಹಾಸಿಗೆಯನ್ನು ಖಾಸಗಿಯಾಗಿ ದಾಖಲಾದ ರೋಗಿಗಳ ಚಿಕಿತ್ಸೆಗೆ ಗುಟ್ಟಾಗಿ ಬಳಸಿಕೊಳ್ಳುವುದನ್ನು ಇದು ತಡೆಯಲಿದೆ.
- ಈ ಹಿಂದೆ ವಾರ್ ರೂಂನ ಯಾವ ಸಿಬ್ಬಂದಿ ಯಾರಿಗೆ ಹಾಸಿಗೆ ಕಾಯ್ದಿರಿಸಿದ್ದಾರೆ ಎಂಬುದು ಯಾರಿಗೂ ತಿಳಿಯುತ್ತಿರಲಿಲ್ಲ. ಅಕ್ರಮ ನಡೆದಾಗ ಪತ್ತೆ ಹಚ್ಚುವುದು ಕಷ್ಟವಾಗುತ್ತಿತ್ತು. ಇನ್ನು ಹಾಸಿಗೆ ಬುಕ್ ಮಾಡಿದ ಸಿಬ್ಬಂದಿಯ ಹೆಸರು ರೋಗಿಯ ಹೆಸರಿನ ಜೊತೆ ನಮೂದಾಗಲಿದೆ.
- ರೋಗಿ ದಾಖಲಾಗಿ 15 ದಿನಗಳ ಬಳಿಕವೂ ಅದೇ ವ್ಯಕ್ತಿಯ ಹೆಸರಿನಲ್ಲೇ ಹಾಸಿಗೆ ಬಳಕೆಯಾಗುತ್ತಿದ್ದರೆ, ಮಾಹಿತಿ ಡ್ಯಾಶ್‌ಬೋರ್ಡ್‌ನಲ್ಲೇ ಕಾಣಿಸಲಿದೆ.
- ಸಹಾಯವಾಣಿಗೆ ರೋಗಿಗಳ ಕಡೆಯವರಿಂದ ಬರುವ ಕರೆಗಳ ವಿವರವನ್ನು ಲಿಖಿತವಾಗಿ ದಾಖಲಿಸುವ ಪಾರದರ್ಶಕವಲ್ಲದ ವಿಧಾನವು ಹಲವು ಹಸ್ತಕ್ಷೇಪಗಳಿಗೆ ಅವಕಾಶ ಕಲ್ಪಿಸಿತ್ತು. ಇದಕ್ಕಿನ್ನು ಅವಕಾಶವಿಲ್ಲ

### ಸುಧಾರಣಾ ಸೂತ್ರ ತಂದೊಡ್ಡುವ ಸಮಸ್ಯೆಗಳು

ಹಾಸಿಗೆ ಹಂಚಿಕೆ ವ್ಯವಸ್ಥೆಯ ಬದಲಾವಣೆ ಏನೆಲ್ಲ ಸಮಸ್ಯೆಗಳು ಎದುರಾಗಲಿವೆ ಎಂಬ ವಿಶ್ಲೇಷಣೆ ಇಲ್ಲಿದೆ

**ಸುಧಾರಣೆ:** ಒಬ್ಬ ರೋಗಿಗೆ ಒಮ್ಮೆ ಹಾಸಿಗೆ ಕಾಯ್ದಿರಿಸಿದ ಬಳಿಕ ಅದನ್ನು ಮ್ಯಾನುವಲ್ ಆಗಿ ಅನ್‌ಬ್ಲಾಕ್ ಮಾಡುವ ಪದ್ಧತಿ ಕೈಬಿಡಲಾಗಿದೆ.

**ಆಗಲಿರುವ ಸಮಸ್ಯೆ:** ಹಾಸಿಗೆ ಬುಕ್ ಮಾಡಿದ ತುಸು ಹೊತ್ತಿನಲ್ಲೇ ರೋಗಿ ಸತ್ತರೂ ಅಂತಹ ಹಾಸಿಗೆಯನ್ನು ಅನ್‌ಬ್ಲಾಕ್ ಮಾಡಿ ತುರ್ತು ಅಗತ್ಯ ಇರುವ ಬೇರೆ ರೋಗಿಗಳಿಗೆ ತಕ್ಷಣ ಹಂಚಿಕೆ ಮಾಡಲು ಸಾಧ್ಯವಿಲ್ಲ. ಜೀವ ಉಳಿಸಲು ಬಳಕೆಯಾಗಬೇಕಾದ ಐಸಿಯುವಿನಂತಹ ಹಾಸಿಗೆ ವೃಥಾ ತಾಸುಗಟ್ಟಲೆ ಖಾಲಿ ಉಳಿಯಲಿದೆ.

**ಸುಧಾರಣೆ:** ಹಾಸಿಗೆ ಕಾಯ್ದಿರಿಸಿದ ಬಳಿಕ 10 ಗಂಟೆ ಒಳಗೆ ರೋಗಿಯನ್ನು ಸಂಬಂಧಪಟ್ಟ ಆಸ್ಪತ್ರೆಗೆ ದಾಖಲಿಸಲಿದ್ದರೆ ಬುಕಿಂಗ್ ತನ್ನಿಂದ ತಾನೆ ರದ್ದಾಗುತ್ತಿತ್ತು. ಇನ್ನು ನಾಲ್ಕೇ ಗಂಟೆಗಳಲ್ಲೇ ರದ್ದಾಗಲಿದೆ.

**ಎದುರಾಗುವ ಸಮಸ್ಯೆ:** ಸಾಮಾನ್ಯ ಹಾಸಿಗೆಯಲ್ಲಿದ್ದ ರೋಗಿಯನ್ನು ತುರ್ತಾಗಿ ಐಸಿಯುಗೆ ವರ್ಗಾಯಿಸಬೇಕಾದಾಗ ಬಿಡುಗಡೆ ಪ್ರಕ್ರಿಯೆ ಪೂರ್ಣಗೊಳಿಸಲು ಸಮಯ ತಗಲುತ್ತದೆ. ರೋಗಿಯನ್ನು ಸ್ಥಳಾಂತರಿಸುವುದಕ್ಕೆ ತಕ್ಷಣಕ್ಕೆ ಆಂಬುಲೆನ್ಸ್ ಸಿಗದಿದ್ದರೆ ನಾಲ್ಕು ತಾಸಿನ ಒಳಗೆ ರೋಗಿಯನ್ನು ಮತ್ತೊಂದು ಆಸ್ಪತ್ರೆಗೆ ದಾಖಲಿಸಲು ಸಾಧ್ಯವಾಗದು. ಅಷ್ಟರಲ್ಲಿ ಹಂಚಿಕೆ ರದ್ದಾದರೆ ರೋಗಿಯ ಜೀವವೇ ಅಪಾಯಕ್ಕೆ ಸಿಲುಕಲಿದೆ. ಐಸಿಯುಗೆ ರೋಗಿಯನ್ನು ಸಾಗಿಸಲು ಆಮ್ಲಜನಕ ವ್ಯವಸ್ಥೆಯುಳ್ಳ ಆಂಬುಲೆನ್ಸ್‌ಗಳು ತಾಸುಗಟ್ಟಲೆ ಕಾದರೂ ಸಿಗದ ಸ್ಥಿತಿ ನಗರದಲ್ಲಿದೆ.

ಸಂಸದ ತೇಜಸ್ವಿಸೂರ್ಯ ಸ್ಪಷ್ಟನೆ • ಹಾಸಿಗೆ ಮಾರಾಟ ದಂಧೆಯ ತನಿಖೆ ಹಳ್ಳಹಿಡಿಸಲು ಕಾಂಗ್ರೆಸ್ ಯತ್ನ– ಆರೋಪ

## ಯಾವುದೇ ಕೋಮಿನ ಸಿಬ್ಬಂದಿಯನ್ನು ಗುರಿಯಾಗಿಸಿಲ್ಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬಿಬಿಎಂಪಿ ದಕ್ಷಿಣ ವಲಯದ ವಾರ್ ರೂಮಿಗೆ ಭೇಟಿ ನೀಡಿದಾಗ ನಿರ್ದಿಷ್ಟ ಕೋಮಿನ ಸಿಬ್ಬಂದಿಯನ್ನು ಗುರಿಯಾಗಿಸಿ ಆರೋಪ ಹೊರಿಸಿಲ್ಲ. ಆ ಸಮುದಾಯದ ಹೆಸರನ್ನೂ ನಾನು ಹೇಳಿಲ್ಲ. ಅಂದು 16 ಮಂದಿಯನ್ನು ನಾನು ಕೆಲಸದಿಂದ ತೆಗೆಸಿಲ್ಲ' ಎಂದು ಸಂಸದ ತೇಜಸ್ವಿ ಸೂರ್ಯ ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, '16 ಸಿಬ್ಬಂದಿಯ ಹೆಸರನ್ನು ಒಬ್ಬರು ಅಧಿಕಾರಿಯೇ ನನಗೆ ನೀಡಿದ್ದರು. ಇವರನ್ನು ಯಾವ ಆಧಾರದಲ್ಲಿ ನೇಮಿಸಿಕೊಂಡಿರಿ ಎಂದು ಸ್ಪಷ್ಟೀಕರಣ ಕೇಳಿದ್ದೆ. ಆ 16 ಮಂದಿ ಜೊತೆ ಅದೇ ಸಮುದಾಯದ ಇತರ ಸಿಬ್ಬಂದಿಯೂ ಅಲ್ಲಿದ್ದರು. ಅವರ ಹೆಸರನ್ನು ನಾನು ಪ್ರಸ್ತಾಪಿಸಿಲ್ಲ. ಚುನಾಯಿತ ಪ್ರತಿನಿಧಿಯಾಗಿ ಅವ್ಯವಹಾರದ ಬಗ್ಗೆ ಪ್ರಶ್ನೆ ಮಾಡಿದ್ದು ತಪ್ಪೇ' ಎಂದು ಪ್ರಶ್ನಿಸಿದರು.

'ನಾವು ವಾರ್ ರೂಂಗೆ ಭೇಟಿ ನೀಡುವ ಎರಡು ದಿನ ಮೊದಲೇ 16 ಸಿಬ್ಬಂದಿಯನ್ನು ಕೆಲಸದಿಂದ ತೆಗೆಯಲಾಗಿದೆ. ಅವರು ತಾತ್ಕಾಲಿಕ ನೆಲೆಯಲ್ಲಿ ನೇಮಕಗೊಂಡವರು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸ್ಪಷ್ಟಪಡಿಸಿದ್ದಾರೆ. 16 ಮಂದಿಯನ್ನು ಕೆಲಸದಿಂದ ಏಕೆ ತೆಗೆದರು. ಮತ್ತೆ ನೇಮಿಸಿಕೊಂಡಿದ್ದೇಕೆ ಎಂದು ಬಿಬಿಎಂಪಿಯೇ ಸ್ಪಷ್ಟಪಡಿಸಬೇಕು. ನನಗೂ ಅದಕ್ಕೂ ಸಂಬಂಧ ಇಲ್ಲ' ಎಂದರು.

'ಹಾಸಿಗೆ ಮಾರಾಟ ದಂಧೆಯ ಗಂಭೀರ ವಿಚಾರದ ತನಿಖೆಯ ದಾರಿ ತಪ್ಪಿಸಲು ಕಾಂಗ್ರೆಸ್‌ನವರು ಈ ಪ್ರಕರಣದ ಹಿಂದೆ 'ಕೋಮುವಾದ' ಅಡಗಿದೆ ಎಂದು ಸುಳ್ಳು ಆರೋಪ ಮಾಡಿದರು. ವ್ಯವಸ್ಥೆಯ ಬದಲಾವಣೆಗೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ನಿರ್ದಿಷ್ಟ ಸಮುದಾಯವನ್ನು ಗುರಿ ಪಡಿಸುವುದಾದರೆ ನೇತ್ರಾವತಿ ಹಾಗೂ ರೋಹಿತ್ ಅವರ ಬಂಧನ ಮಾಡಿಸುತ್ತಿದ್ದೆವಾ' ಎಂದು ಪ್ರಶ್ನಿಸಿದರು.

ದಾಳಿ ಸಂದರ್ಭದಲ್ಲಿ 'ನೀವು ಮದರಸಾ ನಡೆಸುತ್ತಿದ್ದೀರಾ, ಕಾರ್ಪೊರೇಷನ್ ನಡೆಸುತ್ತಿದ್ದೀರಾ' ಎಂದು ಪ್ರಶ್ನೆ ಮಾಡಿದ್ದು ಸರಿಯೇ ಎಂಬ ಪ್ರಶ್ನೆಗೆ, 'ನಾನು ಆ ಪದ ಬಳಸಿಲ್ಲ. ಅದಕ್ಕೆ ನಾನು ಹೊಣೆ ಅಲ್ಲ. ಈ ಪ್ರಕರಣದಲ್ಲಿ ಧರ್ಮವನ್ನು ತಂದಿದ್ದು ನಾನಲ್ಲ. ಇದನ್ನು ನಂಬುವವರು ನಂಬಬಹುದು, ಬಿಡುವವರು ಬಿಡಬಹುದು' ಎಂದರು.

ಯಾರೋ ಅಧಿಕಾರಿ ನೀಡಿದ ಪಟ್ಟಿಯನ್ನು ನೀವೇಕೆ ಓದಬೇಕಿತ್ತು. ಇದರಿಂದ ತಪ್ಪು ಸಂದೇಶ ರವಾನೆ ಆಗುವುದಿಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸಲಿಲ್ಲ. 'ಜನ ನನ್ನನ್ನು ಗೆಲ್ಲಿಸಿದ್ದಾರೆ. ನನ್ನ ಬದ್ಧತೆ ಏನಿದ್ದರೂ ನನ್ನ ಜನಕ್ಕೆ' ಎಂದರು.

'ತಮ್ಮ ಕ್ಷೇತ್ರದ ಆಸ್ಪತ್ರೆಗಳಲ್ಲಿ ಸ್ಥಳೀಯ ರೋಗಿಗಳಿಗೆ ಆದ್ಯತೆ ಮೇರೆಗೆ ಹಾಸಿಗೆ ಕೊಡಿಸುವಂತೆ ಶಾಸಕ ಸತೀಶ ರೆಡ್ಡಿ ಕೇಳಿದ್ದು ತಪ್ಪಲ್ಲ' ಎಂದು ಅಭಿಪ್ರಾಯಪಟ್ಟರು.

### 'ಕೋಮುವಾದಿ ಹೇಳಿಕೆ ನೀಡಿಯೇ ಇಲ್ಲ'

'ಅವ್ಯವಹಾರ ಬೆಳಕಿಗೆ ತಂದ ಬಳಿಕ ವಾರ್ ರೂಂಗೆ ಭೇಟಿ ನೀಡಿ ಅಲ್ಲಿನ ಸಿಬ್ಬಂದಿ ಜೊತೆ ಮಾತನಾಡಿದ್ದು ನಿಜ. ಅಲ್ಲಿನ ಸಿಬ್ಬಂದಿಯ ಹೆಸರು ಮತ್ತು ಮೊಬೈಲ್ ಸಂಖ್ಯೆಗಳಿದ್ದ ಪಟ್ಟಿಯನ್ನು ಯಾರೋ ಬಹಿರಂಗ ಪಡಿಸಿದ್ದರಿಂದ ಕೆಲವು ಮಹಿಳಾ ಸಿಬ್ಬಂದಿಗೆ ಸಮಸ್ಯೆಯಾಗಿದೆ. ಇದಕ್ಕಾಗಿ ಕ್ಷಮಿಸುವಂತೆ ಹೇಳಿದ್ದೇನೆ. ನಾನು ಕೋಮ ಆಧಾರದ ಹೇಳಿಕೆ ನೀಡಿಯೇ ಇಲ್ಲ. ಹಾಗಾಗಿ ಈ ಬಗ್ಗೆ ನಾನೇಕೆ ಕ್ಷಮೆ ಕೇಳಬೇಕು' ಎಂದು ತೇಜಸ್ವಿ ಸೂರ್ಯ ಪ್ರಶ್ನಿಸಿದರು.

'ವಾರ್ ರೂಂ ಸಿಬ್ಬಂದಿಯ ಪಟ್ಟಿಯನ್ನು ಬಹಿರಂಗ ಪಡಿಸಿದವರನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳುವಂತೆ ಹಾಗೂ ಅಲ್ಲಿನ ಸಿಬ್ಬಂದಿಗೆ ಹೊಸ ಸಿಮ್ ಕಾರ್ಡ್ ಕೊಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದರು.

**'ಕಸಬ್‌ಗಿಂತಲೂ ಕೆಟ್ಟ ಉಗ್ರ ಎಂದು ಬಿಂಬಿಸಿದರು':** 'ವ್ಯವಸ್ಥೆ ಬದಲಾಯಿಸಲು ಹಾಗೂ ಜನರಿಗೆ ನ್ಯಾಯ ಕೊಡಿಸಲು ಪ್ರಯತ್ನಿಸಿದ್ದಕ್ಕೆ ನನ್ನನ್ನು ಅಜ್ಮಲ್ ಕಸಬ್‌ಗಿಂತಲೂ ಕೆಟ್ಟ ಉಗ್ರ ಎಂದು ಬಿಂಬಿಸಿದರು. ಕೆಲವು ಪತ್ರಿಕೆಗಳು ನನ್ನ ವಿರುದ್ಧ ಸಂಪಾದಕೀಯ ಬರೆದು ದಾಳಿ ನಡೆಸಿದವು' ಎಂದು ತೇಜಸ್ವಿ ಸೂರ್ಯ ನೋವು ತೋಡಿಕೊಂಡರು.



ಸೋನಿಯಾ ಗಾಂಧಿ | ರಾಹುಲ್‌ಗಾಂಧಿ | ಮಲ್ಲಿಕಾರ್ಜುನ ಖರ್ಗೆ | ಜಿ. ಪರಮೇಶ್ವರ್ | ಡಿ.ಕೆ. ಶಿವಕುಮಾರ | ದಿನೇಶ ಗುಂಡೂರಾವ್ | ರಾಮಲಿಂಗಾರೆಡ್ಡಿ | ಈಶ್ವರ ಖಂಡ್ರೆ | ಕೃಷ್ಣ ಬೈರೇಗೌಡ | ಜಮೀರ್ ಅಹ್ಮದ್ | ಬಿ.ಕೆ. ಹರಿಪ್ರಸಾದ್

## ಸುದ್ದಿ 2 ನಿಮಿಷ

### 'ಖಾಸಗಿ ಆಂಬುಲೆನ್ಸ್‌ಗಳು ಅಧಿಕ ದರ ಪಡೆದರೆ ಕ್ರಮ'

**ಬೆಂಗಳೂರು:** ಖಾಸಗಿ ಆಂಬುಲೆನ್ಸ್‌ಗಳು ಸರ್ಕಾರ ನಿಗದಿ ಮಾಡಿದ ದರವನ್ನೇ ಪಡೆಯಬೇಕು, ಹೆಚ್ಚು ವಸೂಲಿ ಮಾಡಿದರೆ ಪರವಾನಗಿ ರದ್ದು ಮಾಡುವುದಾಗಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಹೇಳಿದ್ದಾರೆ.

ಈ ಸಂಬಂಧ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಮತ್ತು ಅಧಿಕಾರಿಗಳ ಜತೆ ನಡೆಸಿದ ಸಭೆಯಲ್ಲಿ ಖಾಸಗಿ ಆಂಬುಲೆನ್ಸ್ ನಿರ್ವಾಹಕರಿಗೆ ಅವರು ಕಠಿಣ ಸಂದೇಶ ರವಾನಿಸಿದರು.

ಖಾಸಗಿ ಆಂಬುಲೆನ್ಸ್‌ಗಳಿಗೆ ಏಕರೂಪದ ದರವನ್ನು ನಿಗದಿ ಮಾಡಲಾಗುವುದು. ಅದನ್ನು ಕಡ್ಡಾಯವಾಗಿ ಪಾಲಿಸಬೇಕು. ಶೀಘ್ರವೇ ದರಪಟ್ಟಿ ಬಿಡುಗಡೆ ಮಾಡಲಾಗುವುದು ಎಂದು ಸವದಿ ತಿಳಿಸಿದರು.

### 'ಜನರ ಪ್ರಾಣ ರಕ್ಷಣೆಗೆ ಆದ್ಯತೆ'



**ಬೆಂಗಳೂರು:** ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆಯ ನಿಯಂತ್ರಣಕ್ಕೆ ಬಿಜೆಪಿ ಮತ್ತು ರಾಜ್ಯ ಸರ್ಕಾರ ಸಮನ್ವಯತೆಯಿಂದ ಕಾರ್ಯ ನಿರ್ವಹಿಸಲಿದ್ದು, ಜನರ ಪ್ರಾಣ ರಕ್ಷಿಸಲು ಗರಿಷ್ಠ ಆದ್ಯತೆ ನೀಡಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಜತೆ ಮಾತುಕತೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಸೂಚನೆಯ ಮೇರೆಗೆ ಸೇವಾ ಹಿ ಸಂಘಟನ್ ಚಿಂತನೆಯಡಿ ರಾಜ್ಯದಲ್ಲಿ ಪಕ್ಷವು ಕಾರ್ಯೋನ್ಮುಖವಾಗಿದೆ ಎಂದರು.

ಈಗಾಗಲೇ ಕೋವಿಡ್ ಸಹಾಯವಾಣಿ, ನಿಯಂತ್ರಣ ಕೊಠಡಿ ತೆರೆಯಲಾಗಿದೆ. ವೈದ್ಯಕೀಯ ಕಿಟ್‌ಗಳ ವಿತರಣೆ, ಆಹಾರ ಪೊಟ್ಟಣಗಳ ವಿತರಣೆ, ರಕ್ತದಾನ ಶಿಬಿರಗಳ ಸಂಘಟನೆ ಮಾಡಿರುವುದರ ಬಗ್ಗೆ ಮುಖ್ಯಮಂತ್ರಿಯವರಿಗೆ ಮಾಹಿತಿ ನೀಡಲಾಯಿತು.

ಕೋವಿಡ್ ನಿಯಂತ್ರಣಕ್ಕಾಗಿ ರಾಜ್ಯ ಸರ್ಕಾರವು ಲೌಕ್‌ಡೌನ್ ವಿಸ್ತರಿಸಿರುವುದು ಮತ್ತು ಗ್ರಾಮೀಣ ಪ್ರದೇಶದಲ್ಲಿ ಕೋವಿಡ್ ಸಮಸ್ಯೆ ಬಾಧಿಸದಂತೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಲಾಯಿತು ಎಂದು ಹೇಳಿದರು.

ಜನರು ನಮಗೆ ಜನಸೇವೆಗಾಗಿ ಆಶೀರ್ವಾದ ಮಾಡಿದ್ದಾರೆ. ಅದನ್ನು ಆದ್ಯತೆಯಿಂದ ನಿರ್ವಹಿಸಲಿದ್ದೇವೆ. ಸರ್ಕಾರ ಮತ್ತು ಪಕ್ಷವು 37 ಸಂಘಟನಾತ್ಮಕ ಜಿಲ್ಲೆಗಳಲ್ಲಿ ಕೋವಿಡ್ ನಿರ್ವಹಣೆಗೆ ವಿಶೇಷ ಮುತುವರ್ಜಿಯಿಂದ ಕೆಲಸ ಮಾಡುತ್ತಿದೆ ಎಂದು ಕಟೀಲ್ ಹೇಳಿದರು.

**ನಾಯಕತ್ವ ಬದಲಾವಣೆ ಇಲ್ಲ:** ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ. ಈಗ ರಾಜಕಾರಣ ಮಾಡುವ ಕೆಲಸಗಳಿಲ್ಲ. ಕೋವಿಡ್ ನಿಯಂತ್ರಿಸುವುದೊಂದೇ ಪ್ರಥಮ ಕೆಲಸ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಕೋವಿಡ್ ಪೀಡಿತರ ಆರೈಕೆ ಮತ್ತು ಪ್ರಾಣದ ರಕ್ಷಣೆ ಪ್ರಥಮ ಆದ್ಯತೆ ಆಗಿದೆ. ಆ ಕೆಲಸಕ್ಕೆ ಶಾಸಕರು, ಸಚಿವರು ಮತ್ತು ಪಕ್ಷದ ಮುಖಂಡರು ಹೆಚ್ಚಿನ ಒತ್ತು ನೀಡಲಿದ್ದಾರೆ ಎಂದೂ ಹೇಳಿದರು.

# ಮೂರನೇ ಅಲೆ ತಡೆಯಲು ಕಾರ್ಯಪಡೆ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಮೂರನೇ ಅಲೆ ನಿಭಾಯಿಸಲು ಈಗಿನಿಂದಲೇ ಸಿದ್ಧರಾಗಬೇಕಿದ್ದು, ತಕ್ಷಣವೇ ಅದಕ್ಕೊಂದು ಕಾರ್ಯಪಡೆ ಸಮಿತಿ ರಚಿಸುವಂತೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೋವಿಡ್ ಎರಡನೇ ಅಲೆ ನಿಯಂತ್ರಣದ ಕುರಿತು ಕಾವೇರಿಯಲ್ಲಿ ಸಚಿವರು ಮತ್ತು ಅಧಿಕಾರಿಗಳ ಜತೆ ಏರ್ಪಡಿಸಿದ್ದ ಸಭೆಯಲ್ಲಿ ಮೂರನೇ ಅಲೆಯ ಮುನ್ನೆಚ್ಚರಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಅದನ್ನು ಸಮರ್ಥವಾಗಿ ನಿಯಂತ್ರಿಸಲು ಕಾರ್ಯತಂತ್ರ ರೂಪಿಸಬೇಕು ಎಂದು ಹೇಳಿದರು.

ಸಚಿವರು ತಮಗೆ ಉಸ್ತುವಾರಿ ನೀಡಿರುವ ಜಿಲ್ಲೆಗಳಲ್ಲಿ ಮತ್ತು ಶಾಸಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ವಾಸ್ತವ್ಯ ಹೂಡಿ ಕೊರೊನಾ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಬೇಕು. ಸಚಿವರು ಜಿಲ್ಲೆಗಳಲ್ಲಿ ಯಾವುದಕ್ಕೂ ಕೊರತೆ ಆಗದಂತೆ ನೋಡಿಕೊಳ್ಳಬೇಕು. ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಬೇಕು ಎಂದು ಹೇಳಿದರು.

ಲಾಕ್‌ಡೌನ್ ಮಾರ್ಗಸೂಚಿಗಳನ್ನು ಸಾರ್ವಜನಿಕರು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳಬೇಕು. ಅನಗತ್ಯವಾಗಿ ಓಡಾಡುವುದನ್ನು ತಪ್ಪಿಸಬೇಕು. ತುರ್ತು ಅಗತ್ಯವಿರುವ ರೋಗಿಗಳಿಗೆ ಬೆಡ್ ಹಂಚಿಕೆಗೆ ಕ್ರಮವಹಿಸುವುದು ಮತ್ತು ರೆಮ್‌ಡಿಸಿವಿರ್ ಅನ್ನು ಅಗತ್ಯಕ್ಕೆ ಅನುಸಾರ ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲು ಸೂಚನೆ ನೀಡಿದರು.

ಖಾಸಗಿ ಆಸ್ಪತ್ರೆ ಬೆಡ್‌ಗಳ ಬಗ್ಗೆ ನಿಗಾ ಇಡಬೇಕು. ಆಮ್ಲಜನಕ, ರೆಮ್‌ಡಿಸಿವಿರ್ ಹಾಗೂ ಬೆಡ್ ಸೇರಿದಂತೆ ಇತರ ವಿಷಯಗಳಲ್ಲಿ ಅಕ್ರಮ ಕಂಡು ಬಂದರೆ ಕೈಗೊಳ್ಳಬೇಕು. ವಾರ್ ರೂಮ್‌ಗಳು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯ ಎಂದರು.

ಹಂತ- ಹಂತವಾಗಿ ವೈದ್ಯಕೀಯ ಕಾಲೇಜುಗಳಿಗೆ ಮತ್ತು ಆಸ್ಪತ್ರೆಗಳಿಗೆ ಆಮ್ಲಜನಕ ಉತ್ಪಾದನಾ ಘಟಕಗಳನ್ನು ಹಾಕಲು ಈಗಿನಿಂದಲೇ ಕೆಲಸ ಶುರು ಮಾಡಲು ಯಡಿಯೂರಪ್ಪ ಸೂಚಿಸಿದರು.

# ‘ನೆಲಮಂಗಲಕ್ಕೆ 45 ಆಮ್ಲಜನಕ ಸಿಲಿಂಡರ್ ಪೂರೈಕೆ’

ಪ್ರಜಾವಾಣಿ ವಾರ್ತೆ

**ನೆಲಮಂಗಲ:** ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ವಿಶ್ವೇಶ್ವರಪುರ ಟಿಬೇಟಿಯನ್ ಕೌಶಲ ಕೇಂದ್ರದಲ್ಲಿ ತೆರೆದಿರುವ ಕೋವಿಡ್ ಆರೈಕೆ ಕೇಂದ್ರಗಳನ್ನು ಪರಿಶೀಲಿಸಿದ ಕಂದಾಯ ಸಚಿವ ಆರ್. ಅಶೋಕ, ಸೋಂಕಿತ ರೋಗಿಗಳು ಹಾಗೂ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

‘ಅಮೆರಿಕದಿಂದ ಮಂಗಳವಾರ ಆಮ್ಲಜನಕ ಬರುತ್ತಿದ್ದು, 45 ಸಿಲಿಂಡರ್‌ಗಳನ್ನು ನೆಲಮಂಗಲಕ್ಕೆ ಕಳುಹಿಸಿಕೊಡಲಾಗುವುದು. ಶೀಘ್ರದಲ್ಲಿ 100 ಸಿಲಿಂಡರ್ ಒದಗಿಸಲಾಗುವುದು. ರಾಜ್ಯದ ಎಲ್ಲ ತಾಲ್ಲೂಕಿನಲ್ಲೂ 100 ಆಮ್ಮಜನಕ ಹಾಸಿಗೆ ವ್ಯವಸ್ಥೆಗೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದರು.



ಸಚಿವ ಆರ್. ಅಶೋಕ ಅವರು ನೆಲಮಂಗಲ ಸಾರ್ವಜನಿಕ ಆಸ್ಪತ್ರೆ ಪರಿಶೀಲಿಸಿದರು. ಶಾಸಕ ಡಾ.ಕೆ.ಶ್ರೀನಿವಾಸಮೂರ್ತಿ ಇದ್ದಾರೆ

‘ಬೇಗೂರಿನ ಸಿದ್ದಾರ್ಥ ವೈದ್ಯಕೀಯ ಕಾಲೇಜಿನಲ್ಲಿ ಸಮರ್ಪಕ ಚಿಕಿತ್ಸೆ ದೊರೆಯುತ್ತಿಲ್ಲ ಎಂದು ದೂರುಗಳು ಬಂದಿದ್ದು, ವೈದ್ಯರು ಮತ್ತು ಸಿಬ್ಬಂದಿ ಗೈರಾಗಿರುವುದು ಸಮಸ್ಯೆಗೆ ಕಾರಣ ಎಂದು ತಿಳಿದು ಬಂದಿದೆ. ವೈದ್ಯರಿಗೆ ನೋಟಿಸ್ ನೀಡಲಾಗುವುದು. ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಮಾನ್ಯತೆ ರದ್ದುಗೊಳಿಸಿ, ಸೋಂಕಿತ ರೋಗಿಗಳಿಗೆ ಬೇರೆಡೆ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗುವುದು’ ಎಂದರು.

‘ಪರೀಕ್ಷೆ ಮಾಡಿಸಿಕೊಳ್ಳದಿರುವುದು, ಸೋಂಕು ಇರುವವರು ಫೋನ್ ಆಫ್ ಮಾಡಿಕೊಂಡಿರುವುದು, ಜನ ಆಡಿಕೊಳ್ಳುತ್ತಾರೆ ಎಂದು ಚಿಕಿತ್ಸೆಗೆ ಬರುತ್ತಿಲ್ಲ, ಇಂತಹವರಿಂದ ಸೋಂಕು ಹರಡುವುದು ಹೆಚ್ಚುತ್ತಿದೆ. ಸಮಸ್ಯೆ ತೀವ್ರವಾದಾಗ ಚಿಕಿತ್ಸೆಗೆ ಬರುತ್ತಿದ್ದಾರೆ. ಆಮ್ಲಜನಕ ಸೌಲಭ್ಯದ ಹಾಸಿಗೆ ಅವಶ್ಯಕತೆ ಇಲ್ಲದವರು ಅವಶ್ಯವಿರುವವರಿಗೆ ಬಿಟ್ಟುಕೊಡಬೇಕು. ಸುಮ್ಮನೆ ಆಸ್ಪತ್ರೆಗಳನ್ನು ಸುತ್ತುವ ಬದಲು ಆರೈಕೆ ಕೇಂದ್ರದಲ್ಲಿ ದಾಖಲಾಗಿ ಹೆಚ್ಚಿನ ಚಿಕಿತ್ಸೆ ಬೇಕಾದಲ್ಲಿ ಬೇರೆಡೆಗೆ ವರ್ಗಾಯಿಸಲಾಗುವುದು, ಸಮಸ್ಯೆ ಸೃಷ್ಟಿಸುವುದು ಬೇಡ’ ಎಂದರು.

ಶಾಸಕ ಡಾ.ಕೆ.ಶ್ರೀನಿವಾಸಮೂರ್ತಿ, ಜಿಲ್ಲಾಧಿಕಾರಿ ಶ್ರೀನಿವಾಸ್, ತಹಶೀಲ್ದಾರ್ ಮಂಜುನಾಥ್, ಆರೋಗ್ಯಾಧಿಕಾರಿಗಳಾದ ಹರೀಶ್, ನರಸಿಂಹಯ್ಯ ಇದ್ದರು.

## ‘ಎರಡು ದಿನದಲ್ಲಿ ಕೋವಿಡ್ ಆರೈಕೆ ಕೇಂದ್ರಗಳ ಆರಂಭ’

ಪ್ರಜಾವಾಣಿ ವಾರ್ತೆ


ಎಸ್.ಸುರೇಶ್ ಕುಮಾರ್

**ಬೆಂಗಳೂರು:** ‘ಉತ್ತರಹಳ್ಳಿ, ಜಿಗಣಿ ಹಾಗೂ ಅಂಜನಾಪುರ ವಾರ್ಡ್‌ಗಳಲ್ಲಿ ಒಟ್ಟು 150 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರಗಳು ಎರಡು ದಿನಗಳಲ್ಲಿ ಆರಂಭವಾಗಲಿವೆ’ ಎಂದು ಸಚಿವ ಎಸ್.ಸುರೇಶ್‌ಕುಮಾರ್ ಭಾನುವಾರ ತಿಳಿಸಿದರು.

ಪಾಲಿಕೆಯ ಮಾಜಿ ಸದಸ್ಯರಾದ ಕೆ.ಸೋಮಶೇಖರ್, ಹನುಮಂತಯ್ಯ ಮತ್ತು ಲಲಿತಾ ಟಿ.ನಾರಾಯಣ್ ಅವರು ಕ್ರಮವಾಗಿ ಕ್ಯಾಪಿಟಲ್ ಕ್ಲಬ್ ರೆಸಾರ್ಟ್, ಉತ್ತರಹಳ್ಳಿಯ ಬಿಬಿಎಂಪಿ ಪದವಿ ಪೂರ್ವ ಕಾಲೇಜು ಹಾಗೂ ಗೊಟ್ಟಿಗೆರೆಯ ನಂದಿ ಗಾರ್ಡನ್‌ನಲ್ಲಿ ಆರೈಕೆ ಕೇಂದ್ರಗಳನ್ನು ನಿರ್ಮಿಸಿದ್ದು, ಈ ಕೇಂದ್ರಗಳಿಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ ಪರಿಶೀಲಿಸಿದ ಬಳಿಕ ಮಾತನಾಡಿದರು.

‘ಆಮ್ಲಜನಕ ಸೌಲಭ್ಯವಿರುವ 100 ಹಾಸಿಗೆಗಳು ಬಳಕೆಗೆ ಮುಕ್ತವಾಗಿವೆ. ಇವುಗಳನ್ನು ಬಿಬಿಎಂಪಿಗೆ ಸೋಮವಾರ ಹಸ್ತಾಂತರ ಮಾಡುತ್ತೇವೆ’ ಎಂದು ಶಾಸಕ ಕೃಷ್ಣಪ್ಪ ತಿಳಿಸಿದರು.

ಬೊಮ್ಮನಹಳ್ಳಿ ನೋಡಲ್ ಅಧಿಕಾರಿ ರಾಜೇಂದ್ರಕುಮಾರ್ ಕಟಾರಿಯಾ, ವಲಯ ಜಂಟಿ ಆಯುಕ್ತ ಎಂ.ರಾಮಕೃಷ್ಣ ಇದ್ದರು.

### ಸರ್ಕಾರಕ್ಕೆ ‘ಜನಾಗ್ರಹ ಆಂದೋಲನ’ದ ಒತ್ತಾಯ

# ಲಾಕ್‌ಡೌನ್: ಜನರ ಅಗತ್ಯಗಳನ್ನು ಪೂರೈಸಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಲಾಕ್‌ಡೌನ್ ಜಾರಿ ಮಾಡಿರುವ ಸರ್ಕಾರವು ಜನರ ತುರ್ತು ಅಗತ್ಯಗಳಾದ ಹಾಸಿಗೆ, ಆಮ್ಲಜನಕ, ಲಸಿಕೆ, ಸಮಗ್ರ ಪಡಿತರ ಹಾಗೂ ಆರ್ಥಿಕ ನೆರವು ನೀಡುವ ಪಂಚಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು’ ಎಂದು ಜನಾಗ್ರಹ ಆಂದೋಲನ ಸರ್ಕಾರವನ್ನು ಆಗ್ರಹಿಸಿದೆ.

ಈ ಸಂಬಂಧ ಜನಾಗ್ರಹ ಆಂದೋಲನ ಬೆಂಬಲಿಸಿರುವ 400 ಸಾಮಾಜಿಕ ಕಾರ್ಯಕರ್ತರು ತಮ್ಮ ಸಹಿಯ ಮೂಲಕ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಬೇಡಿಕೆಗಳ ಪತ್ರ ತಲುಪಿಸಿದ್ದಾರೆ.

‘ರಾಜ್ಯದ ಎಲ್ಲ ಗ್ರಾಮಗಳಲ್ಲಿ ಕೊರೊನಾ ಆರೈಕೆ ಕೇಂದ್ರಗಳನ್ನು ಹಾಗೂ ಆಮ್ಲಜನಕ ಸಹಿತ ಹಾಸಿಗೆಗಳ ವ್ಯವಸ್ಥೆ ಮಾಡಬೇಕು. ಪ್ರತಿದಿನ ಬೇಡಿಕೆಗೆ ತಕ್ಕಂತೆ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಎಲ್ಲ ವಯೋಮಾನದವರಿಗೂ ಉಚಿತವಾಗಿ ಲಸಿಕೆ ನೀಡಬೇಕು. ಪ್ರತಿ ಕುಟುಂಬಕ್ಕೆ ಸಮಗ್ರ ಪಡಿತರ ಕಿಟ್‌ಗಳನ್ನು ಉಚಿತವಾಗಿ ವಿತರಿಸಬೇಕು’.


ಜನಾಗ್ರಹ ಆಂದೋಲನದ ಕಾರ್ಯಕರ್ತ ವರದರಾಜೇಂದ್ರ ಅವರು ತುರ್ತು ಆಗ್ರಹ ಪತ್ರವನ್ನು ಮುಖ್ಯಮಂತ್ರಿಗಳ ವಿಶೇಷ ಅಧಿಕಾರಿ ಸತೀಶ್ ಅವರಿಗೆ ಸೋಮವಾರ ಸಲ್ಲಿಸಿದರು.

‘ಲಾಕ್‌ಡೌನ್‌ನಿಂದ ಕೆಲಸ ಕಳೆದುಕೊಂಡಿರುವ ಅಂಘಟಿತ ಕಾರ್ಮಿಕರು, ಆಟೊ–ಟ್ಯಾಕ್ಸಿ ಚಾಲಕರು, ನೇಕಾರರು, ಕೃಷಿ ಕಾರ್ಮಿಕರು, ಸಣ್ಣ ವ್ಯಾಪಾರಿಗಳು, ಸ್ವಉದ್ಯೋಗಿಗಳಿಗೆ ಮಾಸಿಕ ಕನಿಷ್ಠ ₹5 ಸಾವಿರ ಆರ್ಥಿಕ ನೆರವು ನೀಡಬೇಕು. ಇವು ನೊಂದವರ ಖಾತೆಗಳಿಗೆ ನೇರವಾಗಿ ಜಮಾ ಆಗಬೇಕು. ಕೊರೊನಾದಿಂದ ದುಡಿಯುವ ವ್ಯಕ್ತಿಗಳನ್ನು ಕಳೆದುಕೊಂಡ ಕುಟುಂಬಗಳಿಗೆ ತಲಾ ₹5ಲಕ್ಷ ಪರಿಹಾರ ಧನ ವಿತರಿಸಬೇಕು’ ಎಂದು ಆಗ್ರಹಿಸಿದೆ.

‘ಈ ಎಲ್ಲ ಕ್ರಮಗಳಿಗೆ ಹಣ ಹೊಂದಿಸಲು, ರಾಜ್ಯದ ಕಾರ್ಪೊರೇಟ್ ವಹಿವಾಟಿನ ಮೇಲೆ ಶೇ 2ರಷ್ಟು ‘ಕೊರೊನಾ ಸೆಸ್’ ವಿಧಿಸಬಹುದು. ರಾಜ್ಯದಲ್ಲಿರುವ ಕೋಟ್ಯಾಧಿಪತಿಗಳು, ಉದ್ದಿಮೆದಾರರು ಹಾಗೂ ರಾಜಕಾರಣಿಗಳ ವಾರ್ಷಿಕ ಆದಾಯ ಶೇ 5ರಷ್ಟನ್ನು ಸುಂಕವಾಗಿ ಸಂಗ್ರಹಿಸಿ ಅದನ್ನು ಕೋವಿಡ್ ನಿರ್ವಹಣೆಗೆ ಬಳಸಿಕೊಳ್ಳಿ’ ಎಂದು ಸಲಹೆ ನೀಡಿದೆ.

ಮೇ.6ರಂದು ಆರಂಭಗೊಂಡ ಈ ಆಂದೋಲನಕ್ಕೆ ಸ್ವಾತಂತ್ರ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ಸಾಹಿತಿ ಬರಗೂರು ರಾಮಚಂದ್ರಪ್ಪ, ಮಾವಳ್ಳಿ ಶಂಕರ್, ಬಿ.ಟಿ. ಲಲಿತಾನಾಯ್ಕ್, ಕೆ.ಎಲ್. ಅಶೋಕ್ ಸೇರಿದಂತೆ ಹಲವು ಸಾಮಾಜಿಕ ಕಾರ್ಯಕರ್ತರು ಬೆಂಬಲ ಸೂಚಿಸಿದ್ದಾರೆ.

ಮನಬಂದಂತೆ ಥಳಿಸಲು ಇವರಿಗೆ ಅಧಿಕಾರ ಕೊಟ್ಟವರಾರು– ನಾಗರಿಕರ ಪ್ರಶ್ನೆ

# ಲಾಠಿ ಪ್ರಹಾರ ವಿರುದ್ಧ ಕಟ್ಟೆಯೊಡೆದ ಆಕ್ರೋಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಸೋಮವಾರ ಲಾಕ್‌ಡೌನ್ ನಿರ್ಬಂಧಗಳ ಹೆಸರಿನಲ್ಲಿ ನಾಗರಿಕರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದರು. ಪೊಲೀಸರ ಅಮಾನವೀಯ ನಡೆಗೆ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಯಿತು.

ಬೆಳಿಗ್ಗೆ 10ರಿಂದ ಲಾಕ್‌ಡೌನ್ ಜಾರಿಯಾಗಲಿದೆ ಎಂದು ಸರ್ಕಾರ ಹೇಳಿದ್ದರೂ, ಬೆಳಿಗ್ಗೆ 7ರಿಂದಲೇ ಪೊಲೀಸರು ಬೀದಿಗೆ ಇಳಿದಿದ್ದರು. ಅನಗತ್ಯವಾಗಿ ವಾಹನಗಳಲ್ಲಿ ಸಂಚರಿಸುತ್ತಿದ್ದವರನ್ನು ಹೊಡೆಯುವ ಭರದಲ್ಲಿ ಅಮಾಯಕರೂ ಏಟು ತಿನ್ನುವಂತಾಯಿತು.

'ನಾನು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವವನು. ಸರಿಯಾಗಿ ಸಂಬಳ ಸಿಗುತ್ತಿಲ್ಲ. ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡು ಬರಬೇಕು. ಬ್ಯಾಂಕ್ ತೆರೆಯುವುದೇ 10 ಗಂಟೆ ಮೇಲೆ. ನಾನು ಯಾವ ಪಾಸ್ ತೋರಿಸಬೇಕು. ಹೊರಗೆ ಹೋಗಿದ್ದಕ್ಕೆ ಪೊಲೀಸರು ಲಾಠಿಯಿಂದ ಹೊಡೆದರು' ಎಂದು ಪೀಣ್ಯದ ರವಿ ದೂರಿದರು.

'ಮಹಿಳಾ ಪೊಲೀಸ್ ಒಬ್ಬರು ಕೆನ್ನೆಗೆ ಹೊಡೆದರು. ವಿನಾಕಾರಣ ಈ ರೀತಿ ಹೊಡೆಸಿಕೊಳ್ಳಲು ನಾವೇನು ತಪ್ಪು ಮಾಡಿದ್ದೇವೆ' ಎಂದೂ ಅವರು ಅಸಮಾಧಾನ ವ್ಯಕ್ತಪಡಿಸಿದರು.

'ಎಟಿಎಂ ಕಾರ್ಡ್ ಎಲ್ಲ ನಮ್ಮ ಬಳಿ ಇಲ್ಲ. ಬ್ಯಾಂಕ್‌ಗೆ ಹೋಗಿಯೇ ಹಣ ತೆಗೆದುಕೊಳ್ಳಬೇಕು. ಕುವೆಂಪು ನಗರದಲ್ಲಿ ವಾಸವಿದ್ದೇನೆ. ಬ್ಯಾಂಕ್ ಖಾತೆ ಇರುವುದು ಜಾಲಹಳ್ಳಿಯ ಎಸ್‌ಬಿಐ ಶಾಖೆಯಲ್ಲಿ. ನಾಲ್ಕು ಕಿ.ಮೀ. ನಡೆದುಕೊಂಡೇ ಹೋದೆ. ಪೊಲೀಸರು ಬ್ಯಾಂಕಿಗೆ ಹೋಗಲೂ ಅವಕಾಶ ನೀಡಲಿಲ್ಲ' ಎಂದು ಜಾಲಹಳ್ಳಿಯ ಹನುಮಕ್ಕ ಎಂಬುವರು ಅಸಮಾಧಾನ ವ್ಯಕ್ತಪಡಿಸಿದರು.

'ಸರ್ಕಾರವೇ ಆಹಾರ ಕೊಟ್ಟಿದ್ದರೆ ನಾವೇಕೆ ಹೊರಗೆ ಹೋಗುತ್ತಿದ್ದೆವು. ಪಡಿತರ ಕೊಟ್ಟು, ಬಿಪಿಎಲ್ ಕುಟುಂಬಕ್ಕೆ ಎರಡು ಸಾವಿರ ರೂಪಾಯಿ ಆದರೂ ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು. ಅದ್ಯಾವುದನ್ನೂ ಮಾಡದೆ ಲಾಕ್‌ಡೌನ್ ಮಾತ್ರ ಮಾಡುತ್ತಾರೆ. ಮನೆಯಲ್ಲಿ ನಾವು, ಮಕ್ಕಳು ಉಪವಾಸವಿರಬೇಕೇ' ಎಂದೂ ಅವರು ಪ್ರಶ್ನಿಸಿದರು.

'ಬೀದಿ ಬದಿ ವ್ಯಾಪಾರಿಗಳು, ಹಣ್ಣು–ತರಕಾರಿ ವರ್ತಕರ ಮೇಲೆಯೂ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ. ಈ ರೀತಿ ದೌರ್ಜನ್ಯ ನಡೆಯುತ್ತಿದ್ದರೆ ವ್ಯಾಪಾರ ಮಾಡುವುದು ಹೇಗೆ ? ಅಗತ್ಯ ವಸ್ತುಗಳ ಮಾರಾಟಕ್ಕೆ ಅನುಮತಿ ಇದೆ. ಆದರೆ, ವ್ಯಾಪಾರಿಗಳು ಹೊರಗೆ ಓಡಾಡಿದರೆ, ತರಕಾರಿ ಖರೀದಿಸಲು ಹೋದರೂ ಲಾಠಿಯಿಂದ ಹೊಡೆಯಲಾಗುತ್ತಿದೆ' ಎಂದು ಕರ್ನಾಟಕ ಬೀದಿ ಬದಿ ವ್ಯಾಪಾರಿ ಸಂಘಟನೆಗಳ ಅಧ್ಯಕ್ಷ ರಂಗಸ್ವಾಮಿ ದೂರಿದರು.

**ಪ್ರಭಾವಿಗಳಿಗೆ 'ವಿನಾಯಿತಿ':** ಪ್ರಮುಖ ರಸ್ತೆಗಳಲ್ಲಿ ಪೊಲೀಸ್ 'ರೌದ್ರಾವತಾರ'ದ ದೃಶ್ಯ ಸಾಮಾನ್ಯವಾಗಿತ್ತು. 'ಬೈಕ್ ಸವಾರರ ಮೇಲೆ ಮನಬಂದಂತೆ ಲಾಠಿ ಬೀಸುವ ಪೊಲೀಸರು, ಪ್ರಭಾವಿಗಳು ಬಂದರೆ ಅಥವಾ ಯಾರಾದರೂ ಐಷಾರಾಮಿ ಕಾರಿನಲ್ಲಿ ಬಂದರೆ ಹಾಗೆಯೇ ಕಳಿಸಿದರು. ಲಾಕ್‌ಡೌನ್ ಮಾರ್ಗಸೂಚಿಯಲ್ಲಿ ಈ ರೀತಿಯ ಅವಕಾಶವೂ ಇದೆಯೇ' ಎಂದು ಅನೇಕರು ಪ್ರಶ್ನಿಸಿದರು.

**ಪ್ರತಿಜ್ಞೆ ಮಾಡಿಸಿಕೊಂಡರು:** ನಗರದ ಬಹುತೇಕ ಬಡಾವಣೆಗಳ ಗಲ್ಲಿ–ಗಲ್ಲಿಗಳಲ್ಲಿ ಪೊಲೀಸರು ಗಸ್ತು ತಿರುಗಿದರು. ಅನಗತ್ಯವಾಗಿ ಓಡಾಡುತ್ತಿದ್ದವರಿಗೆ ಹಲವು ಪೊಲೀಸರು ಮಾತಿನ ಮೂಲಕ 'ಎಚ್ಚರಿಕೆ' ನೀಡಿ ಕಳುಹಿಸುತ್ತಿದ್ದರು.

ಆಗ್ನೇಯ ವಿಭಾಗದ ಡಿಸಿಪಿ ಶ್ರೀನಿವಾಸ ಜೋಶಿ, ನಗರದ ಕೃಪಾ ನಿಧಿ ವೃತ್ತದಲ್ಲಿ ಬೈಕ್ ಸವಾರರ ಕಡೆಯಿಂದ ಪ್ರತಿಜ್ಞೆ ಮಾಡಿಸಿಕೊಳ್ಳುವ ಮೂಲಕ ವಿಭಿನ್ನವಾಗಿ ಜನರಲ್ಲಿ ಜಾಗೃತಿ ಮೂಡಿಸಿದರು.

'ಕೋವಿಡ್ ಮಾರ್ಗಸೂಚಿಗಳನ್ನು ಉಲ್ಲಂಘಿಸುವುದಿಲ್ಲ, ಅನಗತ್ಯವಾಗಿ ರಸ್ತೆಗೆ ಇಳಿಯುವುದಿಲ್ಲ' ಎಂದು ಯುವಕರಿಂದ ಪ್ರತಿಜ್ಞೆ ಮಾಡಿಸಿಕೊಂಡು ಬಿಟ್ಟು ಕಳುಹಿಸಿದರು.

**ವಾಟಾಳ್ ನಾಗರಾಜ್ ಸಾಥ್ :** ವಾಹನಗಳ ತಪಾಸಣೆ ಮಾಡುತ್ತಿದ್ದ ಪೊಲೀಸರ ಜೊತೆ ಕನ್ನಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಕೂಡ ರಸ್ತೆಗಿಳಿದಿದ್ದರು. ನಗರದ ಮಾಗಡಿ ರಸ್ತೆಯಲ್ಲಿ ವಾಹನ ಸವಾರರಿಗೆ ಜಾಗೃತಿ ಮೂಡಿಸಿದರು.

'ಲಾಕ್‌ಡೌನ್ ವೇಳೆಯಲ್ಲಿ ಪೊಲೀಸರು ಕೂಡ ಶಾಂತಿಯುತವಾಗಿ ವರ್ತಿಸಬೇಕು. ಯಾರಿಗೂ ತೊಂದರೆ ಯಾಗದಂತೆ ಪರಿಸ್ಥಿತಿ ನಿಭಾಯಿಸಬೇಕು' ಎಂದು ಮನವಿ ಮಾಡಿದರು.



ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ಸೋಮವಾರ ಅನಗತ್ಯವಾಗಿ ಸಂಚರಿಸುತ್ತಿದ್ದ ವಾಹನ ಸವಾರರ ದಾಖಲೆಗಳನ್ನು ಪೊಲೀಸರು ಪರಿಶೀಲಿಸಿದರು
– ಪ್ರಜಾವಾಣಿ ಚಿತ್ರ

## ತರಕಾರಿ ಖರೀದಿಗೆ ಮುಗಿಬಿದ್ದ ಜನ

10 ಗಂಟೆಯ ನಂತರ ಸಮಸ್ಯೆಯಾಗುತ್ತದೆ ಎಂದುಕೊಂಡು ಬೆಳಿಗ್ಗೆ ಆರು ಗಂಟೆಗೇ ಹೊರಬಂದಿದ್ದ ಜನ, ತರಕಾರಿ ಖರೀದಿಗೆ ಮುಗಿಬಿದ್ದರು.

ವ್ಯಾಪಾರಿಗಳು ರಸ್ತೆಬದಿ, ಪಾದಚಾರಿ ಮಾರ್ಗಗಳಲ್ಲಿ ತಳ್ಳುವ ಗಾಡಿಗಳಲ್ಲಿ ತರಕಾರಿಗಳ ರಾಶಿ ಹಾಕಿ ಮಾರಾಟ ಮಾಡಿದರು. ಗ್ರಾಹಕರು ಗುಂಪು ಗುಂಪಾಗಿ ಖರೀದಿಗೆ ಮುಂದಾದ ಪರಿಣಾಮ ಅಂತರ ಕಾಪಾಡಲು ಸಾಧ್ಯವಾಗಲಿಲ್ಲ.

ಕಿರಾಣಿ ಅಂಗಡಿ–ಸೂಪರ್ ಮಾರ್ಕೆಟ್‌ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಕಂಡು ಬಂದರು. ಕೆಲ ಸೂಪರ್ ಮಾರ್ಕೆಟ್‌ಗಳ ಎದುರು ಅಂತರ ಕಾಯ್ದುಕೊಳ್ಳಲು ಬಾಕ್ಸ್ ಗುರುತು ಮಾಡಿದ್ದರಿಂದ ಗ್ರಾಹಕರು ಸರತಿ ಸಾಲಿನಲ್ಲಿ ನಿಂತು ಅಗತ್ಯವಸ್ತುಗಳನ್ನು ಖರೀದಿಸಿದರು.

**ಮದ್ಯ–ಮಾಂಸದಂಗಡಿ ಎದುರೂ ಉದ್ದದ ಸಾಲು**

ನಗರದ ಮದ್ಯ ಹಾಗೂ ಮಾಂಸ ಮಾರಾಟ ಅಂಗಡಿಗಳ ಎದುರು ಗ್ರಾಹಕರ ದೊಡ್ಡ ದಂಡೇ ನೆರೆದಿತ್ತು. ಬೆಳಗ್ಗೆ 10 ಗಂಟೆ ಬಳಿಕ ಓಡಾಡಿದರೆ ಪೊಲೀಸರು ಅಡ್ಡಿಪಡಿಸುವ ಆತಂಕದಲ್ಲಿ ಬೆಳಿಗ್ಗೆಯೇ ಮದ್ಯಪ್ರಿಯರು ಮದ್ಯದಂಗಡಿಗಳ ಎದುರು ಸರತಿ ಸಾಲಿನಲ್ಲಿ ನಿಂತು ಮದ್ಯ ಖರೀದಿಸಿದರು.

ಮಾಂಸ ಮಾರಾಟ ಅಂಗಡಿಗಳ ಎದುರು ಇದೇ ಮಾದರಿಯ ಗ್ರಾಹಕರ ಸಾಲು ಕಂಡು ಬಂದಿತು.

## ಆಹಾರ ಪೊಟ್ಟಣ ವಿತರಣೆ

ಪಾರ್ಸೆಲ್ ಸೇವೆಗೆ ಮಾತ್ರ ಅವಕಾಶ ನೀಡಿರುವುದರಿಂದ ಬಹುತೇಕ ಹೋಟೆಲ್‌ಗಳನ್ನು ಬಂದ್ ಆಗಿದ್ದವು. ಹೀಗಾಗಿ ಕಾರ್ಮಿಕರು, ನಿರ್ಗತಿಕರು, ಭಿಕ್ಷುಕರು ಊಟಕ್ಕಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಈ ನಡುವೆ ಕೆಲ ಸ್ವಯಂ ಸೇವಕರು, ಸಂಘ–ಸಂಸ್ಥೆಗಳು ಮನೆಗಳಲ್ಲೇ ಆಹಾರ ಸಿದ್ಧಪಡಿಸಿ ಪೊಟ್ಟಣ ಕಟ್ಟಿಕೊಂಡು ಹಂಚಿದರು.

ನಗರದ ಕೆಎಸ್‌ಆರ್ ರೈಲು ನಿಲ್ದಾಣದ ಎದುರು ಕೆಲ ಯುವಕರು ಹೊರರಾಜ್ಯದ ಕಾರ್ಮಿಕರು ಹಾಗೂ ಭಿಕ್ಷುಕರಿಗೆ ಆಹಾರ ಪೊಟ್ಟಣ ವಿತರಿಸಿದರು.

## ಮಾನವ ಹಕ್ಕುಗಳ ಆಯೋಗಕ್ಕೆ ದೂರು

ಲಾಕ್‌ಡೌನ್ ವೇಳೆ ಪೊಲೀಸ್ ದೌರ್ಜನ್ಯದ ವಿರುದ್ಧ ವಕೀಲೆ ಸುಧಾ ಕಾಟವಾ ಅವರು ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಿದ್ದಾರೆ.

'ನಾಗರಿಕರ ಮೇಲೆ ಪೊಲೀಸರು ಮನಬಂದಂತೆ ದಾಳಿ ನಡೆಸುತ್ತಿರುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ' ಎಂದೂ ಅವರು ದೂರಿನಲ್ಲಿ ಹೇಳಿದ್ದಾರೆ.

'ಪೊಲೀಸರು ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೇ ವಿನಾ ಹೀಗೆ ಮನ ಬಂದಂತೆ ಥಳಿಸುವ ಅಧಿಕಾರ ಅವರಿಗೆ ಇಲ್ಲ. ಅಗತ್ಯ ವಸ್ತುಗಳನ್ನು ಖರೀದಿಸಲು, ವೈದ್ಯಕೀಯ ತುರ್ತು ಸೇವೆಗಳಿಗೆ ಹೊರಗಡೆ ಓಡಾಡಬಹುದು ಎಂದು ಸರ್ಕಾರವೇ ಹೇಳಿದೆ. ತುರ್ತು ಕಾರ್ಯಗಳ ನಿಮಿತ್ತ ಓಡಾಡುತ್ತಿರುವವರ ಮೇಲೂ ಲಾಠಿ ಬೀಸಿರುವುದು ಸರಿಯಲ್ಲ' ಎಂದು ಅವರು ಹೇಳಿದ್ದಾರೆ.

'ಈ ಕುರಿತು ಎಲ್ಲ ಪೊಲೀಸ್ ಸಿಬ್ಬಂದಿಗೆ ತಿಳಿವಳಿಕೆ ಹೇಳಬೇಕು. ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಸೂಚಿಸಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

## '8 ಗಂಟೆಗೂ ಬಿಡಲಿಲ್ಲ'

'ನನ್ನ ತರಕಾರಿ ಮಳಿಗೆ ಇರುವುದು ಇರುವುದು ಬಾಣಸವಾಡಿಯಲ್ಲಿ. ಬೆಳಿಗ್ಗೆ 6 ಗಂಟೆಗೆ ಬಂದು, ಯಶವಂತಪುರದ ಎಪಿಎಂಸಿ ಯಾರ್ಡ್‌ನಿಂದ ತರಕಾರಿ ಖರೀದಿಸಿ ವಾಪಸ್ ಹೋಗುತ್ತಿದ್ದೆ. 8.30ರ ವೇಳೆಗೇ ಪೊಲೀಸರು ಗಾಡಿ ಹಿಡಿದರು. ತರಕಾರಿ ವ್ಯಾಪಾರಿ ಎಂದರೂ ಬಿಡಲಿಲ್ಲ' ಎಂದು ವರ್ತಕರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

'ಯಶವಂತಪುರದಿಂದ ಬಾಣಸವಾಡಿಗೆ ಹೋಗುವುದರೊಳಗೆ 10 ಪೊಲೀಸ್ ಠಾಣೆಗಳು ಬರುತ್ತವೆ. ಹೀಗೆ ಒಂದೊಂದು ಠಾಣೆಯವರು ಒಮ್ಮೊಮ್ಮೆ ಹಿಡಿದು, ಹೊಡೆಯುತ್ತಾ ಇದ್ದರೆ ನಮ್ಮ ಗತಿ ಏನು' ಎಂದು ಅವರು ಕಣ್ಣೀರು ಹಾಕಿದರು.

'ಹತ್ತು ಗಂಟೆ ನಂತರ ತರಕಾರಿ ಖರೀದಿಸಲು ಕೂಡ ಯಾರೂ ಹೊರಗೆ ಬರುವುದಿಲ್ಲ. ವಿಳಂಬವಾದರೆ ನಾನು ಖರೀದಿಸಿದ ತರಕಾರಿಗಳೂ ಹಾಳಾಗುವುದಿಲ್ಲವೇ' ಎಂದು ಅವರು ಪ್ರಶ್ನಿಸಿದರು.

### 'ಆಸ್ಪತ್ರೆಗೆ ಹೋಗಬೇಕೆಂದರೂ ಕೇಳಲಿಲ್ಲ'

'ಮಗಳಿಗೆ ವಾರದ ಹಿಂದೆ ಹಾವು ಕಡಿದಿತ್ತು. ಕಾಲಿಗೆ ಗಾಯ ಆಗಿದೆ. ಅವಳಿಗೆ ಚಿಕಿತ್ಸೆ ಕೊಡಿಸಲು ಓಡಾಡುತ್ತಿದ್ದರೆ ಪೊಲೀಸರು ಬೆತ್ತದಿಂದ ಹೊಡೆದರು' ಎಂದು ವ್ಯಕ್ತಿಯೊಬ್ಬರು ದೂರಿದರು.

'ಷರೀಫ್ ನಗರದಲ್ಲಿ ಮಗಳಿಗೆ ಹಾವು ಕಡಿದಿತ್ತು. ಇಂದಿರಾನಗರ ಆಸ್ಪತ್ರೆಗೆ ಹೋಗಬೇಕಾಗಿತ್ತು. ದುಡ್ಡು ಖಾಲಿ ಆಗಿದ್ದಕ್ಕೆ ಶ್ರೀನಿವಾಸಪುರಕ್ಕೆ ಹೋಗಿ ಸಂಬಂಧಿಕರಿಂದ ಹಣ ತೆಗೆದುಕೊಂಡು ಬಂದೆ. ಎಲ್ಲವನ್ನು ದಾಖಲೆ ಸಮೇತ ಹೇಳಿದರೂ ಕೇಳಲಿಲ್ಲ. ಪಾಸ್ ಆದರೂ ಕೊಡಿಸಿ ಎಂದರೆ ಠಾಣೆಗೆ ಹೋಗಿ ಎನ್ನುತ್ತಾರೆ. ಹೊಡೆಯುವುದೇ ಪೊಲೀಸರ ಮುಖ್ಯ ಉದ್ದೇಶ ಆಗಿದೆ' ಎಂದು ದೂರಿದರು.

## ಪೊಲೀಸರ ದೌರ್ಜನ್ಯಕ್ಕೆ ಆಕ್ರೋಶ

### ಮಾನವ ಹಕ್ಕುಗಳ ಉಲ್ಲಂಘನೆ



ಆಸ್ಪತ್ರೆ, ಔಷಧ ಅಂಗಡಿಗೆ, ಕುಡಿಯುವ ನೀರಿನ ಘಟಕಗಳಿಗೆ ಹೋಗಲು ವಾಹನಗಳನ್ನು ಬಳಸಬೇಕಾದ ಅನಿವಾರ್ಯತೆ ಇದೆ. ನಡೆದುಕೊಂಡು ಬನ್ನಿ ಎಂದು ಹೇಳುವುದು ನಿರ್ದಯವಾದ ಕ್ರಮ. ವಾಹನಗಳನ್ನು ಜಪ್ತಿ ಮಾಡುವುದು ದುಂಡಾವರ್ತಿ ಕ್ರಮ. ಲಭ್ಯವಿರುವ ಎಲ್ಲ ಕಾನೂನುಗಳ ಸ್ಪಷ್ಟ ಉಲ್ಲಂಘನೆ ಇದಾಗಿದೆ. ಈ ರೀತಿಯ ಕ್ರಮಗಳನ್ನು ಟಿ.ವಿ ಮಾಧ್ಯಮಗಳಲ್ಲಿ ವಿಜೃಂಭಿಸುತ್ತಿವೆ. ಇದು ಕೂಡ ಮಾನವ ಹಕ್ಕುಗಳ ಉಲ್ಲಂಘನೆ. ಲಾಠಿ ಏಟಿನಿಂದ ನಾಗರಿಕರನ್ನು ಬೆದರಿಸಿ ಕೊರೊನಾ ಓಡಿಸುತ್ತೇವೆ ಎಂಬುದು ಸರ್ಕಾರದ ಮೌಢ್ಯ. ಪೊಲೀಸ್ ದೌರ್ಜನ್ಯ ಮತ್ತು ದುಮ್ಮಕ್ಕನ ಸಕ್ಕೆ ಸಮೇತ ಕಲಹಾಕಿ ಹೋಗೆಣರದನ್ನು ಮಾಡಬೇಕು.

**ಕೆ.ಬಿ.ಕೆ. ಸ್ವಾಮಿ,** ಹೈಕೋರ್ಟ್ ವಕೀಲ

### ಕಾನೂನು ಕೈಗೆತ್ತಿಕೊಳ್ಳುವ ಅಧಿಕಾರವಿಲ್ಲ



ಕೋವಿಡ್ ಕಾರಣದಿಂದ ಜನ ಮೊದಲೇ ಕಷ್ಟದಲ್ಲಿದ್ದಾರೆ. ಅವರಲ್ಲಿ ಇನ್ನಷ್ಟು ಭಯ ಹುಟ್ಟಿಸುವ ಕೆಲಸವನ್ನು ಯಾರೂ ಮಾಡಬಾರದು. ನಾಗರಿಕರೊಂದಿಗೆ ಸೌಜನ್ಯದಿಂದ ವರ್ತಿಸುವ ಕುರಿತು ಪೊಲೀಸರಿಗೆ ಪಾಠ ಮಾಡುವ ಅಗತ್ಯವಿದೆ. ಪೊಲೀಸರು ಕಾನೂನನ್ನು ಕೈಗೆ ತೆಗೆದುಕೊಳ್ಳುತ್ತಿದ್ದಾರೆ. ನಾಗರಿಕರ ಮೇಲೆ ಮನಬಂದಂತೆ ಲಾಠಿ ಬೀಸಲು ಯಾವ ಕಾನೂನಿನಲ್ಲೂ ಅವಕಾಶ ಇಲ್ಲ. ಯಾವ ಕೋರ್ಟ್‌ಗಳೂ ಒಪ್ಪುವುದಿಲ್ಲ. ಎಲ್ಲರೂ ಅನಗತ್ಯವಾಗಿಯೇ ರಸ್ತೆಗೆ ಇಳಿಯುತ್ತಾರೆ ಎಂಬುದು ಸುಳ್ಳು. ಬಹುತೇಕರು ವೈದ್ಯಕೀಯ ಕಾರಣಗಳಿಗಾಗಿಯೇ ರಸ್ತೆಗೆ ಇಳಿದಿರುತ್ತಾರೆ. ಅದನ್ನು ಸರ್ಕಾರ ಮತ್ತು ಪೊಲೀಸರು ಅರ್ಥ ಮಾಡಿಕೊಳ್ಳಬೇಕು.

**ಮಂಜುನಾಥ್,** ಉದ್ಯಮಿ, ಬಿಟಿಎಂ ಲೇಔಟ್

### ಪೊಲೀಸರೇ ತೊಂದರೆ ಕೊಡಬಾರದು



ಔಷಧ ಚೀಟಿ ತೋರಿಸಿದರೂ ಮೆಡಿಕಲ್ ಶಾಪ್‌ಗೆ ಹೋಗಲು ಅವಕಾಶ ನೀಡುತ್ತಿಲ್ಲ. 6ರಿಂದ 10ರ ತನಕ ಇರುವ ಅವಕಾಶದ ಅವಧಿಯಲ್ಲೂ ಜನರಿಗೆ ತೊಂದರೆ ನೀಡಲಾಗುತ್ತಿದೆ. ಆಸ್ಪತ್ರೆ ಅಥವಾ ಮೆಡಿಕಲ್ ಶಾಪ್‌ಗೆ ಹೋಗುವವರು ನಡೆದುಕೊಂಡೇ ಹೋಗಬೇಕು ಎಂದರೆ ಹೇಗೆ ಸಾಧ್ಯ. ಕಿಲೋಮೀಟರ್‌ಗಟ್ಟಲೆ ನಡೆದು ಹೋಗಲು ಆಗುವುದಿಲ್ಲ. ಕೋವಿಡ್ ನಿಯಂತ್ರಣಕ್ಕೆ ಮಾಸ್ಕ್, ಸ್ಯಾನಿಟೈಸರ್ ಬಳಕೆ ಮತ್ತು ಅಂತರ ಕಾಪಾಡುವುದು ಮುಖ್ಯ. ಅದು ಪಾಲನೆಯಾಗುವಂತೆ ನೋಡಿಕೊಳ್ಳುವುದು ಮುಖ್ಯ.

**ಟಿ.ಎಲ್.ಕಿರಣ್‌ಕುಮಾರ್,** ಹೈಕೋರ್ಟ್ ವಕೀಲ

### ಅಮಾನವೀಯ ವರ್ತನೆ



ಸರ್ಕಾರ ವಿನಾಯಿತಿ ನೀಡಿದ್ದರೂ ಕೃಷಿ ಚಟುವಟಿಕೆಗೆ ತೆರಳುವ ಜನರಿಗೂ ಪೊಲೀಸರು ಅಡ್ಡಗಟ್ಟಿ ಹಲ್ಲೆ ನಡೆಸುತ್ತಿದ್ದಾರೆ. ಸಿಸಿಟಿವಿ ಕ್ಯಾಮೆರಾಗಳು ಇಲ್ಲದ ಕಡೆ ಜನರಿಂದ ಸುಲಿಗೆಯನ್ನೂ ಮಾಡುತ್ತಿದ್ದಾರೆ. ಈ ರೀತಿಯ ವರ್ತನೆಗಳಿಂದಲೇ ಜನ ಪೊಲೀಸರಿಗೆ ಬೆಲೆ ಕೊಡದ ಸ್ಥಿತಿ ನಿರ್ಮಾಣವಾಗುತ್ತಿದೆ. ಪೊಲೀಸರು ಸಂಯಮದಿಂದ ವರ್ತಿಸುವುದನ್ನು ಇನ್ನು ಮುಂದೆಯಾದರೂ ರೂಢಿಸಿಕೊಳ್ಳಬೇಕು.

**ಸಿ.ಎನ್. ದೀಪಕ್,** ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಪ್ರಧಾನ ಕಾರ್ಯದರ್ಶಿ

### ಜನರೇನು ಹಸಿವಿನಿಂದ ಸಾಯಬೇಕೇ?



ಸರ್ಕಾರದ ಮಾರ್ಗಸೂಚಿಯೇ ಅವೈಜ್ಞಾನಿಕ ಮತ್ತು ಜನವಿರೋಧಿ ಕ್ರಮಗಳನ್ನು ರಾಜ್ಯ ಸರ್ಕಾರ ಅನುಸರಿಸುತ್ತಿದೆ. ಮನೆ ಮನೆಗೆ ಆಹಾರ ಕಿಟ್ ನೀಡಿ ಕೇರಳದಲ್ಲಿ ಲಾಕ್‌ಡೌನ್ ಮಾಡಲಾಗಿದೆ. ಯಾವುದೇ ಪೂರ್ವತಯಾರಿ ಇಲ್ಲದೆ ಲಾಕ್‌ಡೌನ್ ಮಾಡಲಾಗಿದೆ. ಜನರೇ ಅಗತ್ಯ ವಸ್ತು ಖರೀದಿಸಲು ಹೋದರೆ ಪೊಲೀಸರು ಲಾಠಿ ಬೀಸುತ್ತಿದ್ದಾರೆ. ಜನರೇನು ಹಸಿವಿನಿಂದ ಸಾಯಬೇಕೇ, ಈ ಅಮಾನವೀಯ ವರ್ತನೆಯನ್ನು ನಿಲ್ಲಿಸಲು ಪೊಲೀಸರಿಗೆ ಸರ್ಕಾರ ಸೂಚನೆ ನೀಡಬೇಕು. ಇಲ್ಲದಿದ್ದರೆ ಜನರೇ ಪೊಲೀಸರ ವಿರುದ್ಧ ತಿರುಗಿ ಬೀಳುತ್ತಾರೆ

**ಕೆ.ಮಹಂತೇಶ್,** ಸಿಐಟಿಯು ರಾಜ್ಯ ಕಾರ್ಯದರ್ಶಿ

**ಸಂಕ್ಷಿಪ್ತ ಸುದ್ದಿ**

## ರವಿ ಚನ್ನಣ್ಣನವರಗೆ ಕೋವಿಡ್

**ದೇವನಹಳ್ಳಿ (ವಿಜಯಪುರ):** ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿ ಡಿ. ಚನ್ನಣ್ಣನವರ ಅವರಿಗೆ ಭಾನುವಾರ ಕೋವಿಡ್ ಸೋಂಕು ದೃಢಪಟ್ಟಿದೆ.

ಬೆಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಈಚೆಗೆ ದೇವನಹಳ್ಳಿ ಆಕಾಶ್ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆ ಎದುರಾದ ಸಂದರ್ಭದಲ್ಲಿ ಆಮ್ಲಜನಕ ಕೊರತೆ ನೀಗಿಸುವಲ್ಲಿ ಅಧಿಕಾರಿಗಳೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ವಿಜಯಪುರ ಪೊಲೀಸ್ ಠಾಣೆಗೆ ಭೇಟಿ ನೀಡಿ ಪೊಲೀಸರ ಆರೋಗ್ಯ ಕುರಿತು ಜಾಗೃತಿ ಮೂಡಿಸಿದ್ದರು.

## 30 ಹಾಸಿಗೆಗಳಿಗೆ ಆಮ್ಲಜನಕ ವ್ಯವಸ್ಥೆ

**ಬೆಂಗಳೂರು:**'ದಾಸರಹಳ್ಳಿ ವ್ಯಾಪ್ತಿಯ ಬಾಗಲಗುಂಟೆಯ ಕಾರ್ಮಿಕರ ಭವನದಲ್ಲಿರುವ ಕೋವಿಡ್ ಆರೈಕೆ ಕೇಂದ್ರದಲ್ಲಿ 30 ಆಮ್ಲಜನಕ ಸಾಂದ್ರಕ ಉಪಕರಣಗಳನ್ನು ಅಳವಡಿಸಲಾಗಿದೆ' ಎಂದು ಶಾಸಕ ಆರ್. ಮಂಜುನಾಥ್ ತಿಳಿಸಿದರು.

ಕಾರ್ಮಿಕ ಭವನದ ಆವರಣದಲ್ಲಿ ನಿರ್ಮಾಣವಾಗಿರುವ 130 ಹಾಸಿಗೆಗಳ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರಕ್ಕೆ ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು.

'ಮತ್ತೆ 70 ಹಾಸಿಗೆಗಳಿಗೆ ನಾಲ್ಕೈದು ದಿನಗಳಲ್ಲಿ ಆಮ್ಲಜನಕ ಸಾಂದ್ರಕ ಉಪಕರಣಗಳನ್ನು ಅಳವಡಿಸಲಾಗುವುದು' ಎಂದರು.

ದಾಸರಹಳ್ಳಿ ವಲಯ ವಿಶೇಷ ಆಯುಕ್ತ ರವೀಂದ್ರ, ಜಂಟಿ ಆಯುಕ್ತ ನರಸಿಂಹಮೂರ್ತಿ ಹಾಗೂ ಆರೋಗ್ಯಾಧಿಕಾರಿ ಲೋಕೇಶ್ ಇದ್ದರು.

## ವಾಹನ ಬಳಕೆಗೆ ಅವಕಾಶ ನೀಡಿ:ಎಸ್‌ಡಿಪಿಐ

**ಬೆಂಗಳೂರು:** ಲಾಕ್‌ಡೌನ್ ದಿನಗಳಲ್ಲಿ ಅಗತ್ಯ ವಸ್ತುಗಳ ಖರೀದಿಗೆ ವಾಹನಗಳಲ್ಲಿ ತೆರಳಲು ಅವಕಾಶ ನೀಡಬೇಕು ಎಂದು ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಸಂಘಟನೆ ಆಗ್ರಹಿಸಿದೆ.

'ಜನರ ಅಗತ್ಯ ವಸ್ತುಗಳ ಖರೀದಿಗೆ ನಿಗದಿತ ದಿನ ಮತ್ತು ಸಮಯ ನಿಗದಿ ಪಡಿಸಿದ್ದರೂ ದಿನ ಬಳಕೆಯ ವಸ್ತು ಖರೀದಿಸಲು ವಾಹನ ಬಳಸಬಾರದು ಎಂದು ಆದೇಶಿಸಿದೆ. ಈ ನಿಯಮ ಖಂಡನೀಯ' ಎಂದು ಎಸ್‌ಡಿಪಿಐ ರಾಜ್ಯ ಪ್ರಧಾನ ಕಾರ್ಯದರ್ಶಿ ಅಪ್ಸರ್ ಕೊಡ್ಲಿಪೇಟೆ ದೂರಿದ್ದಾರೆ.

'ನಗರಗಳನ್ನು ಹೊರತುಪಡಿಸಿ ಗ್ರಾಮೀಣ ಭಾಗದ ಜನರು ದಿನ ಬಳಕೆಯ ವಸ್ತು ಖರೀದಿಸಲು ಹತ್ತಿರದಲ್ಲಿ ಅಂಗಡಿಗಳಿಲ್ಲದೆ, ಕಿಲೋಮೀಟರ್‌ಗಟ್ಟಲೆ ನಡೆಯಬೇಕು. ಇದನ್ನು ಅರ್ಥ ಮಾಡಿಕೊಂಡು ಕೂಡಲೇ ವಾಹನಗಳ ಬಳಕೆಗೆ ಸರ್ಕಾರ ಅನುಮತಿ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

ಹಾಸಿಗೆ ಬ್ಲಾಕಿಂಗ್ ದಂಧೆ • ಗುಣಮುಖರಾದವರ, ಮೃತರ ಹೆಸರಿನಲ್ಲಿ ಅನ್ಯರಿಗೆ ಚಿಕಿತ್ಸೆ

# 'ಆರೋಗ್ಯಮಿತ್ರ' ಅಧಿಕಾರಿ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೊರೊನಾ ಸೋಂಕಿತರ ಹೆಸರಿನಲ್ಲಿ ಹಾಸಿಗೆಗಳನ್ನು ಬ್ಲಾಕ್ ಮಾಡುತ್ತಿದ್ದ ಪ್ರಕರಣದ ತನಿಖೆ ಮುಂದುವರಿಸಿರುವ ಸಿಸಿಬಿ ಪೊಲೀಸರು, 'ಆರೋಗ್ಯ ಮಿತ್ರ' ಅಧಿಕಾರಿ ಸೇರಿ ಮೂವರನ್ನು ಸೋಮವಾರ ಬಂಧಿಸಿದ್ದಾರೆ.

'ಶಶಿಧರ್, ವೆಂಕೋಬ ರಾವ್ ಹಾಗೂ ಸುಧೀರ್ ಉಮಾರಾಣಿ ಬಂಧಿತರು. ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಬೇಕಿದೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ಆರೋಪಿ ಶಶಿಧರ್, 'ಆರೋಗ್ಯ ಮಿತ್ರ'ದಲ್ಲಿ ಕೆಲಸ ಮಾಡುತ್ತಿದ್ದರು. ವೆಂಕೋಬ ರಾವ್, ರಾಜರಾಜೇಶ್ವರಿನಗರದ ಸ್ಪರ್ಶ ಆಸ್ಪತ್ರೆ ನೌಕರ. ಸುಧೀರ್ ಬಸವೇಶ್ವರನಗರದ ಪುಣ್ಯ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ಮೂವರು ಹಾಸಿಗೆ ಬ್ಲಾಕಿಂಗ್ ದಂಧೆಯಲ್ಲಿ ಭಾಗಿಯಾಗಿರುವುದಕ್ಕೆ ಪುರಾವೆಗಳು ಸಿಕ್ಕಿವೆ' ಎಂದೂ ಅಧಿಕಾರಿ ಹೇಳಿದರು.



ಸುಧೀರ್



ವೆಂಕೋಬ ರಾವ್

'ಪ್ರಕರಣ ಸಂಬಂಧ ವಾರ್‌ರೂಮ್‌ಗಳ ಉಸ್ತುವಾರಿಯೂ ಆಗಿದ್ದ ವೈದ್ಯರಾದ ಡಾ. ರಿಹಾನ್, ಡಾ. ಶಶಿ, ಸಾಮಾಜಿಕ ಕಾರ್ಯಕರ್ತೆ ಬೇಗೂರಿನ ನೇತ್ರಾವತಿ ಹಾಗೂ ಆಕೆಯ ಸ್ನೇಹಿತ ರೋಹಿತ್‌ಕುಮಾರ್ ಎಂಬುರನ್ನು ಈಗಾಗಲೇ ಬಂಧಿಸಲಾಗಿದೆ. ಇದೀಗ ಮತ್ತೆ ಮೂವರನ್ನು ಬಂಧಿಸಲಾಗಿದ್ದು, ಬಂಧಿತರ ಸಂಖ್ಯೆ ಏಳಕ್ಕೆ ಏರಿದೆ' ಎಂದು ತಿಳಿಸಿದರು.

'ವಾರ್‌ರೂಮ್‌ಗಳಲ್ಲಿ ಸಿಕ್ಕ ಮಾಹಿತಿ ಆಧರಿಸಿ ನಗರದ 18 ಆಸ್ಪತ್ರೆಗಳಲ್ಲಿ ಶೋಧ ನಡೆಸಲಾಗಿತ್ತು. ಕೆಲ ದಾಖಲೆಗಳನ್ನೂ ಜಪ್ತಿ ಮಾಡಲಾಗಿತ್ತು. ಕೃತ್ಯದಲ್ಲಿ ಮೂರು ಆಸ್ಪತ್ರೆಗಳ ಸಿಬ್ಬಂದಿ ಭಾಗಿಯಾಗಿರುವ ಮಾಹಿತಿ ಇದೆ. ಸದ್ಯ ಎರಡು ಆಸ್ಪತ್ರೆಗಳ ನೌಕರರನ್ನು ಬಂಧಿಸಲಾಗಿದ್ದು, ತನಿಖೆ ಮುಂದುವರಿದಿದೆ' ಎಂದರು.

**ಗುಣಮುಖರಾದವರ, ಮೃತರ ಹೆಸರಿನಲ್ಲಿ ಚಿಕಿತ್ಸೆ:** 'ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿ ಗುಣಮುಖರಾದವರ ಹಾಗೂ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟವರ ಮಾಹಿತಿಯನ್ನು ಬಿಬಿಎಂಪಿ ವಾರ್‌ರೂಮ್‌ಗೆ ತಿಳಿಸಬೇಕೆಂಬ ನಿಯಮವಿದೆ. ಆದರೆ, ಬಂಧಿತ ಆರೋಪಿಗಳು ಆ ಮಾಹಿತಿಯನ್ನು ವಾರ್‌ರೂಮ್‌ಗೆ ತಿಳಿಸುತ್ತಿರಲಿಲ್ಲ. ಅದೇ ಮಾಹಿತಿಯನ್ನು ಖಾಸಗಿ ವ್ಯಕ್ತಿಗಳಿಗೆ ರವಾನಿಸುತ್ತಿದ್ದರು' ಎಂದೂ ಅಧಿಕಾರಿ ವಿವರಿಸಿದರು.

'ಹಾಸಿಗೆಗಾಗಿ ಹುಡುಕಾಟ ನಡೆಸುತ್ತಿದ್ದ ಸೋಂಕಿತರನ್ನು ಸಂಪರ್ಕಿಸುತ್ತಿದ್ದ ಖಾಸಗಿ ವ್ಯಕ್ತಿಗಳು, 'ಕೆಲ ಖಾಸಗಿ ಆಸ್ಪತ್ರೆಯಲ್ಲಿ ಬಿಬಿಎಂಪಿ ಹಾಸಿಗೆಗಳು ಇವೆ. ಹಣ ಕೊಟ್ಟರೆ ನಿಮ್ಮನ್ನು ದಾಖಲು ಮಾಡುತ್ತೇವೆ' ಎನ್ನುತ್ತಿದ್ದರು. ಹಾಸಿಗೆ ಸಿಗುವ ಆಸೆಯಿಂದ ಸೋಂಕಿತರು, ಹಣ ಕೊಟ್ಟು ಆಸ್ಪತ್ರೆಗೆ ದಾಖಲಾಗುತ್ತಿದ್ದರು. ಮೃತರ ಹಾಗೂ ಗುಣಮುಖರಾದವರ ಹೆಸರಿನಲ್ಲೇ ಅವರಿಗೆ ಚಿಕಿತ್ಸೆ ನೀಡಲಾಗುತ್ತಿತ್ತು ಎಂಬುದು ತನಿಖೆಯಿಂದ ತಿಳಿದುಬಂದಿದೆ' ಎಂದೂ ಅಧಿಕಾರಿ ವಿವರಿಸಿದರು.

'ಆರೋಪಿಗಳ ಕೃತ್ಯದಿಂದ ಹಾಸಿಗೆಗಳು ಸಿಗದೇ ಸೋಂಕಿತರು ಮೃತಪಟ್ಟಿದ್ದಾರೆ. ಸಾಕಷ್ಟು ಮಂದಿ ತೊಂದರೆಗಳನ್ನೂ ಅನುಭವಿಸಿದ್ದಾರೆ. ಗುಣಮುಖರಾದ ಸೋಂಕಿತರು ಹಾಗೂ ಅವರ ಸಂಬಂಧಿಕರಿಂದಲೂ ಪ್ರಕರಣ ಸಂಬಂಧ ಹೇಳಿಕೆ ಪಡೆಯಲಾಗಿದೆ' ಎಂದೂ ಅಧಿಕಾರಿ ಹೇಳಿದರು.

### ರಾಜಕಾರಣಿಗಳ ಆಪ್ತರು?

'ಬಿಬಿಎಂಪಿ ವಾರ್‌ರೂಮ್‌ಗೆ ನೀಡಬೇಕಿದ್ದ ಮಾಹಿತಿಯನ್ನು ಬೇರೆಯವರಿಗೆ ನೀಡುತ್ತಿದ್ದರು' ಎಂದು ಸಿಸಿಬಿ ಪೊಲೀಸರು ಹೇಳುತ್ತಿದ್ದಾರೆ. ಆದರೆ, ಮಾಹಿತಿ ಪಡೆಯುತ್ತಿದ್ದ ಖಾಸಗಿ ವ್ಯಕ್ತಿಗಳು ಯಾರು ಎಂಬುದನ್ನು ಬಹಿರಂಗಪಡಿಸಿಲ್ಲ. ಅಂಥ ಖಾಸಗಿ ವ್ಯಕ್ತಿಗಳು, ರಾಜಕಾರಣಿಗಳ ಆಪ್ತರೆಂದು ಮೂಲಗಳು ಹೇಳುತ್ತಿವೆ.ಆ ಬಗ್ಗೆ ಪ್ರತಿಕ್ರಿಯಿಸಿದ ಸಿಸಿಬಿ ಅಧಿಕಾರಿಯೊಬ್ಬರು, 'ತನಿಖೆ ನಡೆದಿದೆ. ಪುರಾವೆ ಸಮೇತ ಪ್ರತಿಯೊಬ್ಬರನ್ನು ವಿಚಾರಣೆ ನಡೆಸಲಾಗುತ್ತಿದೆ' ಎಂದರು.

# ಆಮ್ಲಜನಕ ಸಹಿತ ಆರೈಕೆ ಕೇಂದ್ರ ಆರಂಭ

**ಬೊಮ್ಮನಹಳ್ಳಿ:** ಹಾಸಿಗೆ ಕೊರತೆ ನೀಗಿಸಲು ಎಚ್‌ಎಸ್‌ಆರ್ ಬಡಾವಣೆಯಲ್ಲಿರುವ ಸರ್ಕಾರಿ ವಿದ್ಯಾರ್ಥಿ ನಿಲಯವನ್ನು ಆಮ್ಲಜನಕ ಪೂರೈಕೆ ಸಹಿತ 150 ಹಾಸಿಗೆಗಳ ಕೊರೊನಾ ಆರೈಕೆ ಕೇಂದ್ರ ತೆರೆಯಲಾಗಿದೆ.

ರೋಗಿಗಳಿಗೆ ಉಚಿತ ಔಷಧ, ಊಟದ ವ್ಯವಸ್ಥೆ ಮಾಡಲಾಗಿದೆ. ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳು ಹಾಗೂ ತುರ್ತು ಸಂದರ್ಭಕ್ಕೆ ತ್ವರಿತವಾಗಿ ಆಂಬುಲೆನ್ಸ್ ಸೇವೆಯನ್ನು ನೀಡುವ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ಆರೈಕೆ ಕೇಂದ್ರಕ್ಕೆ ಚಾಲನೆ ನೀಡಿದ ಶಾಸಕ ಸತೀಶ್ ರೆಡ್ಡಿ 'ಸೋಂಕಿತರು ಆಸ್ಪತ್ರೆಗೆ ಬಂದಾಗ ಅವರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಲು ಸಕಲ ಸೌಲಭ್ಯವನ್ನು ಒದಗಿಸಲಾಗಿದೆ. ಇದರ ಜತೆ ಈಗಾಗಲೇ ಸಿಂಗಸಂದ್ರದಲ್ಲಿ 50 ಹಾಸಿಗೆ ವ್ಯವಸ್ಥೆಯನ್ನು ಮಾಡಲಾಗಿದೆ' ಎಂದು ಹೇಳಿದರು.

'ಹೊಂಗಸಂದ್ರದಲ್ಲಿ 100 ಹಾಸಿಗೆ, ಅರಕೆರೆ, ಪುಟ್ಟೇನಹಳ್ಳಿಯಲ್ಲೂ ಇದೇ ರೀತಿ ಆರೈಕೆ ಕೇಂದ್ರ ತೆರೆಯಲು ವ್ಯವಸ್ಥೆ ಮಾಡಲಾಗುತ್ತಿದೆ' ಎಂದರು.

ಬೊಮ್ಮನಹಳ್ಳಿ ಬಿಬಿಎಂಪಿ ಜಂಟಿ ಆಯುಕ್ತ ರಾಮಕೃಷ್ಣ, ಬೊಮ್ಮನಹಳ್ಳಿ ವಲಯ ಆರೋಗ್ಯ ವೈದ್ಯಾಧಿಕಾರಿ ನಾಗೇಂದ್ರ, ಕಾರ್ಯಪಾಲಕ ಎಂಜಿನಿಯರ್ ಶೇಷಾದ್ರಿ ಇದ್ದರು.



ಬೊಮ್ಮನಹಳ್ಳಿಯ ಎಚ್‌ಎಸ್‌ಆರ್ ಬಡಾವಣೆಯಲ್ಲಿರುವ ವಸತಿ ನಿಲಯಲ್ಲಿ ತೆರೆಯಲಾಗಿರುವ ಕೋವಿಡ್ ಆರೈಕೆ ಕೇಂದ್ರ. ಶಾಸಕ ಸತೀಶ್ ರೆಡ್ಡಿ, ಬೊಮ್ಮನಹಳ್ಳಿ ವಲಯ ಜಂಟಿ ಆಯುಕ್ತ ರಾಮಕೃಷ್ಣ ಇದ್ದಾರೆ



ಜೋಯಾಲುಕ್ಕಾಸ್ ವತಿಯಿಂದ ಕೋವಿಡ್ ರೋಗಿಗಳಿಗೆ ಕೇರಳದ ತ್ರಿಶೂರ್ ವೈದ್ಯಕೀಯ ಕಾಲೇಜಿನಲ್ಲಿ 38 ಐಸಿಯು ಹಾಸಿಗೆಗಳ ವ್ಯವಸ್ಥೆ ಕಲ್ಪಿಸಲು ₹50 ಲಕ್ಷ ಮೊತ್ತದ ಚೆಕ್ ಅನ್ನು ಜೋಯಾಲುಕ್ಕಾಸ್ ಅಧ್ಯಕ್ಷ ಜಾಯ್ ಅಲುಕ್ಕಾಸ್ ಅವರು ಕಾಲೇಜಿನ ಪ್ರಾಂಶುಪಾಲರಾದ ಲೋಲಾ ದಾಸ್ ಅವರಿಗೆ ಹಸ್ತಾಂತರಿಸಿದರು. ಜೋಯಾಲುಕ್ಕಾಸ್ ಪ್ರತಿಷ್ಠಾನದ ಮುಖ್ಯ ಸಂಯೋಜಕ ಜೋಸ್ ಹಾಗೂ ಟಿ.ಎ.ಜಾರ್ಜ್, ಕಾಲೇಜಿನ ಬಿಜು ಕೃಷ್ಣನ್; ಡಾ.ನಿಶಾ, ಶಂಷಾದ್ ಬೇಗಂ ಹಾಗೂ ಇತರರು ಇದ್ದರು.

## ಆಮ್ಲಜನಕ ಪೂರೈಕೆ ವ್ಯತ್ಯಯ 11 ಕೋವಿಡ್ ರೋಗಿಗಳ ಸಾವು

**ತಿರುಪತಿ(ಪಿಟಿಐ):** ಇಲ್ಲಿನ ರುಯಾ ಸರ್ಕಾರಿ ಆಸ್ಪತ್ರೆಯಲ್ಲಿ ಸೋಮವಾರ ರಾತ್ರಿ ಆಮ್ಲಜನಕ ಪೂರೈಕೆಯಲ್ಲಿ ಉಂಟಾದ ವ್ಯತ್ಯಯದಿಂದಾಗಿ ತೀವ್ರನಿಗಾ ಘಟಕಕ್ಕೆ (ಐಸಿಯು)ದಾಖಲಾಗಿದ್ದ 11 ಮಂದಿ ಕೋವಿಡ್ ರೋಗಿಗಳು ಮೃತಪಟ್ಟಿದ್ದಾರೆ ಎಂದು ಚಿತ್ತೂರು ಜಿಲ್ಲಾಧಿಕಾರಿ ಎಂ. ಹರಿನಾರಾಯಣನ್ ತಿಳಿಸಿದ್ದಾರೆ.

ಆಮ್ಲಜನಕ ಸಿಲಿಂಡರ್ ಮರು ಜೋಡಿಸಲು ಐದು ನಿಮಿಷ ವಿಳಂಬವಾದ ಕಾರಣ ಈ ದುರ್ಘಟನೆ ನಡೆದಿದೆ ಎಂದು ಹೇಳಿದ್ದಾರೆ.

'ಆಮ್ಲಜನಕ ಪೂರೈಕೆಯನ್ನು ಐದು ನಿಮಿಷಗಳೊಳಗೆ ಪುನಃಸ್ಥಾಪಿಸಲಾಗಿದೆ. ಸುಮಾರು 30 ವೈದ್ಯರು ಕೂಡಲೇ ಐಸಿಯುಗೆ ಧಾವಿಸಿ ರೋಗಿಗಳನ್ನು ಪರಿಚರಿಸಿದ್ದಾರೆ. ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆ ಇರಲಿಲ್ಲ.' ಎಂದೂ ಅವರು ತಿಳಿಸಿದ್ದಾರೆ.

ಈ ಆಸ್ಪತ್ರೆಯ ಐಸಿಯು ಮತ್ತು ಆಮ್ಲಜನಕದ ವ್ಯವಸ್ಥೆಯಿರುವ ಹಾಸಿಗೆಗಳಲ್ಲಿ ಅಂದಾಜು 700 ಕೋವಿಡ್ ರೋಗಿಗಳು ಮತ್ತು ಸಾಮಾನ್ಯ ವಾರ್ಡ್‌ಗಳಲ್ಲಿ 300 ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟನೆಗೆ ವಿಷಾದ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ, ಈ ಕುರಿತು ತನಿಖೆಗೆ ನಿರ್ದೇಶನ ನೀಡಿದ್ದಾರೆ.

## ಬೀದಿ ವ್ಯಾಪಾರಕ್ಕೆ ಅನುಮತಿ ನೀಡುವಂತೆ ಆಗ್ರಹ

**ಬೆಂಗಳೂರು:** ಸರ್ಕಾರ ಸೂಚಿಸಿರುವ ಅವಧಿಯಲ್ಲೂ ಬೀದಿಬದಿ ವ್ಯಾಪಾರಿಗಳಿಗೆ ಪೊಲೀಸರು ವ್ಯಾಪಾರ ಮಾಡಲು ಬಿಡುತ್ತಿಲ್ಲ ಎಂದು ಬೀದಿಬದಿ ವ್ಯಾಪಾರಿಗಳು ದೂರಿದ್ದಾರೆ.

'ಬೆಳಿಗ್ಗೆ 10 ಗಂಟೆಯವರೆಗೆ ಅಗತ್ಯ ಸೇವೆಯಡಿ ಹಣ್ಣು–ತರಕಾರಿ ವ್ಯಾಪಾರಕ್ಕೆ ಅನುಮತಿ ನೀಡಿದೆ. ಆದರೆ, ಎನ್.ಆರ್. ಕಾಲೊನಿ ಹಾಗೂ ಗಾಂಧಿ ಬಜಾರ್‌ನಲ್ಲಿ ಸೋಮವಾರ ಬೆಳಿಗ್ಗೆಯಿಂದಲೇ ಪೊಲೀಸರು ವ್ಯಾಪಾರಕ್ಕೆ ಅವಕಾಶ ನೀಡಲಿಲ್ಲ. ಬಲವಂತವಾಗಿ ಬೀದಿಬದಿ ಅಂಗಡಿಗಳನ್ನು ಮುಚ್ಚಿಸಿದ್ದಾರೆ' ಎಂದು ಗಾಂಧಿ ಬಜಾರಿನ ಬೀದಿಬದಿ ವ್ಯಾಪಾರಿ ವನಜಾಕ್ಷಿ ಆರೋಪಿಸಿದರು.

'ತಳ್ಳುವ ಗಾಡಿಗಳಲ್ಲಿ ಸಂಜೆ 6ರವರೆಗೆ ವ್ಯಾಪಾರಕ್ಕೆ ಅವಕಾಶ ನೀಡಲಾಗಿದೆ. ಆದರೆ, ಬೀದಿಬದಿ ವ್ಯಾಪಾರಿಗಳಿಗೆ ಅವಕಾಶ ನೀಡುತ್ತಿಲ್ಲ. ಸರ್ಕಾರದಿಂದ ಯಾವುದೇ ಪರಿಹಾರವೂ ಇಲ್ಲ, ಇತ್ತ ದುಡಿಯಲೂ ಬಿಡುತ್ತಿಲ್ಲ. ಜೀವನ ನಿರ್ವಹಣೆಗಾಗಿ ವ್ಯಾಪಾರ ನಡೆಸಲು ಸರ್ಕಾರ ಅವಕಾಶ ಕಲ್ಪಿಸಬೇಕು' ಎಂದು ಮನವಿ ಮಾಡಿದರು.

'ಬೀದಿಬದಿ ವ್ಯಾಪಾರಿಗಳ ಮೇಲೆ ಪೊಲೀಸರು ಅನಗತ್ಯವಾಗಿ ಲಾಠಿ ಚಾರ್ಜ್ ಮಾಡಿ, ದೌರ್ಜನ್ಯ ನಡೆಸುತ್ತಿದ್ದಾರೆ' ಎಂದು ಕರ್ನಾಟಕ ಬೀದಿ ಬದಿ ವ್ಯಾಪಾರಿ ಸಂಘಟನೆಗಳ ಅಧ್ಯಕ್ಷ ರಂಗಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

**ಪೊಲೀಸರ ತಡೆ:** 'ಸರ್ಕಾರವೇ ಕಲಾಸಿಪಾಳ್ಯ ಸಗಟು ಮಾರುಕಟ್ಟೆಯನ್ನು ಸಿಂಗೇನ ಅಗ್ರಹಾರಕ್ಕೆ ಸ್ಥಳಾಂತರಿಸಿ, ವ್ಯಾಪಾರಕ್ಕೆ ಅನುಮತಿ ನೀಡಿದೆ. ಆದರೆ, ಮಾರುಕಟ್ಟೆಗೆ ತೆರಳುವಾಗ ವರ್ತಕರು ಹಾಗೂ ಸಿಬ್ಬಂದಿಯನ್ನು ಪೊಲೀಸರು ಬಿಡುತ್ತಿಲ್ಲ. ಎಪಿಎಂಸಿ ಪಾಸ್ ತೋರಿಸಿದರೂ ದರ್ಪದಿಂದ ವಾಹನ ಜಪ್ತಿ ಮಾಡುತ್ತಿದ್ದಾರೆ' ಎಂದು ಕಲಾಸಿಪಾಳ್ಯ ಸಗಟು ವರ್ತಕರ ಸಂಘದ ಅಧ್ಯಕ್ಷ ಗೋಪಿ ಆರೋಪಿಸಿದರು.

**ನಿಧನ ವಾರ್ತೆ**

## ಬಿ.ಜಿ. ಕೊಟ್ರಪ್ಪ– ಡಾ. ಗಾಯತ್ರಿ





**ಬೆಂಗಳೂರು:** ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿದ್ದ ಬಿ.ಜಿ. ಕೊಟ್ರಪ್ಪ (73) ಹಾಗೂ ನಿವೃತ್ತ ಪ್ರಾಧ್ಯಾಪಕಿಯಾಗಿದ್ದ ಪತ್ನಿ ಡಾ. ಗಾಯತ್ರಿ (67) ಅವರು ಅನಾರೋಗ್ಯದಿಂದಾಗಿ ನಿಧನರಾದರು.

ದಂಪತಿಗೆ ಪುತ್ರ ಇದ್ದಾರೆ. ಹರಿಹರದ ಕೊಟ್ರಪ್ಪ, ಹಲವು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದರು. ಮಾಜಿ ಸಚಿವರಾಗಿದ್ದ ದಿವಂಗತ ಬಿ. ಬಸವಲಿಂಗಪ್ಪ ಅವರ ಸಹೋದರ ಸಂಬಂಧಿಯೂ ಇವರಾಗಿದ್ದರು. ಗಾಯತ್ರಿ ಅವರು ಡಾ. ಅಂಬೇಡ್ಕರ್ ವೈದ್ಯಕೀಯ ಕಾಲೇಜಿನಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದರು.


## ವಿರೂಪಾಕ್ಷ ಸ್ವಾಮೀಜಿ



**ನೆಲಮಂಗಲ:** ಬಿಡದಿ ಹೋಬಳಿಯ ಬೈರಮಂಗಲ ವಿರೂಪಾಕ್ಷ ಒಡೆಯರ ಮಠದ ವಿರೂಪಾಕ್ಷ ಸ್ವಾಮೀಜಿ(86) ಭಾನುವಾರ ನಿಧನರಾದರು.

ಪಟ್ಟಣದ ಬಸವಣ್ಣದೇವರ ಮಠದಲ್ಲಿ ತಂಗಿದ್ದ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಸಿದ್ದಲಿಂಗ ಸ್ವಾಮೀಜಿ ಹಾಗೂ ಇತರ ಶ್ರೀಗಳ ಸಮ್ಮುಖದಲ್ಲಿ ಬಸವಣ್ಣ ದೇವರ ಮಠದಲ್ಲಿ ಸೋಮವಾರ ಅಂತ್ಯಸಂಸ್ಕಾರ ನಡೆಯಿತು.

## ಶ್ರೀನಿವಾಸ್



**ಬೆಂಗಳೂರು:** ಶಾಂತಿನಗರದ ಸ್ವಸ್ತಿಕ್ ರಸ್ತೆ ನಿವಾಸಿ ಶ್ರೀನಿವಾಸ್ ಭಾನುವಾರ (ಮೇ 9) ಸಂಜೆ ನಿಧನರಾದರು

ಅವರು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿದ್ದರು.

## ಖ್ವಾಜಾ ಬಂದೇನವಾಜ್



**ರಾಯಚೂರು:** ಬೆಂಗಳೂರಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾಗಿದ್ದ ಖ್ವಾಜಾ ಬಂದೇನವಾಜ್ (53) ಕೋವಿಡ್‌ನಿಂದ ಇಲ್ಲಿಯ ರಿಮ್ಸ್ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ಪತ್ನಿ ಊರು ಕಲಬುರ್ಗಿಗೆ ಹೋಗಿದ್ದ ವೇಳೆ ಎರಡು ವಾರಗಳ ಹಿಂದೆ ಅವರಿಗೆ ಕೋವಿಡ್ ದೃಢಪಟ್ಟಿತ್ತು. ಮನೆಯಲ್ಲೇ ಒಂದು ವಾರ ಕ್ವಾರಂಟೈನ್‌ನಲ್ಲಿದ್ದಾಗ ಉಸಿರಾಟ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ರಾಯಚೂರಿನಲ್ಲಿ ಆಸ್ಪತ್ರೆಗೆ ದಾಖಲಾಗಿದ್ದರು. ಉಸಿರಾಟ ಸಮಸ್ಯೆ ತೀವ್ರವಾದಾಗ ಹೈ ಫ್ಲೋ ಆಮ್ಲಜನಕ ಚಿಕಿತ್ಸೆ ನೀಡುವುದಕ್ಕಾಗಿ ಸೋಮವಾರ ಬೆಳಿಗ್ಗೆ ರಿಮ್ಸ್‌ಗೆ ಸ್ಥಳಾಂತರ ಮಾಡಲಾಗಿತ್ತು.

ಕಲಬುರ್ಗಿ, ಯಾದಗಿರಿ ಜಿಲ್ಲೆಗಳಲ್ಲೂ ಅವರು ಸೇವೆ ಸಲ್ಲಿಸಿದ್ದರು. ಸ್ವಂತ ಊರು ದೇವದುರ್ಗ ಪಟ್ಟಣದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

## ರೆಮ್‌ಡಿಸಿವಿರ್ ಮಾರಾಟ ಸೋಗಿನಲ್ಲಿ ₹ 5 ಲಕ್ಷ ವಂಚನೆ

**ಬೆಂಗಳೂರು:** ರೆಮ್‌ಡಿಸಿವಿರ್ ಚುಚ್ಚು ಮದ್ದು ಮಾರಾಟ ಮಾಡುವುದಾಗಿ ಹೇಳಿ ನಗರದ ಔಷಧ ವಿತರಣಾ ಏಜೆನ್ಸಿ ಮಾಲೀಕರೊಬ್ಬರಿಂದ ₹ 5 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಶ್ರೀನಗರ ನಿವಾಸಿ ಆಗಿರುವ ಏಜೆನ್ಸಿ ಮಾಲೀಕ ವಂಚನೆ ಬಗ್ಗೆ ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಲವು ವರ್ಷಗಳಿಂದ ಏಜೆನ್ಸಿ ನಡೆಸುತ್ತಿರುವ ದೂರುದಾರ, ರೆಮ್‌ಡಿಸಿವಿರ್ ಚುಚ್ಚುಮದ್ದು ಸರಬರಾಜು ಮಾಡುವವರಿಗಾಗಿ ಹುಡುಕಾಟ ನಡೆಸುತ್ತಿದ್ದರು. ಸೂರತ್‌ನ ಆದಿನಾಥ್ ಏಜೆನ್ಸಿಯ ವೋರಾ ಎಂಬಾತನ ಮೊಬೈಲ್ ಸಂಖ್ಯೆ ಪಡೆದು ಮಾತನಾಡಿದ್ದರು. ಸರಬರಾಜು ಮಾಡಲು ಒಪ್ಪಿದ್ದ ಆರೋಪಿ, ₹5 ಲಕ್ಷ ಪಡೆದು ನಂತರ ಚುಚ್ಚುಮದ್ದು ಕಳುಹಿಸಿಲ್ಲ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

## 'ಹಿನ್ನೋಟ– ಮುನ್ನೋಟ ಇಲ್ಲದ ಸರ್ಕಾರ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇರಳದಲ್ಲಿ ಎಡರಂಗ ಸರ್ಕಾರ ಕೈಗೊಂಡ ಕ್ರಮಗಳ ಫಲವಾಗಿ ಕೋವಿಡ್‌ನಿಂದ ಸಾವು–ನೋವುಗಳ ಸಂಖ್ಯೆ ನಿಯಂತ್ರಣದಲ್ಲಿ ಇದೆ ಎಂದು ಕೇರಳದ ಆರೋಗ್ಯ ಸಚಿವೆ ಶೈಲಜಾ ಟೀಚರ್ ಅಭಿಪ್ರಾಯಪಟ್ಟರು.

ಸಿಪಿಐ(ಎಂ) ಆಯೋಜಿಸಿರುವ ಉಚಿತ ಆನ್‌ಲೈನ್ ವೈದ್ಯಕೀಯ ಸೇವೆ, ಔಷಧ ಕಿಟ್ ವಿತರಣಾ ಕಾರ್ಯಕ್ರಮಕ್ಕೆ ಆನ್‌ಲೈನ್ ಮೂಲಕ ಚಾಲನೆ ನೀಡಿ ಮಾತನಾಡಿದರು.

'ಕೋವಿಡ್ ಎದುರಿಸಲು ಬೇಕಾದ ತಯಾರಿಯನ್ನು ಮೊದಲೇ ಮಾಡಿಕೊಂಡಿದ್ದೆವು. ಬಡವ–ಶ್ರೀಮಂತ ಎನ್ನದೆ ಎಲ್ಲರಿಗೂ ಸಮಾನವಾದ ಚಿಕಿತ್ಸೆ ದೊರಕುವಂತೆ ಮಾಡಲಾಗಿದೆ' ಎಂದು ಹೇಳಿದರು.

ಸಿಪಿಐ(ಎಂ) ಪಾಲಿಟ್ ಬ್ಯೂರೊ ಸದಸ್ಯ ಎಂ.ಎ.ಬೇಬಿ ಮಾತನಾಡಿ, 'ಕೋವಿಡ್ ವಿಷಯದಲ್ಲಿ ಅತ್ಯಂತ ಬೇಜವಾಬ್ದಾರಿಯಿಂದ ಕೇಂದ್ರ ಸರ್ಕಾರ ವರ್ತಿಸಿದೆ. ಹೆಚ್ಚುತ್ತಿರುವ ಸಾವು–ನೋವುಗಳಿಗೆ ಸರ್ಕಾರದ ನೀತಿಗಳೇ ಕಾರಣ. ಎರಡನೇ ಅಲೆಯನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಲಿಲ್ಲ' ಎಂದರು.

ಸಾಹಿತಿ ಬರಗೂರು ರಾಮಚಂದ್ರಪ್ಪ, 'ಸಾಮೂಹಿಕ ಸಾವುಗಳು ಸಂಭವಿಸುತ್ತಿರುವ ಸಂದರ್ಭದಲ್ಲಿ ಮಾತನಾಡುವುದಕ್ಕಿಂತ ಮೌನ ವಹಿಸುವುದು ಸೂಕ್ತ ಎನ್ನಿಸುತ್ತಿದೆ. ಆಡಳಿತಗಾರರ ಅಲಕ್ಷತೆಯನ್ನು ಇದು ತೋರಿಸುತ್ತಿದೆ. ಅಧಿಕಾರದ ಅಹಂಕಾರ, ಅಂತಕರಣ ಇಲ್ಲದ ಆಡಳಿತ ಇದಕ್ಕೆ ಕಾರಣವಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಸರ್ಕಾರಕ್ಕೆ ಹಿನ್ನೋಟ ಮತ್ತು ಮುನ್ನೋಟ ಎರಡೂ ಇಲ್ಲ ಎಂಬುದಕ್ಕೆ ಈ ಎರಡನೇ ಅಲೆಯ ಸಾವು–ನೋವುಗಳು ಸಾಕ್ಷಿ. ಸರ್ಕಾರದ ನಿರ್ಲಕ್ಷತೆಯಿಂದಾಗಿ ಅಮಾಯಕ ಮತ್ತು ಅಮೂಲ್ಯ ಜೀವಗಳನ್ನು ಕಳೆದುಕೊಂಡಿದ್ದೇವೆ' ಎಂದು ಹೇಳಿದರು.

ಸಿಪಿಐ(ಎಂ) ಮುಖಂಡರಾದ ಡಾ.ಕೆ.ಪ್ರಕಾಶ್, ಯು.ಬಸವರಾಜ್. ಕೆ.ಎನ್.ಉಮೇಶ್, ಪ್ರತಾಪ್ ಸಿಂಹ, ಗೌರಮ್ಮ ಮಾತನಾಡಿದರು.

## ನಗರ ಕೋವಿಡ್ ಅಂಕಿ-ಅಂಶ

**9,67,640** ಒಟ್ಟು ಸೋಂಕಿತರು (9,50,893 ನಿನ್ನೆಯ ವಿವರ)

**3,52,454** ಸಕ್ರಿಯ ಪ್ರಕರಣಗಳು

**6,06,754** ಗುಣಮುಖರಾದವರು

**8,431** ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ 16,747

ಗುಣಮುಖ 14,289

ಸಾವು 374

ಆಧಾರ: ರಾಜ್ಯ ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್ಸ್

### ಸಬ್ ರಿಜಿಸ್ಟ್ರಾರ್ ಚಟುವಟಿಕೆ ಸ್ಥಗಿತ

**ಬೆಂಗಳೂರು:** ರಾಜ್ಯ ಎಲ್ಲ ಉಪ ನೋಂದಣಿ ಮತ್ತು ಜಿಲ್ಲಾ ನೋಂದಣಿ ಕಚೇರಿಗಳಲ್ಲಿ ಇದೇ 23ರವರೆಗೆ ಚಟುವಟಿಕೆ ಸ್ಥಗಿತಗೊಳಿಸಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಆದರೆ, ಈ ಕಚೇರಿಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಕೇಂದ್ರ ಸ್ಥಾನದಲ್ಲಿಯೇ ಹಾಜರಿರಬೇಕು ಎಂದೂ ಆದೇಶದಲ್ಲಿ ಅವರು ತಿಳಿಸಿದ್ದಾರೆ.

ಪೂರ್ವ ವಲಯ, ಗೋವಿಂದರಾಜನಗರ ಕ್ಷೇತ್ರದ ಕೋವಿಡ್ ಉಸ್ತುವಾರಿ ಸೋಮಣ್ಣ ಹೇಳಿಕೆ

# ‘ಆಮ್ಲಜನಕ ಸೌಲಭ್ಯವುಳ್ಳ 2,400 ಹಾಸಿಗೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಬೆಂಗಳೂರಿನ 15 ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆಮ್ಲಜನಕ ಸೌಲಭ್ಯವಿರುವ 2,400 ಹಾಸಿಗೆಗಳನ್ನು ಸಿದ್ಧಪಡಿಸಲಾಗಿದೆ. ಉಳಿದ ಕ್ಷೇತ್ರಗಳಲ್ಲಿ ಇನ್ನೂ 700 ಹಾಸಿಗೆ ವ್ಯವಸ್ಥೆ ಮಾಡಲಾಗುತ್ತದೆ’ ಎಂದು ಸಚಿವ ವಿ.ಸೋಮಣ್ಣ ತಿಳಿಸಿದರು.

ಪೂರ್ವ ವಲಯ ಹಾಗೂ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಕೋವಿಡ್ ಉಸ್ತುವಾರಿಯಾಗಿರುವ ಅವರು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳೊಂದಿಗೆ ಸೋಮವಾರ ಸಭೆ ನಡೆಸಿ ಚರ್ಚಿಸಿದರು.

‘ಗಂಭೀರ ಸಮಸ್ಯೆ ಎದುರಿಸುತ್ತಿರುವ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಒದಗಿಸಲು ಮೊದಲ ಆದ್ಯತೆ ನೀಡಲಾಗಿದೆ. ಇದರಿಂದ ರೋಗಿಗಳ ಪ್ರಾಣ ಉಳಿಯಲಿದೆ. ನಗರದ ವಿವಿಧ ಭಾಗಗಳಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನು ಆರಂಭಿಸಲಾಗಿದ್ದು ಅಲ್ಲಿ ಆಮ್ಲಜನಕ ಸೌಲಭ್ಯವಿರುವ 30 ರಿಂದ 50 ಹಾಸಿಗೆಗಳನ್ನು ಒದಗಿಸಲಾಗಿದೆ. ಜೊತೆಗೆ ವೆಂಟಿಲೇಟರ್‌ಗಳನ್ನೂ ನೀಡಲಾಗಿದೆ. ಹೀಗಾಗಿ ಸಾರ್ವಜನಿಕರು ಆತಂಕಕ್ಕೊಳಗಾಗಬಾರದು’ ಎಂದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ, ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್, ಲೋಕಸಭಾ ಸದಸ್ಯ ಪಿ.ಸಿ.ಮೋಹನ್, ಶಾಸಕರಾದ ರಿಜ್ವಾನ್ ಅರ್ಷದ್, ಬೈರತಿ ಸುರೇಶ್, ಎನ್.ಎ.ಹ್ಯಾರಿಸ್, ಪಾಲಿಕೆಯ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ ಇದ್ದರು.

### ಶವಸಂಸ್ಕಾರ: ತಪ್ಪದ ಪರದಾಟ

**ಬೆಂಗಳೂರು:** ನಗರದಲ್ಲಿ ಕೋವಿಡ್‌ನಿಂದ ಮೃತಪಡುತ್ತಿರುವವರ ಸಂಖ್ಯೆ ದಿನೇ ದಿನೇ ಏರುತ್ತಲೇ ಇದೆ. ಹೀಗಾಗಿ ಮೃತರ ಸಂಬಂಧಿಕರು ಶವ ಸಂಸ್ಕಾರಕ್ಕೆ ಪರದಾಡುವುದು ಮುಂದುವರಿದಿದೆ.

ಆಂಬುಲೆನ್ಸ್ ಸಿಗದ ಕಾರಣ ವ್ಯಕ್ತಿಯೊಬ್ಬರು ತಾಯಿಯ ಶವವನ್ನು ಇನೋವಾ ಕಾರಿನಲ್ಲೇ ತಂದಿದ್ದ ದೃಶ್ಯ ಲಕ್ಷ್ಮೀಪುರದ ಮೇಡಿ ಅಗ್ರಹಾರ ಚಿತಾಗಾರದ ಎದುರು ಕಂಡುಬಂದಿತ್ತು. ತಾಯಿಗೆ ಸೋಂಕು ತಗುಲಿದ್ದರಿಂದ ಅವರಿಗೆ ಚಿಕಿತ್ಸೆ ಕೊಡಿಸಲು ಅವರು ಹಲವು ಆಸ್ಪತ್ರೆಗಳಿಗೆ ಅಲೆದಿದ್ದರು. ಆಮ್ಲಜನಕದ ಹಾಸಿಗೆ ಸಿಗದ ಕಾರಣ ವೃದ್ಧೆ ಮೃತಪಟ್ಟಿದ್ದರು.

ಇಂತಹ ಮನಕಲಕುವ ಹಲವು ದೃಶ್ಯಗಳು ನಗರದಲ್ಲಿ ಕಂಡುಬಂದವು. ಪ್ರಮುಖ ಚಿತಾಗಾರಗಳ ಎದುರು ಹಿಂದೆಂದಿಗಿಂತಲೂ ಹೆಚ್ಚು ಆಂಬುಲೆನ್ಸ್‌ಗಳು ಸಾಲುಗಟ್ಟಿ ನಿಂತಿದ್ದವು. ಆಪ್ತರನ್ನು ಕಳೆದುಕೊಂಡ ದುಃಖದ ನಡುವೆಯೂ ಕೆಲವರು ಸಾವಧಾನದಿಂದ ತಮ್ಮ ಸರದಿಗಾಗಿ ಕಾಯುತ್ತಿದ್ದರು. ಮತ್ತೆ ಕೆಲವರು ಚಿತಾಗಾರದ ಹೊರಭಾಗದಲ್ಲೇ ಅಂತಿಮ ವಿಧಿ ವಿಧಾನ ಪೂರೈಸಿ ಭಾರವಾದ ಮನಸ್ಸಿನಿಂದಲೇ ಮನೆಯತ್ತ ಹೆಜ್ಜೆ ಹಾಕುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಗಿಡ್ಡೇನಹಳ್ಳಿ ಹಾಗೂ ತಾವರೆಕೆರೆಯಲ್ಲಿ ಆರಂಭಿಸಲಾಗಿರುವ ಚಿತಾಗಾರಗಳ ಎದುರು ಆಂಬುಲೆನ್ಸ್‌ಗಳ ಸಾಲು ಹೆಚ್ಚು ಕಂಡುಬಂತು. ಈ ಚಿತಾಗಾರಗಳಲ್ಲಿ ಒಟ್ಟು 120 ಶವಗಳನ್ನು ಸುಡಲು ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಹೆಚ್ಚುವರಿಯಾಗಿ ಇನ್ನೂ 27 ಆಂಬುಲೆನ್ಸ್‌ಗಳು ಹೊರಭಾಗದಲ್ಲಿ ಸಾಲಾಗಿ ನಿಂತಿದ್ದವು.

### ಜಿಕೆವಿಕೆಯಲ್ಲಿ ಕೋವಿಡ್ ಆರೈಕೆ ಕೇಂದ್ರ



ಜಿಕೆವಿಕೆ ಆವರಣದಲ್ಲಿ ಸೋಮವಾರ ಉದ್ಘಾಟನೆಗೊಂಡ ಕೋವಿಡ್ ಆರೈಕೆ ಕೇಂದ್ರ

**ಯಲಹಂಕ:** ಬಿಬಿಎಂಪಿ ಯಲಹಂಕವಲಯ ವ್ಯಾಪ್ತಿಯ ಜಿಕೆವಿಕೆ ಆವರಣದಲ್ಲಿ 370 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಶಾಸಕರಾದ ಎಸ್.ಆರ್. ವಿಶ್ವನಾಥ್, ಕೃಷ್ಣಬೈರೇಗೌಡ, ಬಿಬಿಎಂಪಿ ಆಯುಕ್ತ ಗೌರವಗುಪ್ತ ಆರೈಕೆ ಕೇಂದ್ರಕ್ಕೆ ಚಾಲನೆ ನೀಡಿದರು.

ಆರೈಕೆ ಕೇಂದ್ರದಲ್ಲಿ ಪುರುಷರಿಗೆ 80, ಮಹಿಳೆಯರಿಗೆ 80, ಸಾಮಾನ್ಯವರ್ಗದವರಿಗೆ 150 ಹಾಗೂ 50 ಆಮ್ಲಜನಕಯುಕ್ತ ಹಾಸಿಗೆಗಳ ವ್ಯವಸ್ಥೆ ಮಾಡಲಾಗಿದೆ. ಈ ಕೇಂದ್ರಕ್ಕೆ ಎರಡು ಆಂಬುಲೆನ್ಸ್, 12 ವೈದ್ಯರು, 12 ದಾದಿಯರು, 24 ಆರೋಗ್ಯ ಸಹಾಯಕರು, 36 ಮಂದಿ ಸಹಾಯಕ ಸಿಬ್ಬಂದಿ, ಡಾಟಾ ಆಪರೇಟರ್ ಹಾಗೂ ಮಾರ್ಷಲ್‌ಗಳನ್ನು ಸಹ ನಿಯೋಜಿಸಲಾಗಿದೆ.

‘ಆರೈಕೆ ಕೇಂದ್ರದಲ್ಲಿ 70 ಐಸಿಯು ಹಾಸಿಗೆ ವ್ಯವಸ್ಥೆ ಮಾಡಲು ಸಿದ್ಧತೆ ನಡೆಸಲಾಗಿದ್ದು, ಇದಕ್ಕೆ ಸಹಾಯಮಾಡಲು ಕೆಲವು ದಾನಿಗಳು ಮುಂದೆ ಬಂದಿದ್ದಾರೆ. ಈ ಕೇಂದ್ರ ತೆರೆದಿರುವುದರಿಂದ ಸುತ್ತಮುತ್ತಲ ಹಾಗೂ ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗಲಿದೆ’ ಎಂದು ತಹಶೀಲ್ದಾರ್ ಕೆ.ನರಸಿಂಹಮೂರ್ತಿ ತಿಳಿಸಿದರು.

ಯಲಹಂಕ ವಲಯದ ಜಂಟಿ ಆಯುಕ್ತ ಡಾ.ಅಶೋಕ್ ಮತ್ತಿತರರು ಉಪಸ್ಥಿತರಿದ್ದರು.

## ಕೋವಿಡ್ ಅಂಕಿ-ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

| | ವಿಶ್ವ | ಭಾರತ |
|---|---|---|
| ಒಟ್ಟು ಪ್ರಕರಣ | 15.93 ಕೋಟಿ | 2.29 ಕೋಟಿ |
| ಸಕ್ರಿಯ ಪ್ರಕರಣ | 1.90 ಕೋಟಿ | 37.11 ಲಕ್ಷ |
| ಗುಣಮುಖ | 13.69 ಕೋಟಿ | 1.89 ಕೋಟಿ |
| ಸಾವು | 33.12 ಲಕ್ಷ | 2.49 ಲಕ್ಷ |

| ದಿನದ ಏರಿಕೆ | ವಿಶ್ವ | ಭಾರತ |
|---|---|---|
| ಹೊಸ ಪ್ರಕರಣ | 4.37 ಲಕ್ಷ | 3,11,325 |
| ಗುಣಮುಖ | 5.60 ಲಕ್ಷ | 3,35,645 |
| ಸಾವು | 6,349 | 3,576 |

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

| ಇರಾನ್ | ಟರ್ಕಿ | ಬ್ರಿಟನ್ |
|---|---|---|
| 18,408 | 13,604 | 2,357 |

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

| ಅಮೆರಿಕ | ಬ್ರೆಜಿಲ್ | ಫ್ರಾನ್ಸ್ |
|---|---|---|
| 64.43 | 10.48 | 7.56 |

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

| | |
|---|---|
| ಮಹಾರಾಷ್ಟ್ರ | 76,398 |
| ತಮಿಳುನಾಡು | 15,880 |
| ದೆಹಲಿ | 19,663 |

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

| | |
|---|---|
| ಮಹಾರಾಷ್ಟ್ರ | 51.38 |
| ಕೇರಳ | 19.30 |
| ಉತ್ತರ ಪ್ರದೇಶ | 15.24 |

ಪ್ರಜಾವಾಣಿ ಗ್ರಾಫಿಕ್ಸ್



ಜಪ್ತಿ ಮಾಡಲಾದ ಚುಚ್ಚುಮದ್ದುಗಳು ಹಾಗೂ ಬಂಧಿತ ಆರೋಪಿಗಳು

### ರೆಮ್‌ಡಿಸಿವಿರ್ ಕದ್ದು ಅಕ್ರಮ ಮಾರಾಟ

**ಬೆಂಗಳೂರು:** ಕೊರೊನಾ ಸೋಂಕಿತರ ಚಿಕಿತ್ಸೆಗೆ ಬಳಸುವ ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಕದ್ದು ದುಬಾರಿ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಹೆಣ್ಣೂರು ಪೊಲೀಸರು ಬಂಧಿಸಿದ್ದಾರೆ.

‘ಷಣ್ಮುಖಯ್ಯ ಸ್ವಾಮಿ (32) ಹಾಗೂ ಮಾಲತೇಶ್ (31) ಬಂಧಿತರು. ಅವರಿಂದ ₹ 57,980 ಮೌಲ್ಯದ ರೆಮ್‌ಡಿಸಿವಿರ್ ಚುಚ್ಚುಮದ್ದು 17 ಬಾಟಲಿಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನಗರದ ಖಾಸಗಿ ಆಸ್ಪತ್ರೆಯೊಂದರಲ್ಲಿ ಫಾರ್ಮಾಸಿಸ್ಟ್ ಆಗಿ ಆರೋಪಿ ಷಣ್ಮುಖಯ್ಯ ಕೆಲಸ ಮಾಡುತ್ತಿದ್ದರು. ಅದೇ ಆಸ್ಪತ್ರೆಯ ಔಷಧಿ ಮಳಿಗೆಯಲ್ಲಿ ಆರೋಪಿ ಮಾಲತೇಶ್, ಸ್ಟೋರ್ ಉಸ್ತುವಾರಿ ಆಗಿದ್ದರು. ಇಬ್ಬರೂ ಒಟ್ಟಿಗೆ ಸೇರಿ ರೆಮ್‌ಡಿಸಿವಿರ್ ಚುಚ್ಚುಮದ್ದು ಕದಿಯುತ್ತಿದ್ದರೆಂಬ ಮಾಹಿತಿ ಇದೆ’ ಎಂದೂ ತಿಳಿಸಿದರು.

‘ಕದ್ದು ಚುಚ್ಚುಮದ್ದುಗಳನ್ನೇ ಆರೋಪಿಗಳು ಬೇರೆಯವರಿಗೆ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದರು. ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ ಮೇ 8ರಂದು ರಾತ್ರಿ ಚುಚ್ಚುಮದ್ದು ಮಾರಾಟ ಮಾಡಲು ಬಂದಿದ್ದಾಗಲೇ ಅವರಿಬ್ಬರು ಸಿಕ್ಕಿಬಿದ್ದಿದ್ದಾರೆ’ ಎಂದೂ ಹೇಳಿದರು.

‘ಆರೋಪಿಗಳು ಇದುವರೆಗೂ ಹಲವರಿಗೆ ಚುಚ್ಚುಮದ್ದು ಮಾರಾಟ ಮಾಡಿರುವ ಮಾಹಿತಿ ಇದೆ. ಇಬ್ಬರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಬೇಕಿದೆ’ ಎಂದೂ ಪೊಲೀಸರು ತಿಳಿಸಿದರು.

## ಚಿತ್ರಾವಳಿ



ಹೋಟೆಲ್‌ಗಳಲ್ಲಿ ಪಾರ್ಸೆಲ್ ಖರೀದಿಗೆ ಮಾತ್ರ ಅವಕಾಶ ಇರುವುದರಿಂದ ಆಹಾರ ವಿತರಣಾ ಹುಡುಗ ವಾಹನದಲ್ಲಿ ಹೆಚ್ಚು ಆಹಾರದ ಪೊಟ್ಟಣಗಳನ್ನು ಹೊತ್ತು ಗ್ರಾಹಕರಿಗೆ ತಲುಪಿಸಲು ಹೋಗುತ್ತಿದ್ದ ದೃಶ್ಯ ನಗರದ ಮೈಸೂರು ರಸ್ತೆಯಲ್ಲಿ ಸೋಮವಾರ ಕಂಡುಬಂತು –ಪ್ರಜಾವಾಣಿ ಚಿತ್ರಗಳು



ನಗರದ ಎನ್‌ಆರ್‌ ಕಾಲೊನಿ ಬಳಿಯ ಆರೋಗ್ಯ ಕೇಂದ್ರದಲ್ಲಿ ಲಸಿಕೆ ಹಾಕಿಸಿಕೊಳ್ಳಲು ಸಾಲಾಗಿ ನಿಂತಿದ್ದ ನಿವಾಸಿಗಳು

ಕೊರೊನಾ ನಿಯಂತ್ರಣ ಉಸ್ತುವಾರಿ ಬೈರತಿ ಬಸವರಾಜ

# ‘ಐಟಿಐ ಆಸ್ಪತ್ರೆಯನ್ನು ಕೋವಿಡ್ ಕೇಂದ್ರವಾಗಿ ಮಾರ್ಪಡಿಸಲು ಕ್ರಮ’

ಪ್ರಜಾವಾಣಿ ವಾರ್ತೆ



ಕೆ.ಆರ್.ಪುರದ ಐಟಿಐ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದ ಬೈರತಿ ಬಸವರಾಜ. ಅಲಗೇಸನ್ ಮುರುಗನ್, ಕೋವಿಡ್ ಸಂಯೋಜಕಿ ಮಂಜುಳಾ, ಡಿಎಚ್‌ಒ ಶ್ರೀನಿವಾಸ್, ಮಹದೇವಪುರ ವಲಯ ಜಂಟಿ ಆಯುಕ್ತ ವೆಂಕಟಾಚಲಪತಿ, ಡಿಎಚ್‌ಒ ಚಂದ್ರಶೇಖರ್ ಇದ್ದರು.

**ಕೆ.ಆರ್.ಪುರ:** ‘ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಕಾರಣ ಐಟಿಐ ಆಸ್ಪತ್ರೆಯನ್ನು 100 ಹಾಸಿಗೆಯುಳ್ಳ ಕೋವಿಡ್ ಆರೈಕೆ ಕೇಂದ್ರವಾಗಿ ಮಾರ್ಪಡಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ನಗರಾಭಿವೃದ್ಧಿ ಸಚಿವ ಹಾಗೂ ಬಿಬಿಎಂಪಿ ಮಹದೇವಪುರ ವಲಯದ ಕೊರೊನಾ ನಿಯಂತ್ರಣ ಉಸ್ತುವಾರಿ ಬೈರತಿ ಬಸವರಾಜ ಹೇಳಿದರು.

ಕೇಂದ್ರ ಸರ್ಕಾರದ ಅಧೀನದಲ್ಲಿ ಇರುವ ಈ ಐಟಿಐ ಆಸ್ಪತ್ರೆಗೆ ಅಧಿಕಾರಿಗಳೊಂದಿಗೆ ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು.

‘ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅವರ ನೇತೃತ್ವದಲ್ಲಿ ಉನ್ನತ ಮಟ್ಟದ ತಂಡವನ್ನು ರಚನೆ ಮಾಡಿ ಈ ಆಸ್ಪತ್ರೆಯಲ್ಲಿ ಹೆಚ್ಚಿನ ಹಾಸಿಗೆ ವ್ಯವಸ್ಥೆ ಕಲ್ಪಿಸಲು ತಿಳಿಸಲಾಗಿದೆ. ಈ ಸಂಬಂಧ ಕೇಂದ್ರ ಸಚಿವ ಸದಾನಂದಗೌಡ ಅವರ ಜೊತೆ ಮಾತನಾಡಿದ್ದೇನೆ. ಸಕಾರಾತ್ಮಕರಾಗಿ ಸ್ಪಂದಿಸಿದ್ದು ಕೋವಿಡ್ ಕೇಂದ್ರವಾಗಿ ಬಳಕೆ ಮಾಡಿಕೊಳ್ಳಲು ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದ್ದಾರೆ’ ಎಂದು ಹೇಳಿದರು.

‘150 ಹಾಸಿಗೆ ಹೊಂದಿರುವ ಈ ಆಸ್ಪತ್ರೆಯಲ್ಲಿ 100 ಆಮ್ಲಜನಕ ಹೊಂದಿರುವ ಹಾಸಿಗೆ ಹಾಗೂ 50 ಸಾಮಾನ್ಯ ಹಾಸಿಗೆಗಳಾಗಿ ಬಳಕೆ ಮಾಡಬಹುದಾಗಿದೆ’ ಎಂದರು.

ಐಟಿಐ ನಿರ್ದೇಶಕ ಅಲಗೇಸನ್ ಮುರುಗನ್, ‘ಈಗ ಕೋವಿಡ್ ಎಲ್ಲೆಡೆಗೂ ವ್ಯಾಪಿಸುತ್ತಿರುವುದರಿಂದ ರಾಜ್ಯ ಸರ್ಕಾರದೊಂದಿಗೆ ಸಮನ್ವಯತೆ ಸಾಧಿಸಿ ಕೋವಿಡ್ ಕೇಂದ್ರ ಮಾಡಲು ಐಟಿಐ ಮಂಡಳಿ ಸಹಕಾರ ನೀಡಲಿದೆ. ಈ ಬಗ್ಗೆ ಕೇಂದ್ರ ಸಚಿವ ಸದಾನಂದಗೌಡ ಹಾಗೂ ಸಚಿವ ಬೈರತಿ ಬಸವರಾಜ ಅವರೊಂದಿಗೆ ಮಾತನಾಡಿದ್ದೇವೆ’ ಎಂದು ಹೇಳಿದರು

**ವರದಿ ಪರಿಣಾಮ**

ಈ ಆಸ್ಪತ್ರೆಯನ್ನು ಕೋವಿಡ್ ಆರೈಕೆ ಕೇಂದ್ರವಾಗಿಸಬೇಕು ಎಂದು ಕೆ.ಆರ್.ಪುರ ನಾಗರಿಕರು ಒತ್ತಾಯಿಸಿದ್ದರ ಬಗ್ಗೆ ಮೇ 9ರಂದು ‘ಪ್ರಜಾವಾಣಿ’ಯಲ್ಲಿ ವಿಶೇಷ ವರದಿ ಪ್ರಕಟವಾಗಿದ್ದನ್ನು ಸ್ಮರಿಸಬಹುದು.

### ಕೌಟುಂಬಿಕ ದೌರ್ಜನ್ಯ: ಪರಿಹಾರಕ್ಕೆ ಸಮಯ ಮಿತಿ ಅನ್ವಯವಾಗದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹಿಳೆಯನ್ನು ಹಿಂಸಾಚಾರದಿಂದ ರಕ್ಷಿಸುವುದು ಕೌಟುಂಬಿಕ ದೌರ್ಜನ್ಯ(ಡಿ.ವಿ) ಕಾಯ್ದೆಯ ಮುಖ್ಯ ಉದ್ದೇಶವೇ ಹೊರತು ಅಪರಾಧ ಅಥವಾ ಸಿವಿಲ್ ವಿಚಾರಣೆ ನಡೆಸುವುದಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಚಾರಣಾ ನ್ಯಾಯಾಲಯದ ಮುಂದೆ ಪತ್ನಿ ಸಲ್ಲಿಸಿದ್ದ ಅರ್ಜಿಯನ್ನು ವಿಳಂಬದ ಕಾರಣಕ್ಕೆ ವಜಾ ಮಾಡುವಂತೆ ಕೋರಿ ಪತಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್. ಮುದಗಲ್ ಅವರಿದ್ದ ಪೀಠ, ‘ಹಿಂಸೆಯಿಂದ ಮಹಿಳೆಯನ್ನು ರಕ್ಷಿಸುವುದಷ್ಟೇ ಈ ಕಾಯ್ದೆಯ ಉದ್ದೇಶ’ ಎಂದರು.

‘ಪರಿಹಾರ ಕೋರಿ ಮಹಿಳೆ ಅರ್ಜಿ ಸಲ್ಲಿಸುವುದೇ ಅಪರಾಧ ಅಲ್ಲ. ಇದಕ್ಕೆ ಸಿಆರ್‌ಪಿಸಿ ಸೆಕ್ಷನ್ 468ರ ಅಡಿಯಲ್ಲಿ ಸಮಯದ ಮಿತಿ ಅನ್ವಯವಾಗುವುದಿಲ್ಲ. ಕುಟುಂಬದಲ್ಲಿ ಸಂಭವಿಸುವ ಯಾವುದೇ ಹಿಂಸಾಚಾರದಿಂದ ಮಹಿಳೆಯನ್ನು ರಕ್ಷಿಸುವುದು ಈ ಕಾಯ್ದೆಯ ಉದ್ದೇಶ’ ಎಂದು ಪೀಠ ಹೇಳಿತು. ‘ಪತ್ನಿ ಪರಿಹಾರ ಪಡೆಯಲು ಅರ್ಹವಾಗಿದ್ದಾರೆ’ ಎಂದು ತಿಳಿಸಿದ ಪೀಠ, ₹4.32 ಲಕ್ಷ ಬಿಡುಗಡೆ ಮಾಡುವಂತೆ ಆದೇಶಿಸಿತು.

# ‘ಸೋಂಕಿತರೂ ಕುಟುಂಬಕ್ಕೆ ಧೈರ್ಯ ನೀಡಬೇಕು’

ಪ್ರಜಾವಾಣಿ ವಾರ್ತೆ

**ಕೋವಿಡ್ ಗೆದ್ದವರ ಕಥೆ**

**ಬೆಂಗಳೂರು:** ‘ಕೊರೊನಾ ಸೋಂಕಿಗೆ ಒಳಗಾದವರು ಹೆದರಬಾರದು. ನಿಮ್ಮಷ್ಟೇ ಆತಂಕ ಹಾಗೂ ಭೀತಿ ನಿಮ್ಮ ಕುಟುಂಬದ ಸದಸ್ಯರನ್ನೂ ಆವರಿಸಿರುತ್ತದೆ. ನೀವು ಚಿಕಿತ್ಸೆಗೆ ತೆರಳಿದ ಮೇಲೆ ಕುಟುಂಬಸ್ಥರು ದಿಕ್ಕು ತೋಚದ ಸ್ಥಿತಿಯಲ್ಲಿರುತ್ತಾರೆ. ಈ ಸಂದರ್ಭದಲ್ಲಿ ಕುಟುಂಬಕ್ಕೆ ನೀವು ಹೇಳುವ ಧೈರ್ಯದ ಮಾತುಗಳೇ ಅವರನ್ನು ಬಲಗೊಳಿಸುತ್ತದೆ’.

ಇದು, ಕೊರೊನಾ ವಿರುದ್ಧದ ಹೋರಾಟ ಜಯಿಸಿ ಬಂದ ನಗರದ ಖಾಸಗಿ ಕಂಪನಿಯೊಂದರ ಉದ್ಯೋಗಿ ಸಂಜೀವ್ ನಾಯ್ಕ್ ಅವರ ಮಾತುಗಳು.

‘ಕೊರೊನಾ ಮೊದಲ ಅಲೆ ತಿಳಿಗೊಂಡಿತು ಎನ್ನುವಷ್ಟರಲ್ಲೇ ಎರಡನೇ ಅಲೆ ತೀವ್ರಗೊಂಡಿದೆ. ಏಪ್ರಿಲ್‌ನಲ್ಲಿ ಕಚೇರಿಗೆ ಹೋಗಿ ಕೆಲಸ ಮಾಡುತ್ತಿದ್ದೆ. ಸೋಂಕಿನ ಬಗ್ಗೆ ಹೆಚ್ಚು ಭಯ ಇರಲಿಲ್ಲ. ಆದರೆ, ಕಚೇರಿಯಲ್ಲೇ ಒಮ್ಮೆ ಕೋವಿಡ್ ತಪಾಸಣೆಗೆ ಒಳಗಾದೆ. ವರದಿಯಲ್ಲಿ ಸೋಂಕು ದೃಢಪಟ್ಟಿತು’.

‘ಕೆಲಸಕ್ಕಾಗಿ ಹೊರಗೆ ಬಂದು ಹೋಗುತ್ತಿದ್ದರಿಂದ ಕುಟುಂಬದವರಿಂದ ಮನೆಯಲ್ಲಿ ಮೊದಲಿನಿಂದಲೂ ಅಂತರ ಕಾಯ್ದುಕೊಂಡಿದ್ದೆ. ಸೋಂಕು ದೃಢಪಟ್ಟ ನಂತರ ಮನೆಯವರ ಆರೋಗ್ಯ ದೃಷ್ಟಿಯಿಂದ ಕೂಡಲೇ ಆಸ್ಪತ್ರೆಗೆ ದಾಖಲಾದೆ. ಅಲ್ಲಿ ವೈದ್ಯರ ಸಲಹೆಗಳನ್ನು ತಪ್ಪದೆ ಪಾಲಿಸಿದೆ. ಇದರ ಪರಿಣಾಮ ಒಂದು ವಾರದಲ್ಲೇ ನಾನು ಗುಣಮುಖವಾದೆ.’

‘ಆಸ್ಪತ್ರೆಯಲ್ಲಿದ್ದಾಗ ಅಕ್ಕಪಕ್ಕದಲ್ಲಿ ಗಂಭೀರ ಸ್ಥಿತಿಯಲ್ಲಿದ್ದ ರೋಗಿಗಳೂ ಇದ್ದರು. ಅವರೆಲ್ಲರೂ ತಮ್ಮ ಕುಟುಂಬಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುತ್ತಿದ್ದರು. ತಾತ್ಕಾಲಿಕವಾಗಿ ಸಂಬಂಧಗಳಿಗೆ ಎದುರಾಗಿದ್ದ ಅಂತರವನ್ನು ಸಹಿಸಿಕೊಳ್ಳಲು ಅವರಿಂದ ಆಗುತ್ತಿರಲಿಲ್ಲ. ಆಗಲೇ ಸಂಬಂಧಗಳ ಮಹತ್ವವನ್ನು ಅರಿತುಕೊಂಡೆ’.

‘ಆಸ್ಪತ್ರೆ ಸೇರಿದಾಗ ನಮಗೇ ಅಷ್ಟು ಚಿಂತೆ ಕಾಡುವಾಗ, ಮನೆಯವರೆಲ್ಲರೂ ನಮ್ಮ ಯೋಗಕ್ಷೇಮದ ಬಗ್ಗೆಯೇ ಪ್ರತಿ ಕ್ಷಣ ಮುಳುಗಿರುತ್ತಾರೆ ಎಂಬುದನ್ನು ತಿಳಿದು, ಮನೆಗೆ ಕರೆ ಮಾಡಿದೆ. ಎಲ್ಲರ ಮಾತಿನಲ್ಲಿ ಆತಂಕ ವ್ಯಕ್ತವಾಯಿತು. ‘ನಾನು ಆರೋಗ್ಯದಿಂದ ಇದ್ದೇನೆ. ಶೀಘ್ರವೇ ಮನೆಗೆ ವಾಪಸ್ ಬರುತ್ತೇನೆ’ ಎಂದು ಹೇಳಿದೆ. ಆಗ ಅವರೆಲ್ಲರೂ ಧೈರ್ಯದ ಮಾತುಗಳನ್ನಾಡಿದರು’.

‘ಸೋಂಕು ಹೇಗೆ ತಗುಲುವುದೋ ತಿಳಿಯುವುದಿಲ್ಲ. ಆದರೆ, ಸೋಂಕಿಗೆ ಒಳಗಾದವರು ಅದನ್ನು ಹೇಗೆ ಸ್ವೀಕರಿಸುತ್ತಾರೆ ಎನ್ನುವುದರ ಮೇಲೆ ಅದನ್ನು ಜಯಿಸಬಹುದು. ಬಹುತೇಕರು ಮನೆಯವರಿಂದ ದೂರವಿದ್ದೇವೆ, ಪ್ರಾಣಕ್ಕೆ ಅಪಾಯ ಎಂಬ ಆತಂಕದಲ್ಲೇ ಸಮಯ ಕಳೆಯುತ್ತಾರೆ. ಸಕಾರಾತ್ಮಕ ಭಾವನೆಯೊಂದಿಗೆ ಆಸ್ಪತ್ರೆಗೆ ಬರುವ ಮೊದಲೇ ‘ಕೊರೊನಾ ಗೆದ್ದು ಬರುತ್ತೇನೆ’ ಎಂಬ ದೃಢ ನಿರ್ಧಾರ ಮಾಡಿ. ಆ ಮಾತನ್ನು ಮನೆಯವರಿಗೂ ತಿಳಿಸಿ. ಆಗ ಮಾತ್ರ ಎಲ್ಲರೂ ನಿರಾತಂಕವಾಗಿರಲು ಸಾಧ್ಯ’.


‘ನಾನು ಚಿಕಿತ್ಸೆ ಪಡೆದಾಗ ಈಗಿನಂತೆ ಪರದಾಡುವ ಸ್ಥಿತಿ ಇರಲಿಲ್ಲ. ಸೋಂಕು ಲಕ್ಷಣಗಳು ಕಂಡು ಬಂದರೆ, ಮನೆಯಲ್ಲೇ ಕ್ವಾರಂಟೈನ್ ಆಗಿ. ವೈದ್ಯರು ಸೂಚಿಸುವ ಔಷಧ ತೆಗೆದುಕೊಂಡು, ಮನೆಯಿಂದಲೇ ಕೊರೊನಾ ಮಣಿಸಿ’.

**ಸಂಜೀವ್ ನಾಯ್ಕ್,** ಖಾಸಗಿ ಕಂಪನಿ ಉದ್ಯೋಗಿ

# ಕೆಲಸದ ಜೊತೆಗೆ ಕುಟುಂಬ ನಿರ್ವಹಣೆಯ ಸವಾಲು

ಪ್ರಜಾವಾಣಿ ವಾರ್ತೆ

**ಶುಶ್ರೂಷಕರ ಅಂತರಂಗ**



**ಪರಿಚಯ**

**ಹೆಸರು:** ಮಂಜುಳಾ

**ಊರು:** ಬೆಂಗಳೂರು

**ವೃತ್ತಿ:** ಶುಶ್ರೂಷಕಿ

**ಸೇವೆ:** 35 ವರ್ಷ

**ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆ:** ಆವಲಹಳ್ಳಿ ಆರೋಗ್ಯ ಕೇಂದ್ರ, ಬೆಂಗಳೂರು

**ಬೆಂಗಳೂರು:** ‘ನಿವೃತ್ತಿಗೆ ಇನ್ನೊಂದೇ ವರ್ಷ ಬಾಕಿ ಇದೆ. ವೃತ್ತಿ ಬದುಕಿನ ಕೊನೆಯ ಘಟ್ಟದಲ್ಲೇ ಬಹುದೊಡ್ಡ ಸವಾಲು ಎದುರಾಗಿದೆ. ಇದನ್ನು ಸಮರ್ಥವಾಗಿ ನಿಭಾಯಿಸುವ ಅದಮ್ಯ ವಿಶ್ವಾಸವೂ ನನ್ನಲ್ಲಿದೆ’.

‘ಮನೆಯಲ್ಲಿ ಗಂಡ ಹಾಗೂ ಮಕ್ಕಳಿದ್ದಾರೆ. ಅವರಿಗೆ ನಾನೇ ಅಡುಗೆ ಮಾಡಿ ಹಾಕಬೇಕು. ನನ್ನಿಂದ ಅವರಿಗೆ ಸೋಂಕು ತಗುಲಿಬಿಡಬಹುದೇನೋ ಎಂಬ ಆತಂಕ ಸದಾ ಕಾಡುತ್ತಿರುತ್ತದೆ. ಹೀಗಾಗಿ ಆಗಾಗ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುತ್ತಲೇ ಇರುತ್ತೇನೆ. ಈಗಾಗಲೇ ಲಸಿಕೆಯನ್ನೂ ಹಾಕಿಸಿಕೊಂಡಿದ್ದೇನೆ. ಇಷ್ಟಾದರೂ ಮನದ ಮೂಲೆಯಲ್ಲಿ ಸಣ್ಣ ಅಳುಕು ಇದ್ದೇ ಇದೆ. ಮನೆಗೆ ಹೋದ ಕೂಡಲೇ ಸ್ನಾನ ಮಾಡಿ, ಬಿಸಿ ನೀರಿನ ಹಬೆ ತೆಗೆದುಕೊಳ್ಳುತ್ತೇನೆ. ಆಗ ಮನಸ್ಸಿಗೆ ಸ್ವಲ್ಪ ಸಮಾಧಾನ ಅನಿಸುತ್ತದೆ. ಅದಾದ ಬಳಿಕವೇ ಮನೆಯವರೊಂದಿಗೆ ಬೆರೆಯುತ್ತೇನೆ’.

‘ಹಿಂದಿನ ವರ್ಷಕ್ಕೆ ಹೋಲಿಸಿದರೆ ಈಗ ಪರಿಸ್ಥಿತಿ ತುಂಬಾ ಬಿಗಡಾಯಿಸಿದೆ. ರೂಪಾಂತರಿ ವೈರಾಣು ಜೀವಕ್ಕೆ ಸಂಚಕಾರ ತಂದೊಡ್ಡಿದೆ. ಹೀಗಾಗಿ ಹಿಂದೆಂದಿಗಿಂತಲೂ ಹೆಚ್ಚು ಜಾಗರೂಕತೆಯಿಂದ ಕೆಲಸ ಮಾಡುತ್ತಿದ್ದೇನೆ. ಮುಖಗವಸು ಧರಿಸುವುದು, ಅಂತರ ಕಾಪಾಡಿಕೊಳ್ಳುವುದಕ್ಕೆ ಹೆಚ್ಚಿನ ಒತ್ತು ನೀಡುತ್ತೇನೆ. ಜನರೂ ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂಬುದು ನನ್ನ ಕಳಕಳಿಯ ಮನವಿ’.

‘50 ವರ್ಷ ದಾಟಿದವರಿಗೆ ಹೆಚ್ಚಿನ ಅಪಾಯವಿದೆ ಎಂದು ಹೇಳುತ್ತಿದ್ದಾರೆ. ನಿತ್ಯ ನೂರಾರು ಮಂದಿಗೆ ಲಸಿಕೆ ನೀಡಬೇಕಾಗುತ್ತದೆ. ಅವರ ಪೈಕಿ ಯಾರಿಗೆ ಸೋಂಕು ತಗುಲಿರುತ್ತದೋ ನಮಗಂತೂ ಗೊತ್ತಾಗುವುದಿಲ್ಲ. ಹೀಗಾಗಿ ನಮಗೆ ಅಪಾಯ ಇದ್ದೇ ಇದೆ. ಹಾಗಂತ ಕೆಲಸಕ್ಕೆ ರಜೆ ಹಾಕಿ ಮನೆಯಲ್ಲಿ ಕೂರುವ ಸಮಯವಂತೂ ಇದಲ್ಲ. ಯಾವುದಕ್ಕೂ ಅಂಜದೆ ಸೇವೆ ಮಾಡಲೇಬೇಕು’.

‘ಹೋದ ವರ್ಷ ಲಾಕ್‌ಡೌನ್ ವೇಳೆ 20 ದಿನ ಈ ಕೇಂದ್ರದಲ್ಲಿ ಇದ್ದುಕೊಂಡು ಕೆಲಸ ಮಾಡಿದ್ದೆ. ಮಕ್ಕಳ ಮುಖ ಕೂಡ ನೋಡಲು ಆಗಿರಲಿಲ್ಲ’.

# ‘58 ಕಿ.ಮೀ ಮೆಟ್ರೊ ಮಾರ್ಗ 5 ವರ್ಷದಲ್ಲಿ ಪೂರ್ಣ’

**ಬೆಂಗಳೂರು:** ಮೆಟ್ರೊ ಯೋಜನೆಯ ಹಂತ 2ಎ ಮತ್ತು ಹಂತ 2ಬಿ ಅಡಿ ಒಟ್ಟು 58 ಕಿ.ಮೀ ಮಾರ್ಗದ ಕಾಮಗಾರಿಯನ್ನು 5 ವರ್ಷದೊಳಗೆ ಪೂರ್ಣಗೊಳಿಸಿ, ಮೆಟ್ರೊ ರೈಲು ಸಂಚಾರ ಆರಂಭಿಸಬೇಕು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಇದಕ್ಕಾಗಿ ತ್ವರಿತಗತಿಯಲ್ಲಿ ಸಿದ್ಧತೆ ನಡೆಸಿಕೊಳ್ಳುವಂತೆ ಸಲಹೆ ನೀಡಿದರು.

ಪ್ರಮುಖ ಭೂಸ್ವಾಧೀನ ಪ್ರಕ್ರಿಯೆಯನ್ನು ಮತ್ತು ಯುಟಿಲಿಟಿ ಸ್ಥಳಾಂತರ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಕಾಮಗಾರಿಗಳನ್ನು ಆರಂಭಿಸಲು ಸಿದ್ಧತೆ ನಡೆಸಲಾಗಿದೆ ಎಂದು ನಿಗಮದ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ಸರ್ಕಾರವು 2019 ರ ಜನವರಿಯಲ್ಲಿ ಈ ಯೋಜನೆಗೆ ಅನುಮೋದನೆ ನೀಡಿದ್ದು, ಕೇಂದ್ರ ಸರ್ಕಾರ ಏಪ್ರಿಲ್‌ನಲ್ಲಿ ಅನುಮೋದನೆ ನೀಡಿದೆ. ಇದು ಹೊರ ವರ್ತುಲ ರಸ್ತೆ, ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಹೆಬ್ಬಾಳದ ಉದ್ದಕ್ಕೂ ಇರುವ ಐಟಿ ಕೈಗಾರಿಕೆ ಮತ್ತು ವಿಮಾನ ನಿಲ್ದಾಣದ ಪ್ರಯಾಣಿಕರಿಗೆ ಸಾರ್ವಜನಿಕ ಸಾರಿಗೆಯನ್ನು ಒದಗಿಸುತ್ತದೆ.

ಹಂತ-2 ಎ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರದವರೆಗೆ 20 ಕಿ.ಮೀ ಮತ್ತು ಹಂತ-2 ಬಿ ಯೋಜನೆಯಲ್ಲಿ ಕೆ.ಆರ್. ಪುರದಿಂದ ಹೆಬ್ಬಾಳದ ಮೂಲಕ ವಿಮಾನನಿಲ್ದಾಣ ಟರ್ಮಿನಲ್‌ವರೆಗೆ 38 ಕಿ.ಮೀ, ಹೀಗೆ ಒಟ್ಟು 58 ಕಿ.ಮೀ ಉದ್ದದ ಮಾರ್ಗ ಇದಾಗಿದೆ.

# 'ಸುಪ್ರೀಂಕೋರ್ಟ್‌ನ ಶೇ 50ರ ಲಕ್ಷ್ಮಣರೇಖೆ ದಾಟಲೇ ಬೇಕಿದೆ'

ಪ್ರಜಾವಾಣಿ ಸಂವಾದ

ಬೆಂಗಳೂರು: 'ಜಾತಿ ವಾಸ್ತವ. ಅಸಮಾನತೆ ಇರುವರೆಗೆ ಮೀಸಲಾತಿ ಅನಿವಾರ್ಯ. ಆದರೆ, ಆ ಪ್ರಮಾಣ ಸಾಮಾಜಿಕ ನ್ಯಾಯಕ್ಕೆ ಪೂರಕ ಆಗಿರಬೇಕು' ಎಂದು ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್, ರಾಜ್ಯ ಹಿಂದುಳಿದ ವರ್ಗಗಳ ಮಾಜಿ ಅಧ್ಯಕ್ಷ ಎಚ್. ಕಾಂತರಾಜು, ಆಳಂದ ಕ್ಷೇತ್ರದ ಮಾಜಿ ಶಾಸಕ ಬಿ.ಆರ್. ಪಾಟೀಲ ಪ್ರತಿಪಾದಿಸಿದರು.

'ರಾಜ್ಯದಲ್ಲಿ ಮೀಸಲಾತಿ ಪ್ರಮಾಣವನ್ನು ಶೇ 50ಕ್ಕಿಂತ ಹೆಚ್ಚಿಸುವ ಅಗತ್ಯ ಇದೆಯೇ?' ಎಂಬ ವಿಷಯದ ಕುರಿತು 'ಪ್ರಜಾವಾಣಿ' ಸಂವಾದದಲ್ಲಿ ಸೋಮವಾರ ಮಾತನಾಡಿದ ಈ ಮೂವರೂ, 'ಮೀಸಲಾತಿ ವಿಷಯದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪುಗಳ ವಿಸ್ತೃತ ಚರ್ಚೆ ಅಗತ್ಯವಿದೆ. ಅದು ವಿಧಿಸಿರುವ ಶೇ 50 ಮೀಸಲಾತಿಯ ಲಕ್ಷ್ಮಣರೇಖೆ ದಾಟಬೇಕಿದೆ' ಎಂದೂ ವಾದಿಸಿದರು. ಅವರ ಅಭಿಪ್ರಾಯಗಳ ಆಯ್ದ ಅಂಶ ಇಲ್ಲಿದೆ.

## ಅಸಾಧಾರಣ ಪ್ರಕರಣದ ಸ್ಪಷ್ಟತೆ ಇಲ್ಲ



ಇಂದಿರಾ ಸಾಹ್ನಿ ಪ್ರಕರಣದಲ್ಲಿ ಮೀಸಲಾತಿ ಪ್ರಮಾಣ ಶೇ 50 ಮೀರಬಾರದೆಂದು ತೀರ್ಪು ನೀಡಿರುವ ಸುಪ್ರೀಂ ಕೋರ್ಟ್, ಅಸಾಧಾರಣ ಪ್ರಕರಣಗಳಲ್ಲಿ ಹೆಚ್ಚಿಸಬಹುದು ಎಂದೂ ಹೇಳಿದೆ. ಆದರೆ, ಆ ಅಸಾಧಾರಣ ಪ್ರಕರಣ ಯಾವುದೆಂಬ ಬಗ್ಗೆ ಸ್ಪಷ್ಟತೆ ಇಲ್ಲ. ಮರಾಠರ ಮೀಸಲಾತಿ ವಿಷಯದಲ್ಲಿ ಇತ್ತೀಚೆಗೆ ನೀಡಿರುವ ತೀರ್ಪು ಗೊಂದಲಮಯವಾಗಿದೆ. ಅಂಕಿ ಅಂಶಗಳಿಲ್ಲದೆ ಮೀಸಲಾತಿ ಪ್ರಮಾಣ ನಿರ್ಣಯ ಸಾಧ್ಯವಿಲ್ಲ. ಸಂವಿಧಾನ ತಿದ್ದುಪಡಿ ಮೂಲಕ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಕೇಂದ್ರ ಸರ್ಕಾರ ಸಾಂವಿಧಾನಿಕ ಅಧಿಕಾರ ನೀಡಿದೆ. ಆದರೆ, ಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸುವ ರಾಜ್ಯದ ಅಧಿಕಾರವನ್ನು ಕಿತ್ತುಕೊಂಡಿದೆ. ಸಂವಿಧಾನದ 338 'ಬಿ' ಕಲಂ (9)ರ ಪ್ರಕಾರ, ಎಲ್ಲ ರಾಜ್ಯಗಳು ಪ್ರಮುಖ ನೀತಿಗಳ ವಿಚಾರದಲ್ಲಿ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಜೊತೆ ಸಮಾಲೋಚನೆ ಮಾಡಬೇಕು. ಆದರೆ, ಆ ನೀತಿಗಳು ಯಾವವು ಎಂದು ಎಲ್ಲಿಯೂ ಹೇಳಿಲ್ಲ. ರಾಷ್ಟ್ರೀಯ ಹಿಂದುಳಿದ ಆಯೋಗದ ಜೊತೆ ಸಮಾಲೋಚಿಸಬೇಕು ಎನ್ನುವುದು ಒಕ್ಕೂಟ ವ್ಯವಸ್ಥೆಗೆ ಧಕ್ಕೆ. ಮೀಸಲಾತಿ ಶೇ 50 ಮೀರಬಾರದೆಂದು ತೀರ್ಪಿನ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ 10 ಮೀಸಲಾತಿ ಘೋಷಿರುವುದು ಮೇಲ್ನೋಟಕ್ಕೆ ಅಸಂವಿಧಾನಿಕವಾಗುತ್ತದೆ. ಈ ಪ್ರಕರಣ ವಿಚಾರಣಾ ಹಂತದಲ್ಲಿದೆ. ಸಂವಿಧಾನ ಅಡಿಯಲ್ಲಿ ಮೀಸಲಾತಿ ಪಡೆಯಲು ಅರ್ಹವೇ ಎನ್ನುವುದೂ ಮುಖ್ಯ. ಅದಕ್ಕೆ ಅಗತ್ಯವಾದ ಅಂಕಿಅಂಶ ಸಮೀಕ್ಷೆಗಳಿಂದ ಮಾತ್ರ ಪಡೆಯಲು ಸಾಧ್ಯ. ನಾನು ಅಧ್ಯಕ್ಷನಾಗಿದ್ದಾಗ ಮಾಡಿದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಜಾತಿಯೂ ಒಂದಂಶ. ಈ ಸಮೀಕ್ಷೆಯ ಅಂಶಗಳ ಬಗ್ಗೆ ನಾನು ಚರ್ಚಿಸುವುದಿಲ್ಲ. ಆದರೆ, ಸದ್ಯದ ಸಾಮಾಜಿಕ, ಶೈಕ್ಷಣಿಕ ಸ್ಥಿತಿಯಲ್ಲಿ ಮೀಸಲಾತಿ ಪ್ರಮಾಣ ಶೇ 50ರಿಂದ ಹೆಚ್ಚಿಸಬೇಕು. ಒಳವರ್ಗೀಕರಣ ಅಗತ್ಯವೂ ಇದೆ.

**ಎಚ್. ಕಾಂತರಾಜು,** ರಾಜ್ಯ ಹಿಂದುಳಿದ ವರ್ಗಗಳ ಮಾಜಿ ಅಧ್ಯಕ್ಷ

## ಸುಪ್ರೀಂಕೋರ್ಟ್ ತೀರ್ಪಿನ ಬಗ್ಗೆ ಚರ್ಚೆ ನಡೆಯಲಿ



ಎಲ್ಲ ಸಮಾಜದವರು ಮೀಸಲಾತಿಗೆ ಬೇಡಿಕೆ ಇಟ್ಟಿದ್ದಾರೆ. ಕೇಳುವುದು ಹಕ್ಕು. ಆದರೆ, ಮೀಸಲಾತಿ ಪ್ರಮಾಣ ಶೇ 50 ಮೀರಬಾರದೆಂಬ ಸುಪ್ರೀಂ ಕೋರ್ಟ್‌ನ ಲಕ್ಷಣ ರೇಖೆಯಿಂದ ಮೀಸಲಾತಿ ನೀಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಈ ತೀರ್ಪಿನ ಬಗ್ಗೆ ವ್ಯಾಪಕ ಚರ್ಚೆ ನಡೆಯಬೇಕು. ಸುಪ್ರೀಂ ಕೋರ್ಟ್ ತೀರ್ಪು ನೀಡಿದ ತಕ್ಷಣ ಮೀಸಲಾತಿಗೆ ಹಕ್ಕು ಮಂಡಿಸುವ ಜನ ಸುಮ್ಮನಾಗುವುದಿಲ್ಲ. ಮೀಸಲಾತಿಯ ಹಸಿವು ಎಲ್ಲರಿಗಿದೆ. ಪ್ರಜಾಪ್ರಭುತ್ವ ಮಾದರಿಯಲ್ಲಿ ಮೀಸಲಾತಿ ಫಲ ಹಂಚಿಕೆ ಆಗಬೇಕು. ಮೇಲ್ಜಾತಿಯ ಆರ್ಥಿಕವಾಗಿ ಹಿಂದುಳಿದವರಿಗೆ ಕೇಂದ್ರ ಸರ್ಕಾರ ಶೇ 10ರಷ್ಟು ಮೀಸಲಾತಿ ನೀಡಿರುವುದು ದೊಡ್ಡ ಅಪಾಯಕ್ಕೆ ಕಾರಣ ಆಗಬಹುದು. ಈ ಬಗ್ಗೆ ಚರ್ಚೆ ಆಗಬೇಕು. ಪಂಚಮಸಾಲಿ ಸಮುದಾಯದ ಮೀಸಲಾತಿ ಹೋರಾಟದಲ್ಲಿ ನಾನೂ ಕೈ ಜೋಡಿಸಿದ್ದೇನೆ. ಈ ಸಮುದಾಯ ಕೃಷಿಯನ್ನೇ ನಂಬಿದೆ. ಕೃಷಿ ವಲಯ ಬಿಕ್ಕಟ್ಟು ಎದುರಿಸುತ್ತಿದೆ. ಹೀಗಾಗಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಗೆ ಹೋರಾಟ ನಡೆಸುತ್ತಿದೆ. ಕೆಲವು ಜಾತಿಗಳು ಇತರ ಜಾತಿಗಳನ್ನು ಕತ್ತಲಲ್ಲಿಟ್ಟು ಸಮಾಜ ವ್ಯವಸ್ಥೆಯನ್ನು ತುಳಿಯುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಜಾತಿ ವಾಸ್ತವದ ಹಿನ್ನೆಲೆಯಲ್ಲಿ ನಡೆಯುವ ವಾದದ ಬಗ್ಗೆ ಎಚ್ಚರ ವಹಿಸದಿದ್ದರೆ ಶೋಷಣೆ ತಪ್ಪುವುದಿಲ್ಲ. ಉನ್ನತ ಹುದ್ದೆಗಳಲ್ಲಿ ಎಸ್‌ಸಿ, ಎಸ್‌ಟಿ, ಹಿಂದುಳಿದವರು, ಅಲ್ಪಸಂಖ್ಯಾತರಿಗೆ ಜಾಗ ಸಿಗದೇ ಇರಲು ಇದೂ ಕಾರಣ.

**ಬಿ.ಆರ್. ಪಾಟೀಲ,** ಮಾಜಿ ಶಾಸಕ, ಆಳಂದ

## ಹಿಂದುಳಿದ ಜಾತಿಗಳ ಮೀಸಲಾತಿ ಮೇಲೆ ಆಕ್ರಮಣ ಸಲ್ಲ



ಮೀಸಲಾತಿ ಪ್ರಮಾಣವನ್ನು ಈಗಿರುವ ಶೇ 50ರ ಮಿತಿಯಿಂದ ಹೆಚ್ಚಿಸಬೇಕಾದ ಅಗತ್ಯದ ಬಗ್ಗೆ ಹಲವು ಸಂದರ್ಭಗಳಲ್ಲಿ ಚರ್ಚೆ ನಡೆದಿದೆ. ತಮಿಳುನಾಡು ಸರ್ಕಾರ ಸಂವಿಧಾನದ ಷೆಡ್ಯೂಲ್ 9ರ ಅಡಿಯಲ್ಲಿ ಮೀಸಲಾತಿ ಪ್ರಮಾಣವನ್ನು ಶೇ 69ಕ್ಕೆ ಹೆಚ್ಚಿಸಿಕೊಂಡ ನಿದರ್ಶನ ನಮ್ಮ ಮುಂದಿದೆ. ಹಾಗೆಂದು, ಮೀಸಲಾತಿ ಎನ್ನುವಂಥದ್ದು ಉದ್ಯೋಗ ನೀಡುವ, ಬಡತನ ನಿರ್ಮೂಲನೆಗಲ್ಲ. ಸಮಾನ ಅವಕಾಶ ದೊರಕಿಸಿ ಕೊಡಲು ಇರುವ ಮಹತ್ವದ ಪ್ರಾಣ ಅಂಶ. ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ವಂಚಿತರಾದವರಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಮೀಸಲಾತಿ ಬಂದಿದೆ. ರಾಜ್ಯದಲ್ಲಿ ಪಂಚಮಸಾಲಿ ಸಮುದಾಯ ಮೀಸಲಾತಿ ಕೇಳಿರುವುದರಲ್ಲಿ ತಪ್ಪಿಲ್ಲ. ಆದರೆ, ಈಗಿರುವ ಮೀಸಲಾತಿ ಪ್ರಮಾಣದಲ್ಲಿ ಅದನ್ನು ಸರಿದೂಗಿಸಲು ಸಾಧ್ಯವಿಲ್ಲ. ನಿಗದಿಪಡಿಸಿರುವ ಮಿತಿಯ ಮರುಹಂಚಿಕೆಯೂ ಸಾಧುವಲ್ಲ. ಆರ್ಥಿಕವಾಗಿ ಹಿಂದುಳಿದವರಿಗೆ ಘೋಷಿಸಿರುವ ಶೇ 10 ಮೀಸಲಾತಿ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲ. ಮೀಸಲಾತಿ ವಿಚಾರಗಳಲ್ಲಿ ಕೋರ್ಟ್ ಸ್ಪಷ್ಟವಾಗಿ ಹೇಳಬೇಕು. ಜಾತಿಯಿಂದ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ಎಲ್ಲ ಜಾತಿಗಳಲ್ಲೂ ಕೆನೆಪದರು ಬರಬೇಕು. ಅವಕಾಶ ವಂಚಿತ ಪರಿಶಿಷ್ಟ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳಿಗೆ ಉನ್ನತ ಹುದ್ದೆಗಳಲ್ಲೂ ಅವಕಾಶ ಸಿಗಬೇಕು. ಹಿಂದುಳಿದ ವರ್ಗಗಳ ಪಟ್ಟಿ ಸೇರಲು ಹೋರಾಟ ನಡೆಸುತ್ತಿರುವ ಜಾತಿಗಳಿಗೆ ಮೀಸಲಾತಿ ನೀಡಲು, ಈಗ ಹಿಂದುಳಿದ ಜಾತಿಗಿರುವ ಮೀಸಲಾತಿ ಪ್ರಮಾಣ ಆಕ್ರಮಿಸಿಕೊಳ್ಳಬಾರದು. ಆ ಪ್ರಮಾಣ ಮೀರಿ ಎಷ್ಟು ಬೇಕಾದರು ಹೆಚ್ಚಿಸಿ, ನಿಗದಿಪಡಿಸಲಿ.

**ಬಿ.ಕೆ. ಹರಿಪ್ರಸಾದ್,** ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ

ಪೂರ್ಣ ಸಂವಾದ ವೀಕ್ಷಣೆಗೆ:
https://www.facebook.com/prajavani.net

## ಸುದ್ದಿ 2 ನಿಮಿಷ


### ₹ 10 ಸಾವಿರ ಕೊಡಲು ನೋಟ್ ಪ್ರಿಂಟ್ ಮಾಡ್ತೀವಾ: ಈಶ್ವರಪ್ಪ

ಶಿವಮೊಗ್ಗ: 'ಲಾಕ್‌ಡೌನ್‌ನಲ್ಲಿ ಸಂಕಷ್ಟಕ್ಕೆ ಸಿಲುಕುವ ಜನರಿಗೆ ತಲಾ ₹ 10 ಸಾವಿರ ನೆರವು ನೀಡಲು ನಾವೇನು ನೋಟ್ ಪ್ರಿಂಟ್ ಮಾಡ್ತೀವಾ?' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರು ಸಿದ್ದರಾಮಯ್ಯ ವಿರುದ್ಧ ಹರಿಹಾಯ್ದರು.

ನಗರದಲ್ಲಿ ಸೋಮವಾರ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು 14 ದಿನ ತಮ್ಮ ಬಾಯಿಗಳಿಗೆ ಬೀಗ ಹಾಕಿಕೊಂಡರೆ ಲಾಕ್‌ಡೌನ್ ಸಂಪೂರ್ಣ ಯಶಸ್ವಿಯಾಗುತ್ತದೆ. ಎಲ್ಲೋ ಎ.ಸಿ. ಕೊಠಡಿಗಳಲ್ಲಿ ಕುಳಿತು ಅನಗತ್ಯ ಟೀಕೆ ಮಾಡುವುದು ವಿರೋಧ ಪಕ್ಷಗಳ ನಾಯಕರಿಗೆ ಶೋಭೆ ತರುವುದಿಲ್ಲ. ಸಿದ್ದರಾಮಯ್ಯ ಹೇಳಿದಂತೆ ₹ 10 ಸಾವಿರ ಕೊಡಲು ಸಾಧ್ಯವಿಲ್ಲ' ಎಂದು ಕುಟುಕಿದರು.

'ಸರ್ಕಾರ ಕೋವಿಡ್ ನಿಯಂತ್ರಣಕ್ಕಾಗಿ ಹಗಲಿರುಳು ಶ್ರಮಿಸುತ್ತಿದೆ. ಇಂತಹ ಸಮಯದಲ್ಲಿ ಅಗತ್ಯ ಸಹಕಾರ, ಸೂಕ್ತ ಸಲಹೆ ನೀಡಬೇಕು. ಆದರೆ, ಈ ಮೂವರೂ ಅದ್ಯಾವುದನ್ನೂ ಮಾಡದೆ ಬರೀ ಟೀಕೆ ಮಾಡುತ್ತಿದ್ದಾರೆ. ಇಂತಹ ಕಾಯಿಲೆ ಬರುತ್ತದೆ ಎಂದು ಅವರು ನಿರೀಕ್ಷೆ ಮಾಡಿದ್ದರಾ? ಸರ್ಕಾರ ಅನಿವಾರ್ಯವಾಗಿ ಲಾಕ್‌ಡೌನ್ ಜಾರಿ ಮಾಡಿದೆ. ನಿಯಂತ್ರಣಕ್ಕೆ ಹಲವು ಕಠಿಣ ನಿರ್ಧಾರ ತೆಗೆದುಕೊಂಡಿದೆ' ಎಂದು ಸಮರ್ಥಿಸಿಕೊಂಡರು.



### ಹೊಂಬಾಳೆ ಸಂಸ್ಥೆಯಿಂದ 50 ಐಸಿಯು ಹಾಸಿಗೆ

ಮಂಡ್ಯ: ಹೊಂಬಾಳೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ, ಚಿತ್ರ ನಿರ್ಮಾಪಕ ವಿಜಯ್ ಕಿರಗಂದೂರು ಅವರು ತಮ್ಮ ತವರು ಜಿಲ್ಲೆಗೆ 50 ಐಸಿಯು ಹಾಸಿಗೆ ಹಾಗೂ ತಲಾ 50 ಎಂಎಲ್‌ಪಿ ಸಾಮರ್ಥ್ಯದ ಎರಡು ಆಮ್ಲಜನಕ ಘಟಕ ಸ್ಥಾಪನೆಗೆ ಹಣಕಾಸು ನೆರವು ನೀಡಲು ಮುಂದಾಗಿದ್ದಾರೆ.

ಈ ಕುರಿತು ವಿಜಯ್ ಅವರು, ಜಿಲ್ಲಾಧಿಕಾರಿಗೆ ಇ–ಮೇಲ್ ಮಾಡಿದ್ದು ಹಣಕಾಸು ನೆರವು ಸ್ವೀಕರಿಸುವಂತೆ ಕೋರಿದ್ದಾರೆ.

ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಸರ್ಕಾರವೇ ಎಲ್ಲಾ ರೀತಿಯ ನೆರವು ನೀಡಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಸಮುದಾಯ ಕೂಡ ಒಗ್ಗಟ್ಟಿನಿಂದ ರೋಗಿಗಳ ಸೇವೆಗೆ ನೆರವಾಗಬೇಕು. ಈ ನಿಟ್ಟಿನಲ್ಲಿ ₹ 1.5 ಕೋಟಿ– ₹ 2 ಕೋಟಿ ಹಣಕಾಸು ನೆರವು ನೀಡುವುದಾಗಿ ತಿಳಿಸಿದ್ದಾರೆ.

ವಿಜಯ್ ಅವರು ಮಂಡ್ಯ ತಾಲ್ಲೂಕು ಕಿರಗಂದೂರು ಗ್ರಾಮದವರು. ಬೆಂಗಳೂರಿನಲ್ಲಿ ಹೊಂಬಾಳೆ ಸಂಸ್ಥೆ ಸ್ಥಾಪಿಸಿ ನಿರ್ಮಾಣ ಕ್ಷೇತ್ರದಲ್ಲಿ ತೊಡಗಿಕೊಂಡಿದ್ದಾರೆ. ತವರು ಜಿಲ್ಲೆಯ ಅಭಿಮಾನದಿಂದಾಗಿ ಆರ್ಥಿಕ ನೆರವು ನೀಡುತ್ತಿರುವುದಾಗಿ ತಿಳಿಸಿದ್ದಾರೆ.

'ವಿಜಯ್ ಕಿರಗಂದೂರು ಅವರು ನೀಡುತ್ತಿರುವ ನೆರವನ್ನು ಕೆಲವೇ ದಿನಗಳಲ್ಲಿ ಕೋವಿಡ್ ನಿರ್ವಹಣೆ ಕಾರ್ಯಕ್ಕೆ ಬಳಸಿಕೊಳ್ಳಲಾಗುವುದು' ಎಂದು ಜಿಲ್ಲಾಧಿಕಾರಿ ಎಸ್.ಅಶ್ವಥಿ ತಿಳಿಸಿದರು.



## ಪ್ರಧಾನಿ ವಿರುದ್ಧ ಟೀಕೆ: ಬಿಜೆಪಿ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ 'ಪ್ರಜಾವಾಣಿ' ಯಲ್ಲಿ ಮೇ 9ರಂದು 'ಕರ್ನಾಟಕ ಜನಶಕ್ತಿ ಬೆಂಗಳೂರು' ಹೆಸರಿನಲ್ಲಿ ಪ್ರಕಟವಾಗಿದ್ದ ಜಾಹೀರಾತು ನಿಂದನಾತ್ಮಕ ಮತ್ತು ಅಸಂಬದ್ಧ ಎಂದು ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿದೆ.



ನಳಿನ್ ಕುಮಾರ್ ಕಟೀಲ್

'ನಮ್ಮ ಸಂವಿಧಾನವೂ ಅಭಿವ್ಯಕ್ತಿ ಸ್ವಾತಂತ್ರ್ಯ ವನ್ನು ಎಲ್ಲರಿಗೂ ನೀಡಿದೆ. ಅದನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸುವುದು ನಮ್ಮೆಲ್ಲರ ಕರ್ತವ್ಯ. ಆದರೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಅಸಭ್ಯ ಭಾಷೆಯ ಬಳಕೆ ಮತ್ತು ತೀರಾ ಕನಿಷ್ಠ ಮಟ್ಟದ ಟೀಕೆಗಳು ಅನಾಗರಿಕ ಮತ್ತು ಖಂಡನೀಯ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದ್ದಾರೆ.

'ಅತ್ಯಂತ ಕನಿಷ್ಠ ಮಟ್ಟದ ಮಾತುಗಳಲ್ಲಿ ದೇಶದ ಪ್ರಧಾನಿಯನ್ನು, ಮುಖ್ಯಮಂತ್ರಿಯನ್ನು ಮತ್ತು ರಾಜಕೀಯ ಪಕ್ಷಗಳನ್ನು ಟೀಕಿಸಲಾಗಿದೆ. ಈ ಜಾಹೀರಾತಿನಲ್ಲಿ ಪ್ರಕಟಿಸಲಾಗಿರುವ ಭಾಷೆ ಮತ್ತು ತಪ್ಪು ಮಾಹಿತಿಯನ್ನು ತೀವ್ರವಾಗಿ ಆಕ್ಷೇಪಿಸುತ್ತೇನೆ' ಎಂದೂ ಅವರು ಹೇಳಿದ್ದಾರೆ.

'ಈ ಜಾಹೀರಾತಿನ ಮೂಲಕ ರಾಜ್ಯದಲ್ಲಿ ಆತಂಕಕಾರಿ ವಾತಾವರಣ ನಿರ್ಮಿಸಲು ನಡೆಸಿದ ಷಡ್ಯಂತ್ರವನ್ನು ಕಟು ಶಬ್ದಗಳಿಂದ ತೀವ್ರವಾಗಿ ಖಂಡಿಸುತ್ತೇನೆ. ಈ ರೀತಿಯ ಅವಹೇಳನಕಾರಿ ಮತ್ತು ಪ್ರಚೋದನಕಾರಿ ಜಾಹೀರಾತುಗಳನ್ನು ಪ್ರಕಟಿಸುವ ಮೊದಲು ಪರಿಶೀಲನೆ ಮಾಡಬೇಕಿತ್ತು' ಎಂದು ಬಿಜೆಪಿ ಎಸ್‌ಸಿ ಮೋರ್ಚಾದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

'ಕರ್ನಾಟಕ ಜನಶಕ್ತಿ ಬೆಂಗಳೂರು ಸಂಘಟನೆಯ ವ್ಯಕ್ತಿಗಳು ಬಳಸಿರುವ ಭಾಷೆ ಯಾವುದೇ ಪತ್ರಿಕೆಯಲ್ಲಿ ಪ್ರಕಟವಾಗಲು ಯೋಗ್ಯವಾದುದಲ್ಲ. ಅದನ್ನು ಪ್ರಕಟಣೆಗೆ ಕಳುಹಿಸಿದ ಸಂಘಟನೆ ಮತ್ತು ಇತರರ ವಿರುದ್ಧ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಲಾಗುವುದು. ಈ ಸಂಘಟನೆಯ ಮತ್ತು ಮುಖಂಡರ ಕ್ರಮ ಅಕ್ಷಮ್ಯ' ಎಂದೂ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಕೋವಿಡ್ ವಿಶ್ವದಾದ್ಯಂತ ಹಬ್ಬಿದೆ. ಆದರೆ, ಅದನ್ನು ಪ್ರಧಾನಿ ನರೇಂದ್ರ ಮೋದಿ ಅವರು ದೇಶಕ್ಕೆ ತಂದರು ಎಂಬ ಟೀಕೆ ಅತ್ಯಂತ ಖಂಡನಾರ್ಹ. ಪ್ರಧಾನಿಯವರ ದೂರದೃಷ್ಟಿ ಮತ್ತು ಸಕಾಲಿಕ ಕ್ರಮದಿಂದಾಗಿ 2020ರಲ್ಲಿ ಕೊರೊನಾವನ್ನು ನಿಗ್ರಹಿಸಲು ಮತ್ತು ಮರಣ ಪ್ರಮಾಣ ಅತ್ಯಂತ ಕನಿಷ್ಠ ಇರುವಂತೆ ನೋಡಿಕೊಳ್ಳಲು ಸಾಧ್ಯವಾಗಿದೆ' ಎಂದೂ ಅವರು ಹೇಳಿದ್ದಾರೆ.

'2021ರಲ್ಲೂ ದೇಶದಲ್ಲಿ ಹರಡುತ್ತಿರುವ ಕೊರೊನಾ ನಿಗ್ರಹ ಮಾಡುವಲ್ಲಿ ಕೇಂದ್ರ ಮತ್ತು ರಾಜ್ಯದ ಆಡಳಿತಗಳು ಯಶಸ್ವಿ ಆಗಲಿವೆ ಎಂಬ ವಿಶ್ವಾಸ ಜನರಲ್ಲಿದೆ. ಈ ವಿಚಾರದ ಅರಿವಿದ್ದರೂ "ಪ್ರಧಾನಿ ಕೊಲೆಗಡುಕ" ಎಂದು ಅತ್ಯಂತ ಕಳಪೆ ಮಟ್ಟದ ಟೀಕೆ ಮಾಡಿದ್ದು ಸರಿಯಲ್ಲ' ಎಂದೂ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

### 'ಅನುಮತಿಯಿಲ್ಲದೆ ಹೆಸರು ಬಳಕೆ'



ದ್ವಾರಕಾನಾಥ್

'ಪ್ರಜಾವಾಣಿ'ಯಲ್ಲಿ ಮೇ 9ರಂದು ಪ್ರಕಟವಾದ ಜಾಹೀರಾತಿನಲ್ಲಿ ನನ್ನ ಅನುಮತಿ ಇಲ್ಲದೆ ನನ್ನ ಹೆಸರು, ಭಾವಚಿತ್ರ ಹಾಗೂ ದೂರವಾಣಿ ಬಳಸಲಾಗಿದೆ' ಎಂದು ಹಿರಿಯ ವಕೀಲ, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ಸ್ಪಷ್ಟಪಡಿಸಿದ್ದಾರೆ.

'ಈ ಜಾಹೀರಾತನ್ನು ಕಂಡ ತಕ್ಷಣ ನಾನು ನನ್ನ ವಿರೋಧವನ್ನು ವ್ಯಕ್ತಪಡಿಸಿದ್ದೇನೆ. 'ಪ್ರಜಾವಾಣಿ' ಯನ್ನು ಸುಮಾರು ನಲವತ್ತು ವರ್ಷಗಳಿಂದ ಓದುತ್ತಾ, ಪತ್ರಿಕೆಗೆ ಅನೇಕ ಸಲ ಬರೆಯುತ್ತಾ ಬಂದಿರುತ್ತೇನೆ. ಆದರೆ ಯಾರೋ ನನ್ನ ಫೋಟೊ ಮತ್ತು ದೂರವಾಣಿ ಸಂಖ್ಯೆ ಕೊಟ್ಟು ನನ್ನ ಅರಿವಿಗೆ ಅಥವಾ ಗಮನಕ್ಕೆ ಬಾರದ ವಿಷಯಗಳನ್ನು ಅದರಲ್ಲಿ ಬರೆದು ಜಾಹೀರಾತು ಎಂದು ಕೊಟ್ಟರೆ, ಕನಿಷ್ಠ ನನ್ನ ಗಮನಕ್ಕೆ ತರಬೇಕಾಗಿತ್ತು' ಎಂದೂ ಅವರು ಹೇಳಿದ್ದಾರೆ.

'ಸಾರ್ವಜನಿಕ ಹಿತದೃಷ್ಟಿಯಿಂದ ನನ್ನ ಭಿನ್ನಾಭಿಪ್ರಾಯವನ್ನು ಬರಹ, ಭಾಷಣ, ಮಾತು, ಚರ್ಚೆಯ ಮೂಲಕ ವ್ಯಕ್ತಪಡಿಸಿರಬಹುದು. ಆದರೆ ನಾನು ಎಂದೂ ಯಾರನ್ನೂ, ಎಂಥದ್ದೇ ಸಂದರ್ಭದಲ್ಲೂ ವೈಯಕ್ತಿಕವಾಗಿ, ಏಕವಚನದಲ್ಲಿ, ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತೇನೆ' ಎಂದೂ ಅವರು ಹೇಳಿದ್ದಾರೆ.



## ವಿವಿಧೆಡೆ ಗುಡುಗು ಸಹಿತ ಮಳೆ

ಬೆಂಗಳೂರು: ರಾಜ್ಯದ ವಿವಿಧ ಭಾಗಗಳಲ್ಲಿ ಗುಡುಗು–ಸಿಡಿಲು ಅಬ್ಬರದೊಂದಿಗೆ ಸೋಮವಾರ ಉತ್ತಮ ಮಳೆ ಆಗಿದೆ.

ಚಿಕ್ಕಮಗಳೂರು ಜಿಲ್ಲೆಯ ಹಲವೆಡೆ ಧಾರಾಕಾರ ಮಳೆಯಾಗಿದೆ. .

**ಸಿಡಿಲು ಬಡಿದು ಹಸು, ಎಮ್ಮೆ ಸಾವು:** ದಾವಣಗೆರೆ ಜಿಲ್ಲೆಯ ಹಲವೆಡೆ ಗುಡುಗು, ಸಿಡಿಲು ಸಹಿತ ಉತ್ತಮ ಮಳೆಯಾಗಿದೆ. ವಿಜಯನಗರ ಜಿಲ್ಲೆಯ ಅರಸೀಕೆರೆ ಹೋಬಳಿಯ ಪುಣಭಘಟ್ಟ ಗ್ರಾಮದಲ್ಲಿ ಪ್ರಭು ಅವರಿಗೆ ಸೇರಿದ ಎಮ್ಮೆಗೆ ಸಿಡಿಲು ಬಡಿದು ಮೃತಪಟ್ಟಿದೆ. ಡಗ್ಗಿನ ಬಸಾಪುರ ಗ್ರಾಮದ ಹೊನ್ನಕ್ಕ ಅವರಿಗೆ ಸೇರಿದ ಹಸು ಸಿಡಿಲಿಗೆ ಬಲಿಯಾಗಿದೆ.

ಬಳ್ಳಾರಿಯ ವಿವಿಧೆಡೆ ಉತ್ತಮ ಮಳೆ ಸುರಿಯಿತು. ಕೂಡ್ಲಿಗಿ ತಾಲ್ಲೂಕಿನ ಕಾನಹೊಸಳ್ಳಿ ಸಮೀಪದ ನೆಲಬೊಮ್ಮನಹಳ್ಳಿಯಲ್ಲಿ ಸಿಡಿಲು ಬಡಿದು ಬಾಲರಾಜ್ ಅವರ 18 ಮೇಕೆಗಳು ಮೃತಪಟ್ಟಿವೆ.

ಹಾವೇರಿ, ಗದಗ ಮತ್ತು ಕೊಡಗು ಜಿಲ್ಲೆಗಳ ಹಲವೆಡೆ ಉತ್ತಮ ಮಳೆಯಾಗಿದೆ.



ಸೋದೆ ಶ್ರೀಗಳೊಂದಿಗೆ ಸನ್ಯಾಸಾಶ್ರಮ ಸ್ವೀಕರಿಸಲಿರುವ ಅನಿರುದ್ಧ ಸರಳತ್ತಾಯ ಹಾಗೂ ಅವರ ಮನೆಯವರು

## ಶೀರೂರು ಮೂಲ ಮಠದಲ್ಲಿ ಸನ್ಯಾಸ ಸ್ವೀಕಾರ

ಪ್ರಜಾವಾಣಿ ವಾರ್ತೆ

ಹಿರಿಯಡಕ (ಉಡುಪಿ): ಶೀರೂರು ಮಠದ ನೂತನ ಯತಿಯ ಸನ್ಯಾಸ ಸ್ವೀಕಾರ ಹಾಗೂ ಪಟ್ಟಾಭಿಷೇಕ ಕಾರ್ಯಕ್ರಮವು ಇಲ್ಲಿಗೆ ಸಮೀಪದ ಶೀರೂರು ಮೂಲ ಮಠದಲ್ಲಿ ಮೇ 11ರಿಂದ 14ರವರೆಗೆ ನಡೆಯಲಿದೆ.

ಶಿರಸಿ ತಾಲ್ಲೂಕಿನ ಸೋಂದಾ ಕ್ಷೇತ್ರದಲ್ಲಿ ಕಾರ್ಯಕ್ರಮ ಆಯೋಜಿಸಲು ಸೋದೆ ಮಠಾಧೀಶ ವಿಶ್ವವಲ್ಲಭ ತೀರ್ಥರು ಸಂಕಲ್ಪ ಮಾಡಿದ್ದರು. ಲಾಕ್‌ಡೌನ್ ಮಾರ್ಗಸೂಚಿಯಪಾಲನೆಗೆ, ಈ ಕಾರ್ಯಕ್ರಮವನ್ನು ಶೀರೂರು ಮೂಲ ಮಠಕ್ಕೆ ಸ್ಥಳಾಂತರಿಸಲಾಗಿದೆ.

ಸನ್ಯಾಸಾಶ್ರಮ ಸ್ವೀಕರಿಸಲಿರುವ ವಟುವು ಈಗಾಗಲೇ ಪೋಷಕರ ಜೊತೆಗೆ ಪುಣ್ಯ ಕ್ಷೇತ್ರಕ್ಕೆ ಭೇಟಿ ನೀಡಿ, ದೇವರ ದರ್ಶನ ಪೂರ್ಣಗೊಳಿಸಿದ್ದಾರೆ. ಉಡುಪಿಯ ಅಷ್ಟಮಠದ ಯತಿಗಳ ಆಶೀರ್ವಾದದೊಂದಿಗೆ ಫಲ ಮಂತ್ರಾಕ್ಷತೆ ಸ್ವೀಕರಿಸಿದ್ದಾರೆ.

## ಹಸಿವಿನಿಂದ ವ್ಯಕ್ತಿ ಸಾವು

ಚಿಕ್ಕನಾಯಕನಹಳ್ಳಿ: ಕೊರೊನಾ ಸೋಂಕು ನಿಯಂತ್ರಿಸಲು ಕರ್ಫ್ಯೂ, ಲಾಕ್‌ಡೌನ್ ಜಾರಿ ಮಾಡಿದ್ದು, ಈ ಸಮಯದಲ್ಲಿ ಊಟ ಸಿಗದೆ ಪಟ್ಟಣದವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದಾರೆ.

ಇಲ್ಲಿನ ಬ್ರಾಹ್ಮಣರ ಬೀದಿಯ ಸೂರಪ್ಪ (65) ಹಸಿವಿನಿಂದ ಬಳಲಿ ಶನಿವಾರ ಮೃತಪಟ್ಟಿದ್ದಾರೆ. ಸೂರಪ್ಪ ಹಾಗೂ ಅವರ ತಮ್ಮ ನೀಲಕಂಠಪ್ಪ ಒಟ್ಟಿಗೆ ವಾಸವಾಗಿದ್ದರು. ಇಬ್ಬರಿಗೂ ವಿವಾಹವಾಗಿರಲಿಲ್ಲ. ವಾಸಿಸಲು ಸ್ವಂತ ಮನೆ ಬಿಟ್ಟರೆ, ಕೆಲಸ ಹಾಗೂ ಆದಾಯದ ಮೂಲ ಇರಲಿಲ್ಲ. ಪಡಿತರ ಧಾನ್ಯ ಹಾಗೂ ಬರುವ ಮಾಸಾಶನದಿಂದ ಜೀವನ ಸಾಗಿಸುತ್ತಿದ್ದರು.

ಸೂರಪ್ಪ ಸಹೋದರರೊಬ್ಬರು ಬೆಂಗಳೂರಿನಲ್ಲಿ ನೆಲೆಸಿದ್ದು, ಚಿಕ್ಕನಾಯಕನಹಳ್ಳಿ ಪಟ್ಟಣದ ಹೋಟೆಲೊಂದನ್ನು ಗೊತ್ತುಪಡಿಸಿ ಅಲ್ಲಿ ಊಟದ ವ್ಯವಸ್ಥೆ ಮಾಡಿದ್ದರು. ಕರ್ಫ್ಯೂ ಜಾರಿ ಬಳಿಕ ಭಯಪಟ್ಟು ಅವರು, ಮನೆಯಿಂದ ಹೊರಗೆ ಬಂದಿರಲಿಲ್ಲ ಎನ್ನಲಾಗಿದೆ.

## ನಗರ ಕೇಂದ್ರಿತ ಮಾರ್ಗಸೂಚಿ ಗ್ರಾಮೀಣರಿಗೆ ಪಜೀತಿ

ಒಂದನೇ ಪುಟದಿಂದ...

**ಮುಂಗಾರು ಬೇಸಾಯಕ್ಕೂ ತೊಡಕು:** ಜೂನ್ ಮೊದಲ ವಾರ ಮುಂಗಾರು ರಾಜ್ಯವನ್ನು ಪ್ರವೇಶಿಸುವ ಸಾಧ್ಯತೆ ಇದ್ದು, ಸಾಕಷ್ಟು ಕಡೆಗಳಲ್ಲಿ ರೈತರು ಕೃಷಿ ಚಟುವಟಿಕೆ ಆರಂಭಿಸುವ ಸಿದ್ಧತೆಯಲ್ಲಿ ಇದ್ದಾರೆ. ಹೊಲ–ಗದ್ದೆಗಳನ್ನು ಬಿತ್ತನೆಗೆ ಹದ ಮಾಡಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ಯಂತ್ರೋಪಕರಣಗಳು, ಬಿತ್ತನೆ ಬೀಜ, ರಸಗೊಬ್ಬರವನ್ನು ಪಟ್ಟಣಗಳಿಂದಲೇ ತರಬೇಕು. ಸರ್ಕಾರ ಕೃಷಿ ಚಟುವಟಿಕೆಗೆ ಅವಕಾಶ ನೀಡಿದೆ. ಆದರೆ, ಅಗತ್ಯ ಪರಿಕರಗಳನ್ನು ವಾಹನಗಳಲ್ಲಿ ತರಲು ಅವಕಾಶ ನೀಡದೇ ಇರುವುದು ಸರಿಯಲ್ಲ ಎನ್ನುತ್ತಾರೆ ಶೃಂಗೇರಿಯ ಮೋಹನ್.

ಸರ್ಕಾರದ ಮಾರ್ಗಸೂಚಿಯಲ್ಲಿ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಸ್ಪಷ್ಟಪಡಿಸಬೇಕು ಮತ್ತು ಪೊಲೀಸರಿಗೂ ಅಗತ್ಯ ಸೂಚನೆಗಳನ್ನು ನೀಡಬೇಕು. ಕೃಷಿ ಚಟುವಟಿಕೆಗಳಿಗೆ ಅಗತ್ಯ ಸಾಮಗ್ರಿಗಳನ್ನು ಒಯ್ಯಬಹುದು ಎಂದು ಹೇಳಿದ್ದರೂ, ಪೊಲೀಸರು ಒಯ್ಯಲು ಅವಕಾಶ ನೀಡುವುದಿಲ್ಲ. ಸಾರಾಸಗಟು ಲಾಠಿ ಬೀಸಿ ಅಟ್ಟುತ್ತಾರೆ ಎಂದು ಬ್ರಹ್ಮಾವರದ ರವೀಂದ್ರ ರಾವ್ ಹೇಳಿದರು.

**ಆಸ್ಪತ್ರೆ, ಔಷಧಕ್ಕೂ ತೊಡಕು:** ಅನಾರೋಗ್ಯ ಪೀಡಿತರನ್ನು ಆಸ್ಪತ್ರೆಗಳಿಗೆ ಕರೆದೊಯ್ಯಲು ಮತ್ತು ಔಷಧ ತರಲು ಹೋಗುವವರಿಗೆ ವಾಹನಗಳ ಮೇಲೆ ನಿರ್ಬಂಧ ವಿಧಿಸಲಾಗಿದೆ. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ವೈದ್ಯರ ಚೀಟಿ ಒಯ್ದರೆ ಬಿಡುತ್ತಾರೆ. ಆದರೆ, ಗ್ರಾಮಾಂತರ ಪ್ರದೇಶದಲ್ಲಿ ವಾಹನಗಳು ಸಿಗುವುದೇ ಕಷ್ಟ. ಆದ್ದರಿಂದ, ಆಸ್ಪತ್ರೆ ಮತ್ತು ಔಷಧ ತರಲು ಹೋಗುವವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳದಂತೆ ಪೊಲೀಸರಿಗೆ ಸೂಚಿಸಬೇಕು ಎಂದು ಬೀರೂರಿನ ಶಿವಕುಮಾರಸ್ವಾಮಿ ಕೋರಿದರು.

**ಎಷ್ಟು ಹೊತ್ತುಕೊಂಡು ಬರಲುಸಾಧ್ಯ?:** ವಯಸ್ಸಾದವರು ಮಾತ್ರವಲ್ಲ, ಯುವಕರಾದರೂ ಸರಿ, ನಡೆದುಕೊಂಡು ಹೋಗಿ ಎಷ್ಟು ಸಾಮಾನು ತರಲು ಸಾಧ್ಯ? 5 ರಿಂದ 10 ಕೆ.ಜಿ ಹೊತ್ತುಕೊಂಡು ತರಲು ಸಾಧ್ಯವೇ? ನಿಯಮ ಮಾಡುವಾಗ ಬುದ್ಧಿ ಇರಬೇಕಲ್ಲ ಎಂದು ಅಶ್ವತ್ಥನಾರಾಯಣ ಎಂಬುವರು ಆಕ್ರೋಶ ವ್ಯಕ್ತಪಡಿಸಿದರು.

**ಅಂತ್ಯ ಸಂಸ್ಕಾರಕ್ಕೂ ಬಿಡುತ್ತಿಲ್ಲ:** ಕುಟುಂಬದವರಲ್ಲಿ ಯಾರಾದರೂ ಮೃತಪಟ್ಟಿದ್ದರೆ ಅಂತ್ಯ ಸಂಸ್ಕಾರಕ್ಕೆ ಹೋಗಲು ಪೊಲೀಸರು ಬಿಡುತ್ತಿಲ್ಲ. ಕೋವಿಡೇತರ ಕಾರಣದಿಂದ ಮೃತಪಟ್ಟವರ ಅಂತ್ಯಸಂಸ್ಕಾರಕ್ಕೆ 5 ಕ್ಕಿಂತ ಹೆಚ್ಚು ಜನ ಪಾಲ್ಗೊಳ್ಳಲು ಅವಕಾಶ ನೀಡಲು ಸಮಸ್ಯೆ ಏನು ಎಂಬುದು ಅರ್ಥವಾಗುತ್ತಿಲ್ಲ. ಹೆಣ ಹೊರುವುದಕ್ಕೆ ನಾಲ್ಕು ಜನ ಬೇಕು. ಹಾಗಿರುವಾಗ ಐದು ಜನಕ್ಕೆ ಸೀಮಿತಗೊಳಿಸಿದರೆ ಹೇಗೆ ಸಾಧ್ಯ ಎಂದು ಸಾರ್ವಜನಿಕರ ಪ್ರಶ್ನೆ.

ಪೋಷಕರು ಮೃತಪಟ್ಟರೆ ಅವರ ಮಕ್ಕಳಾದರೂ ಪಾಲ್ಗೊಳ್ಳಬೇಕು. ಅಂತರ ಜಿಲ್ಲೆ ಪ್ರಯಾಣ ನಿರ್ಬಂಧಿಸಿರುವುದರಿಂದ ಅಂತ್ಯಕ್ರಿಯೆಗೂ ಹೋಗಲಾರದ ಪರಿಸ್ಥಿತಿ ಇದೆ. ಈ ಸಂದರ್ಭದಲ್ಲಿ ಪಾಸ್ ನೀಡುವ ವ್ಯವಸ್ಥೆಯನ್ನಾದರೂ ಜಾರಿಗೊಳಿಸಲಿ ಎಂಬ ಒತ್ತಾಯವೂ ಸಾರ್ವಜನಿಕರದ್ದಾಗಿದೆ.





ಬೀದರ್ ಜಿಲ್ಲೆ ಬಸವಕಲ್ಯಾಣದಲ್ಲಿ ವಾಹನ ಸಂಚಾರ ಇಲ್ಲದ ಕಾರಣ, ಅನಾರೋಗ್ಯ ಪೀಡಿತ ಬಾಲಕಿಯನ್ನು ತಳ್ಳುಗಾಡಿಯಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಸಹೋದರಿಯನ್ನು ಸಹೋದರ ಹಿಡಿದುಕೊಂಡು ಕುಳಿತರೆ, ತಾಯಿ ಮೆಹಮೂದಾ ಗಾಡಿಯೊಂದಿಗೆ ಸಾಗಿದರು. ಸಂಬಂಧಿಕರೊಬ್ಬರು ಗಾಡಿ ತಳ್ಳಿದರು

## ತಳ್ಳು ಗಾಡಿಯಲ್ಲಿ ಮಗಳನ್ನು ಆಸ್ಪತ್ರೆಗೆ ಕರೆದೊಯ್ದ ತಾಯಿ

ಬಸವಕಲ್ಯಾಣ (ಬೀದರ್ ಜಿಲ್ಲೆ): ಲಾಕ್‌ಡೌನ್ ಕಾರಣ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಿದ್ದರಿಂದ ಇಲ್ಲಿಯ ತ್ರಿಪುರಾಂತ ಓಣಿ ನಿವಾಸಿ ಮೆಹಮೂದಾ ಅವರು ಅನಾರೋಗ್ಯ ಪೀಡಿತ ಮಗಳನ್ನು ತಳ್ಳು ಗಾಡಿಯಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು.

ಆಟೊಗಳು ಸಂಚರಿಸಬಹುದು ಎಂದು ಮಧ್ಯಾಹ್ನದವರೆಗೆ ಕಾದು ಕುಳಿತರೂ ಪ್ರಯೋಜನವಾಗಲಿಲ್ಲ. ಆಗ, ಮನೆ ಎದುರಿನ ತಳ್ಳು ಗಾಡಿಯ ಆಸರೆ ಪಡೆದರು. ನೆಂಟರೊಬ್ಬರ ನೆರವಿನಿಂದ ಎರಡು ಕಿಲೋ ಮೀಟರ್‌ನಷ್ಟು ತಳ್ಳು ಗಾಡಿಯಲ್ಲೇ ಬಾಲಕಿಯನ್ನು ಕರೆದುಕೊಂಡು ಹೋದರು. ಆದರೆ, ಕೆಲ ಖಾಸಗಿ ಆಸ್ಪತ್ರೆಗಳು ಕೂಡ ಬಂದ್ ಇದ್ದ ಕಾರಣ ಮತ್ತೆ ತ್ರಿಪುರಾಂತಕ್ಕೆ ಬಂದು ಕೆಜಿಎನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದರು.

'ಆಸ್ಪತ್ರೆಗೆ ಹೋಗುವುದು ಅನಿವಾರ್ಯ ಆಗಿತ್ತು. ಆಟೊ ಸಿಗಲಿಲ್ಲ. ಹೀಗಾಗಿ ಮಗಳನ್ನು ತಳ್ಳು ಗಾಡಿಯಲ್ಲಿ ಕೂಡಿಸಿಕೊಂಡು ಹೋದೆವು' ಎಂದು ತಾಯಿ ಮೆಹಮೂದಾ ಹೇಳಿದರು.

## ನಿಧನ ವಾರ್ತೆ

### ಹಿರಿಯ ಕಲಾವಿದ ಆರ್.ಎಸ್.ರಾಜಾರಾಂ



ಬೆಂಗಳೂರು: ಹಿರಿಯ ನಟ, ರಾಜ್ಯ ಸರ್ಕಾರದ ನಿವೃತ್ತ ಅಧೀನ ಕಾರ್ಯದರ್ಶಿ ಆರ್.ಎಸ್. ರಾಜಾರಾಂ (83) ಸೋಮವಾರ ಕೋವಿಡ್‌ನಿಂದಾಗಿ ನಿಧನರಾದರು.

ಚಲನಚಿತ್ರ, ರಂಗಭೂಮಿ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಕ್ರಿಯರಾಗಿದ್ದ ಅವರು ಹಲವು ರಂಗ ಸಂಘಟನೆಗಳನ್ನೂ ಸ್ಥಾಪಿಸಿದ್ದರು. ಮಲ್ಲೇಶ್ವರದಲ್ಲಿ 'ರಸಿಕ ರಂಜನಿ ಕಲಾವಿದರು' ಸಂಸ್ಥೆ ಕಟ್ಟಿ, ಪರ್ವತವಾಣಿ, ಕೈಲಾಸಂ, ದಾಶರಥಿ ದೀಕ್ಷಿತ್, ಕೆ.ಗುಂಡಣ್ಣ ಮುಂತಾದವರ ನಾಟಕಗಳಲ್ಲಿ ಅಭಿನಯಿಸಿದರು. 'ಹಣ ಹದ್ದು', 'ಮಗು ಮದ್ವೆ', 'ಪಂಚಭೂತ', 'ಹೋಂರೂಲು', 'ಅವರೇ ಇವರು-ಇವರೇ ಅವರು' ಮೊದಲಾದವು ಅವರ ಅಭಿನಯದ ಕೆಲವು ಪ್ರಸಿದ್ಧ ನಾಟಕಗಳು.

1964ರಲ್ಲಿ ಸಚಿವಾಲಯ ಉದ್ಯೋಗಿಗಳೊಡನೆ 'ಸಚಿವಾಲಯ ಸಾಂಸ್ಕೃತಿಕ ಸಂಘ' ಸ್ಥಾಪಿಸಿದರು. ಆ ಮೂಲಕ ಕೋಲ್ಕತ್ತದಲ್ಲಿ ನಡೆದ ಸಚಿವಾಲಯ ಕ್ಲಬ್ ನೌಕರರ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

1972ರಿಂದ 'ನಟರಂಗ' ಮತ್ತು 1983ರಿಂದ 'ವೇದಿಕೆ'ಯ ರಂಗ ಚಟುವಟಿಕೆಗಳಲ್ಲಿ ತೊಡಗಿ ಸಿ.ಆರ್. ಸಿಂಹ ಅವರ ನಿರ್ದೇಶನದಲ್ಲಿ ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದರು. ಬಿ.ವಿ. ಕಾರಂತ, ಎಂ.ಎಸ್. ಸತ್ಯು, ಶ್ರೀನಿವಾಸ್ ಜಿ. ಕಪ್ಪಣ್ಣ, ಜಯತೀರ್ಥ ಜೋಶಿ, ಸಿ.ಎಚ್. ಲೋಕನಾಥ್, ಆರ್. ನಾಗೇಶ್, ಪ್ರಕಾಶ್ ಬೆಳವಾಡಿ ಮುಂತಾದವರ ನಿರ್ದೇಶನದಲ್ಲಿ 'ಮಂಡೋದರಿ', 'ವಿಗಡವಿಕ್ರಮರಾಯ', 'ಎಚ್ಚಮನಾಯಕ', 'ಟಿಪ್ಪುಸುಲ್ತಾನ್', 'ಕಿತ್ತೂರು ಚೆನ್ನಮ್ಮ', 'ರಕ್ತಾಕ್ಷಿ', 'ಸದಾರಮೆ', 'ಕಾಕನ ಕೋಟೆ', 'ತುಘಲಕ್', 'ಮೃಚ್ಛಕಟಿಕ', 'ಸಂಕ್ರಾಂತಿ', 'ಅಗ್ನಿ ಮತ್ತು ಮಳೆ' ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದರು. ಕೋಲಾರ ಜಿಲ್ಲೆಯ ಕೆ.ಜಿ. ಎಫ್‌ನಲ್ಲಿ 1938ರ ಜುಲೈ 10ರಂದು ಜನಿಸಿದ ರಾಜಾರಾಂ ರಂಗಭೂಮಿಗೆ ನೀಡಿದ ಕೊಡುಗೆ ಮಹತ್ತರವಾದುದು.

ಅವರಿಗೆ ಪತ್ನಿ, ಮೂವರು ಪುತ್ರಿಯರು ಇದ್ದಾರೆ.


### ಅರವಿಂದ ಕಟ್ಟಿ



ವಿಜಯಪುರ: ಇಲ್ಲಿಯ ಶಾಂತವೀರ ನಗರ ನಿವಾಸಿ, ಛಾಯಾಚಿತ್ರ ಕಲಾವಿದ ಅರವಿಂದ ಕಟ್ಟಿ (72) ಭಾನುವಾರ ಆಂಧ್ರ ಪ್ರದೇಶದ ಹಿಂದಪುರ ಪಟ್ಟಣದಲ್ಲಿ ನಿಧನರಾದರು.

ಚಿತ್ರಕಲೆ, ಛಾಯಾಚಿತ್ರ ಕಲಾವಿದರ ಕ್ರಿಯಾ ಸಂಸ್ಥೆ ಹುಟ್ಟು ಹಾಕಿದ್ದರು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು.

### ಮಾಜಿ ಶಾಸಕ ಮನೋಹರ ಕಟ್ಟೀಮನಿ



ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ಚಿಕ್ಕೋಡಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಮನೋಹರ ಶಿವಪುತ್ರ ಕಟ್ಟೀಮನಿ (65) ಅನಾರೋಗ್ಯದಿಂದ ಇಲ್ಲಿನ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ, ಇಬ್ಬರು ಸಹೋದರರು ಮತ್ತು ಸಹೋದರಿ ಇದ್ದಾರೆ.

'ಮಧುಮೇಹ ಸಮಸ್ಯೆಯಿಂದ ಬಳಲುತ್ತಿದ್ದ ಅವರನ್ನು ಮೂರು ದಿನಗಳ ಹಿಂದೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೃದಯಾಘಾತದಿಂದ ನಿಧನರಾದರು' ಎಂದು ಕುಟುಂಬದವರು ತಿಳಿಸಿದರು.

ಮನೋಹರ ಅವರು 1999ರಲ್ಲಿ ನಡೆದ ಚುನಾವಣೆಯಲ್ಲಿ ಚಿಕ್ಕೋಡಿ (ಮೀಸಲು) ಕ್ಷೇತ್ರದಿಂದ ಸಂಯುಕ್ತ ಜನತಾದಳ (ಜೆಡಿಯು) ಪಕ್ಷದಿಂದ ಸ್ಪರ್ಧಿಸಿ ಗೆದ್ದಿದ್ದರು.



# ಅನಾರೋಗ್ಯದಲ್ಲಿ ಆಹಾರ


ಡಾ. ವಿಜಯಲಕ್ಷ್ಮಿ ಪಿ.

ಇಂದು ಇಡೀ ಪ್ರಪಂಚವನ್ನೇ ಕಾಡುತ್ತಿದೆ ಅನಾರೋಗ್ಯ. ಎಂದಿಗೆ ಇದರಿಂದ ಮುಕ್ತಿಯೋ ಗೊತ್ತಿಲ್ಲ. ಅನಾರೋಗ್ಯ ಬಾರದಂತೆ ತಡೆಯಲು ಅನೇಕ ಉಪಾಯಗಳನ್ನು ಪ್ರತಿಯೊಬ್ಬರೂ ಒಂದೊಂದು ವಿಧದಲ್ಲಿ ಪಾಲಿಸುತ್ತಿದ್ದಾರೆ. ಇಷ್ಟಾದರೂ ಅನಾರೋಗ್ಯ ಕಾಡದೇ ಬಿಡುತ್ತಿಲ್ಲ, ಹುಡುಕಿಕೊಂಡು ಬಂದು ಕಾಟ ಕೊಡುತ್ತಿದೆ! ಏನೆಲ್ಲಾ ಮಾಡಿದರೂ ಅನಾರೋಗ್ಯ ಕಾಡಿತು ಎಂದಾದರೆ, ಅದನ್ನು ಜಯಿಸಿ ಗೆಲ್ಲಲೇ ಬೇಕಲ್ಲವೇ? ಅಲ್ಪಪ್ರಮಾಣದ ಅಥವಾ ಸ್ವಲ್ಪ ಹೆಚ್ಚಾದರೂ ತಡೆಯುವ ಸ್ಥಿತಿಯಲ್ಲಿ ಇರುವ ಅನಾರೋಗ್ಯದ ಅವಸ್ಥೆಯಲ್ಲಿ ಆಸ್ಪತ್ರೆಗೆ ದಾಖಲಾಗದೇ ಅರೋಗ್ಯವನ್ನು ಮರಳಿ ಪಡೆಯುವ ಪ್ರಯತ್ನದಲ್ಲಿರುವವರಿಗೆ ಕಾಡುವ ಮೊದಲ ಪ್ರಶ್ನೆ ಎಂಥ ಆಹಾರವನ್ನು ಸೇವಿಸಬೇಕು? ಯಾವ ಆಹಾರದಿಂದ ತೊಂದರೆ ಆಗುತ್ತದೆ?

> **ಮಾನಸಿಕ ಒತ್ತಡ, ಆತಂಕ, ಭಯ, ಪ್ರತಿಯೊಂದು ವಿಷಯಕ್ಕೂ ಸಿಟ್ಟಾಗುವುದು, ಅಳುವುದು – ಇವೆಲ್ಲವೂ ಅನಾರೋಗ್ಯ ವರ್ಧಕಗಳು!**

> ಇಂದಿನ ವಿಷಮ ಸಂದರ್ಭದಲ್ಲಿ ನಮಗೆ ಬೇಕಾಗಿರುವುದು ಸರಿಯಾದ ತಿಳಿವಳಿಕೆ ಮತ್ತು ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಬಲ್ಲ ಮಾನಸಿಕ ಮತ್ತು ದೈಹಿಕ ಬಲ. ಇದಕ್ಕಾಗಿ ನಮ್ಮ ಆಹಾರ–ಆಚಾರ–ವಿಚಾರಗಳ ಪಾತ್ರ ತುಂಬ ದೊಡ್ಡದು.

**ರೋಗಲಕ್ಷಣಗಳ ತೀವ್ರತೆ ಇಲ್ಲದಿರುವವರು ಮನೆಯಲ್ಲೇ ಚಿಕಿತ್ಸೆ ಪಡೆಯುವಾಗ ತೆಗೆದುಕೊಳ್ಳಬೇಕಾದ ಆಹಾರವಿಧಾನ ಯಾವುದು ಎಂದರೆ:**




- ಅತಿಯಾದ ಬಾಯಾರಿಕೆ ಇದ್ದರೆ ಸೊಗದೇಬೇರು, ನೆಲ್ಲಿಕಾಯಿ, ಲಾವಂಚ, ಕೊನ್ನಾರಿಗಡ್ಡೆ – ಇವುಗಳನ್ನು ಸುಮಾರು ಎರಡು ಲೀಟರ್ ನೀರಿಗೆ ಅರ್ಧ ಚಮಚದಷ್ಟು ಪುಡಿಯನ್ನು ಹಾಕಿ ಕುದಿಸಿ ತಣಿದ ನಂತರ ಇದನ್ನು ಕುಡಿಯುವುದು. ನೀರು ಕುಡಿಯಬೇಕಾದ ಎಲ್ಲ ಸಂದರ್ಭದಲ್ಲಿಯೂ ಇದನ್ನೇ ಕುಡಿಯಬೇಕು.
- ಉರಿ ಸಹಿತವಾದ ಕೆಮ್ಮು ಅಥವಾ ಮೈ ಉರಿ ಇತ್ಯಾದಿಗಳಿದ್ದಾಗ ಶ್ರೀಗಂಧ, ತಾವರೆಹೂವನ್ನು ಕುದಿಸಿ ಕುಡಿಯುವುದು; ಕಫ ಬರುತ್ತಿದ್ದರೆ, ಶುಂಠಿಯನ್ನು ಜಜ್ಜಿ, ಬಿಸಿನೀರಿನಲ್ಲಿ ರಾತ್ರಿ ನೆನೆ ಇಟ್ಟು ಬೆಳಗ್ಗೆ ಕುಡಿಯುವುದು. ಅತಿಮಧುರದ ಬೇರನ್ನು ಜಗಿಯುವುದು ಅಥವಾ ಅತಿಮಧುರದ ಪುಡಿಯನ್ನು ಜೇನು ಅಥವಾ ತುಪ್ಪದಲ್ಲಿ ಕಲಸಿ ನೆಕ್ಕುವುದು.
- ಅತಿಯಾದ ಸುಸ್ತು, ಮೈಕೈ ನೋವು, ಕಣ್ಣುರಿ, ಬಾಯಿರುಚಿ ಇಲ್ಲದಿರುವುದು ಇವುಗಳಿದ್ದಾಗ ನೆಲ್ಲಿಕಾಯಿಯನ್ನು ತುಪ್ಪದಲ್ಲಿ ಕಲೆಸಿ ನೆಕ್ಕಿ ಬಿಸಿನೀರು ಕುಡಿಯುವುದು. ಒಣದ್ರಾಕ್ಷಿಯನ್ನು ನೀರಿನಲ್ಲಿ ನೆನೆಸಿ ಬೆಳಿಗ್ಗೆ ಕಿವುಚಿ ಅದರ ರಸವನ್ನು ಕುಡಿಯುವುದು, ಭತ್ತದ ಅರಳು, ಒಣದ್ರಾಕ್ಷಿ, ಖರ್ಜೂರ – ಇವುಗಳನ್ನು ಒಟ್ಟಿಗೆ ಕಡೆದು, ನೀರುಸೇರಿಸಿ ಪಾನಕದಂತೆ ಸೇವಿಸುವುದು.
- ಹಸಿವೆಯಾಗುತ್ತಿಲ್ಲ, ಸ್ವಲ್ಪ ಜ್ವರ, ಅಜೀರ್ಣದಂತೆ ಎನಿಸುವುದು, ಹುಳಿತೇಗು ಬರುವುದು, ಸುಸ್ತು, ಕೆಮ್ಮು ಇತ್ಯಾದಿಗಳಿದ್ದಾಗ ದ್ರಾಕ್ಷಿ, ಅಮೃತಬಳ್ಳಿ, ಶುಂಠಿ, ಪರ್ಪಾಷ್ಟಕ – ಇವುಗಳನ್ನು ಚೆನ್ನಾಗಿ ಅರೆದು, ರಾತ್ರಿ ಕುದಿಸಿ ತಣಿಸಿದ ನೀರಿನಲ್ಲಿ ನೆನೆಸಿಟ್ಟು, ಬೆಳಗ್ಗೆ ಅದನ್ನು ಹಿಂಡಿ ಅದರ ರಸವನ್ನು ಸೇವಿಸುವುದು. ಕೇವಲ ಈರುಳ್ಳಿಯನ್ನು ನೀರಿನಲ್ಲಿ ಬೇಯಿಸಿ, ಉಪ್ಪು, ನಿಂಬೆರಸ ಹಾಕಿ ತುಪ್ಪ, ಸಾಸಿವೆ, ಜೀರಿಗೆ, ಇಂಗಿನ ಒಗ್ಗರಣೆ ಕೊಟ್ಟು ಅನ್ನದೊಟ್ಟಿಗೆ ಕಲೆಸಿ ತಿನ್ನುವುದು ಅಥವಾ ಹಾಗೇ ಕುಡಿದರೂ ಅನುಕೂಲವಾಗುತ್ತದೆ.
- ತರಕಾರಿಗಳಲ್ಲಿ ಪ್ರಧಾನವಾಗಿ ಪಡವಲಕಾಯಿ, ಎಲೆ, ಹೀರೇಕಾಯಿ, ಬೂದುಗುಂಬಳ, ಸೋರೆಕಾಯಿ – ಇವುಗಳನ್ನು ತೊಗರಿಬೇಳೆ ಅಥವಾ ಹೆಸರುಬೇಳೆ ಮತ್ತು ನೆಲ್ಲಿಕಾಯಿ ಹಾಕಿ ಬೇಯಿಸಿ ದಾಲ್ ತೊವ್ವೆಯಂತೆ ಅಥವಾ ಸಾರಿನಂತೆ ತಯಾರಿಸಿ ಸೇವಿಸುವುದು. ಇದಕ್ಕೆ ಸಾಸಿವೆ ಜೀರಿಗೆ ಮತ್ತು ಇಂಗನ್ನು ಸೇರಿಸಿ ತುಪ್ಪದ ಒಗ್ಗರಣೆ ಕೊಡಬೇಕು.
- ಉಸಿರು ತೆಗೆದುಕೊಳ್ಳುವಾಗ ಹಿಂಸೆ, ಉರಿ ಆಗುತ್ತಿದ್ದರೆ, ವಾಸನಾಗ್ರಹಣ ಇಲ್ಲದಿದ್ದರೆ ಮೂಗಿನ ಒಳಭಾಗಕ್ಕೆ ತುಪ್ಪವನ್ನು ಹಚ್ಚಿ ಜೋರಾಗಿ ನಾಲ್ಕಾರು ಬಾರಿ ಉಸಿರನ್ನು ಎಳೆದುಕೊಳ್ಳುವುದು, ಬಿಸಿನೀರಿನ ಹಬೆ ತೆಗೆದುಕೊಳ್ಳುವುದು. ಇದರಿಂದ ಉಸಿರಾಡಲು ಅನುಕೂಲವಾಗುತ್ತದೆ ಮತ್ತು ವಾಸನೆಯೂ ತಿಳಿಯುತ್ತದೆ.
- ದಾಳಿಂಬೆ ಅಥವಾ ಕಪ್ಪು ದ್ರಾಕ್ಷಿಹಣ್ಣುಗಳನ್ನು ರುಬ್ಬಿ, ಸ್ವಲ್ಪ ನೀರು ಹಾಕಿ ಕುದಿಸಿ, ತಣಿದ ಮೇಲೆ ಶೋಧಿಸಿ ಕುಡಿಯುವುದರಿಂದ ದೇಹದ ಬಲವನ್ನು ಹೆಚ್ಚಿಸುತ್ತದೆ ಮತ್ತು ಸರಿಯಾಗಿ ಹಸಿವೆಯುಂಟಾಗುವಂತೆಯೂ ಮಾಡುತ್ತದೆ.
- ನೆಲ್ಲಿಕಾಯಿ, ದಾಳಿಂಬೆಯನ್ನು ಭತ್ತದ ಅಥವಾ ಜೋಳದ ಅರಳಿನೊಟ್ಟಿಗೆ ಅರೆದು ಅದಕ್ಕೆ ತಕ್ಕಷ್ಟು ನೀರನ್ನು ಸೇರಿಸಿ, ಸಕ್ಕರೆ ಜೇನು ಸೇರಿಸಿ ಸೇವಿಸುವುದರಿಂದ ದೇಹದ ಬಲ ಹೆಚ್ಚುವುದರಲ್ಲಿ ಸಂಶಯವಿಲ್ಲ.
- ಮೇಲೆ ಸೂಚಿಸಿದ ಆಹಾರಪದ್ಧತಿಗಳನ್ನು ಅನುಸರಿಸುವುದರಿಂದ ಅನುಕೂಲವಾದರೆ ಕೆಲವು ಪದಾರ್ಥಗಳು ಅನಾರೋಗ್ಯವನ್ನು ಹೆಚ್ಚಿಸುತ್ತವೆ. ವಿಪರೀತ ಉಪ್ಪು, ಖಾರ, ಹಸಿಮೆಣಸಿನಕಾಯಿ, ಕಾಳುಮೆಣಸಿನ ಪುಡಿ, ಬೆಳ್ಳುಳ್ಳಿ, ಹಾಲು-ಹಣ್ಣನ್ನು, ಹಾಲು-ಮೊಟ್ಟೆಯನ್ನು ಒಟ್ಟಿಗೆ ಸೇವಿಸುವುದು, ಹಾಲನ್ನಕ್ಕೆ ಉಪ್ಪು ಬೆರೆಸಿ, ಹಾಲಿಗೆ ಮೊಸರು ಅಥವಾ ಮಜ್ಜಿಗೆಯನ್ನು ಬೆರೆಸುವುದು, ಹಗಲು ಹೆಪ್ಪಿಟ್ಟ ಮೊಸರು, ತಣ್ಣಗಿರುವ ಪದಾರ್ಥ, ಫ್ರಿಜ್‌ನ ಆಹಾರ, ಹಸಿಹಣ್ಣು ತರಕಾರಿಗಳು, ಮಾಂಸಾಹಾರ, ಜೀರ್ಣಕ್ಕೆ ಹೊರೆಯಾಗುವಂತಹ ಆಹಾರ – ಇವುಗಳ ಸೇವನೆಯನ್ನು ವರ್ಜಿಸಬೇಕು.
- ಹಾಗೆಯೇ ಗಾಳಿ, ಬಿಸಿಲಿನಲ್ಲಿ ಕುಳಿತುಕೊಳ್ಳುವುದು ಅಥವಾ ವ್ಯಾಯಾಮವನ್ನು ಮಾಡುವುದು, ಮಾನಸಿಕ ಒತ್ತಡ, ಆತಂಕ, ಭಯ, ಪ್ರತಿಯೊಂದು ವಿಷಯಕ್ಕೂ ಸಿಟ್ಟಾಗುವುದು, ಅಳುವುದು – ಇವೆಲ್ಲವೂ ಅನಾರೋಗ್ಯವರ್ಧಕಗಳೇ ಆಗಿವೆ.
- ಕೊನೆಯದಾಗಿ ಅರಿಸಿನ. ಇದರ ಅತಿಯಾದ ಬಳಕೆ ರಕ್ತವನ್ನು ಹೆಪ್ಪುಗಟ್ಟಿಸೀತು; ಮತ್ತು ಹಸಿ ಈರುಳ್ಳಿ ಉಸಿರು ಕಟ್ಟಿಸೀತು. ಇವುಗಳ ಉಪಯೋಗ ಅತಿಯಾಗಿ ಬೇಡ; ಎಚ್ಚರಿಕೆಯಿಂದ ಬಳಸಬೇಕು.

ವಿವೇಚನೆಯಿಂದ ನಮ್ಮ ಆಹಾರ–ಆಚಾರ–ವಿಚಾರಗಳನ್ನು ರೂಢಿಸಿಕೊಂಡು ಆರೋಗ್ಯವಂತರಾಗೋಣ. ನಮಗೆ ಆರೋಗ್ಯದ ವಿಷಯದಲ್ಲಾಗಲೀ ಆಹಾರದ ಬಗ್ಗೆಯಾಗಲೀ ಏನಾದರೂ ಸಂದೇಹಗಳು ಎದುರಾದರೆ ಕೂಡಲೇ ತಜ್ಞರನ್ನು ಸಂಪರ್ಕಿಸೋಣ. ಇಂದಿನ ವಿಷಮ ಸಂದರ್ಭದಲ್ಲಿ ನಮಗೆ ಬೇಕಾಗಿರುವುದು ಸರಿಯಾದ ತಿಳಿವಳಿಕೆ ಮತ್ತು ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಬಲ್ಲ ಮಾನಸಿಕ ಮತ್ತು ದೈಹಿಕ ಬಲ. ಇದಕ್ಕಾಗಿ ನಮ್ಮ ಆಹಾರ–ಆಚಾರ–ವಿಚಾರಗಳ ಪಾತ್ರ ತುಂಬ ದೊಡ್ಡದು. ❖

# ಜೀವದಾಯಿನಿ ಪ್ರಾಣಾಯಾಮ

**ಉಸಿರಾಟದ ಸಮಸ್ಯೆ ಕಾಡಿದಾಗ ಆಮ್ಲಜನಕ ಮಟ್ಟ ಏರಿಸಲು ಸಹಕರಿಸುವ ಪ್ರಾಣಾಯಾಮಗಳು**



ನಾಡಿಶೋಧನ (ಅನುಲೋಮ-ವಿಲೋಮ) ಪ್ರಾಣಾಯಾಮ

ಕೃಷ್ಣಿ ಶಿರೂರ

**ನನ್ನಮ್ಮಂಗೆ** ಅರವತ್ತೂರು ವಯಸ್ಸು. ಮನೆಯಲ್ಲೇ ಇರುವವರು. ಇದ್ದಕ್ಕಿದ್ದಂತೆ ದೇಹಪೂರ್ತಿ ನೋವು, ವಿಪರೀತ ಕೆಮ್ಮು, ತಲೆನೋವು, ಸ್ವಲ್ಪ ಜ್ವರ, ಸುಸ್ತು, ತಲೆಭಾರ ಕಾಡಿತು. ನನಗ್ಯಾಕೊ ಸಂದೇಹವಾಯಿತು. ಲಕ್ಷಣಗಳೆಲ್ಲವೂ ಕೋವಿಡ್‌ನದೆ ಆಗಿದ್ದವು. ಏನೇ ಆಗಲಿ; ಆಸ್ಪತ್ರೆಗೆ ಹೋಗಿ ಔಷಧ ಮಾಡುವ ಮೊದಲು ಸೀದಾ ಕೋವಿಡ್ ಸ್ವ್ಯಾಬ್ ಟೆಸ್ಟ್‌ಗೆ ಕರೆದುಕೊಂಡು ಹೋದೆ. ಜೊತೆಗೆ ನನ್ನದೂ ಟೆಸ್ಟ್ ಕೊಟ್ಟೆ.

ಮೂರು ದಿನ ಬಿಟ್ಟು ಅಮ್ಮನದು ಪಾಸಿಟಿವ್ ಇದೆ ಎಂದು ಕರೆ ಬಂತು. ಅಷ್ಟು ಹೊತ್ತಿಗಾಗಲೇ ಅಮ್ಮ ನಡೆಯದಷ್ಟು ನಿತ್ರಾಣರಾಗಿದ್ದರು. ಜಾಸ್ತಿಯಾಗುತ್ತಲೇ ಸಾಗಿದ ಕೆಮ್ಮಿನಿಂದ ಅವರಿಗೆ ಉಸಿರಾಟದ ಸಮಸ್ಯೆಯೂ ಎದುರಾಯಿತು. ಆ ಹೊತ್ತಿಗೆ ಆಮ್ಲಜನಕದ ಮಟ್ಟ ನೋಡೋಣವೆಂದರೆ ನನ್ನಲ್ಲಿ ಆಕ್ಸಿಮೀಟರ್ ಇರಲಿಲ್ಲ. ಯಾವ ಮೆಡಿಕಲ್‌ನಲ್ಲಿ ಕೇಳಿದರೂ ಸ್ಟಾಕ್ ಇಲ್ಲ ಎಂಬ ಉತ್ತರ. ಅಮ್ಮನ ಪರಿಸ್ಥಿತಿ ಬಿಗಡಾಯಿಸುತ್ತಲೇ ಸಾಗಿತು. ಇನ್ನು ಆಸ್ಪತ್ರೆಗೆ ಸೇರಿಸೋದೆ ಸರಿ ಎಂಬ ಯೋಚನೆ ಜೊತೆಯಾಯಿತು. ಅಂದೇ ರಾತ್ರಿ 11ಕ್ಕೆ ಆಕ್ಸಿಮೀಟರ್ ಲಭ್ಯವಾಯಿತು. ತಕ್ಷಣ ಚೆಕ್ ಮಾಡಿದರೆ ಆಮ್ಲಜನಕದ ಪ್ರಮಾಣ 82 ಎಂದು ತೋರಿಸುತ್ತಿತ್ತು. ಇನ್ನು ಆಸ್ಪತ್ರೆಗೆ ಸೇರಿಸುವುದೇ ಲೇಸು ಎಂಬ ನಿರ್ಧಾರಕ್ಕೆ ಬಂದಾಗ, ತಕ್ಷಣಕ್ಕೆ ನನಗೆ ಗೊತ್ತಿರುವ ಪ್ರಾಣಾಯಾಮದ ನೆನಪಾಯಿತು.


ಉಸಿರಾಟ ಪ್ರಕ್ರಿಯೆಯನ್ನು ಪ್ರಾಣಾಯಾಮದಿಂದ ಸರಿಪಡಿಸಬಹುದು ಎಂಬ ವಿಚಾರ ಗೊತ್ತಿತ್ತು. ಉಸಿರಾಟ ಸರಾಗವಾಗಬೇಕು ಅಂದರೆ ಆಮ್ಲಜನಕ ಸಮಸ್ಯೆ ಇರದು. ಅಂದರೆ ಪ್ರಾಣಾಯಾಮದಿಂದ ಆಮ್ಲಜನಕ ಲೆವೆಲ್ ತಹಬದಿಗೆ ಬರಬಹುದು ಎಂದು ತಕ್ಷಣ ವ್ಯಾಘ್ರ ಪ್ರಾಣಾಯಾಮ, ಕಪಾಲಭಾತಿ, ಅನುಲೋಮ–ವಿಲೋಮ (ನಾಡಿಶೋಧನ) ಜೊತೆಗೆ ದೀರ್ಘ ಉಸಿರಾಟ ಪ್ರಾಕ್ಟಿಸ್ ಮಾಡಿಸಿದೆ. ಕೆಲವೇ ನಿಮಿಷಗಳಲ್ಲಿ ಅವರಲ್ಲಿ ಆಮ್ಲಜನಕ ಮಟ್ಟ 92ಕ್ಕೆ ಏರಿತು. ಉಸಿರಾಟ ಸರಾಗವಾಯಿತು. ಇಷ್ಟಾದ ನಂತರ ಆಸ್ಪತ್ರೆ ಯೋಚನೆಯನ್ನೂ ಬಿಟ್ಟಾಯ್ತು. ಇವೇ ಪ್ರಾಣಾಯಾಮಗಳನ್ನು ಮೂರು ಹೊತ್ತು ಮಾಡಿಸಿದೆ. ಅವರ ಆರೋಗ್ಯ ಸುಧಾರಿಸುತ್ತ ಬಂದಿತು. ಈಗವರು ನಿತ್ಯ ಮೂರು ಹೊತ್ತು ಪ್ರಾಣ ಉಳಿಸಿದ ಪ್ರಾಣಾಯಾಮ ಮಾಡುತ್ತಿದ್ದಾರೆ. ಆಮ್ಲಜನಕ ಮಟ್ಟವೂ 97ಕ್ಕೆ ಏರಿತು. ಇಷ್ಟೆಲ್ಲ ಆದ ಮೇಲೆ ನಮಗೆಲ್ಲ ಸಮಾಧಾನ.

ಇಲ್ಲಿ ಅಮ್ಮನಿಗೆ ಸಹಾಯಕ್ಕೆ ಬಂದಿದ್ದು ವ್ಯಾಘ್ರ ಪ್ರಾಣಾಯಾಮ (ಟೈಗರ್ ಬ್ರೀಥಿಂಗ್), ಕಪಾಲಭಾತಿ, ಅನುಲೋಮ–ವಿಲೋಮ (ನಾಡಿಶೋಧ) ಪ್ರಾಣಾಯಾಮ ಹಾಗೂ ದೀರ್ಘ ಉಸಿರಾಟ ಕ್ರಿಯೆ.

ಕೋವಿಡ್–19ರ ಎರಡನೇ ಅಲೆಯಲ್ಲಿ ಕೋವಿಡ್ ಬಾಧಿತರಲ್ಲಿ ಹೆಚ್ಚಿನವರಿಗೆ ಆಮ್ಲಜನಕದ ಮಟ್ಟ ಇಳಿದು ಉಸಿರಾಟದ ಸಮಸ್ಯೆಯಾಗುತ್ತಿದೆ. ರೋಗಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಆಸ್ಪತ್ರೆಗಳಲ್ಲಿ ಬೆಡ್ ಕೂಡ ತಕ್ಷಣಕ್ಕೆ ಸಿಗುತ್ತಿಲ್ಲ. ಹೆಚ್ಚಿನ ಸಾವುಗಳು ಅದೇ ಕಾರಣದಿಂದ ಆಗುತ್ತಿವೆ. ಮನೆಯಲ್ಲೇ ಇದ್ದು ಆರೈಕೆ ಪಡೆಯುತ್ತಿರುವವರಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಾಗ ವಿಚಲಿತರಾಗದೇ ವ್ಯಾಘ್ರ ಪ್ರಾಣಾಯಾಮ, ಕಪಾಲಭಾತಿ, ಅನುಲೋಮ–ವಿಲೋಮ, ಭ್ರಾಮರಿಯನ್ನು ಮಾಡುವುದರಿಂದ ತಕ್ಷಣಕ್ಕೆ ಉಸಿರಾಟದ ಸಮಸ್ಯೆಗೆ ಮುಕ್ತಿ ಪಡೆಯಬಹುದು.

ದೇಹದಲ್ಲಿ ಆಮ್ಲಜನಕದ ಪ್ರಮಾಣ ಇಳಿದಾಗ ಅದನ್ನು ಏರಿಸಿ, ಉಸಿರಾಟವನ್ನು ಸರಾಗ ಮಾಡಬಲ್ಲ ಶಕ್ತಿ ಪ್ರಾಣಾಯಾಮಕ್ಕಿದೆ ಎನ್ನುತ್ತಾರೆ ಹುಬ್ಬಳ್ಳಿಯ ಧನ್ಯೋಸ್ಮಿ ಯೋಗ ಕೇಂದ್ರದ ಯೋಗಗುರು ವಿನಾಯಕ ತಲಗೇರಿ.

ನಂತರದಲ್ಲಿ ಅಗತ್ಯವಿದ್ದರೆ ಆಸ್ಪತ್ರೆಗೆ ದಾಖಲಾಗಿ ಹೆಚ್ಚಿನ ಚಿಕಿತ್ಸೆ ಪಡೆಯಬಹುದು. ಚಿಕಿತ್ಸೆ ಜೊತೆಗೆ ಪ್ರಾಣಾಯಾಮಗಳನ್ನು ಮಾಡುವುದರಿಂದ ಹೆಚ್ಚಿನ ಪ್ರಯೋಜನ ಸಿಗಲಿದೆ. ಪ್ರಾಣಾಯಾಮವನ್ನು ನಿತ್ಯವೂ ಮಾಡುವುದರಿಂದ ಉಸಿರಾಟದ ಸಮಸ್ಯೆ ಕಾಡದು. ಆಮ್ಲಜನಕದ ಕೊರತೆ ಬಾಧಿಸದು. ಕೋವಿಡ್ ಬಾಧಿತರು ಭಯಭೀತರಾದರೆ ಉಸಿರಾಟ ಏರುಪೇರಾಗುವ ಸಾಧ್ಯತೆ ಹೆಚ್ಚು. ಆದ್ದರಿಂದ ಧೈರ್ಯದಿಂದ ಇರುವುದು ಕೂಡ ಮುಖ್ಯ' ಎಂಬ ಸಲಹೆ ಅವರದ್ದು.



ವ್ಯಾಘ್ರ ಪ್ರಾಣಾಯಾಮ (ಟೈಗರ್ ಬ್ರೀಥಿಂಗ್)

> **“ಪ್ರಾಣಾಯಾಮವನ್ನು ನಿತ್ಯವೂ ಮಾಡುವುದರಿಂದ ಉಸಿರಾಟದ ಸಮಸ್ಯೆ ಕಾಡದು. ಆಮ್ಲಜನಕದ ಕೊರತೆ ಬಾಧಿಸದು. ಕೋವಿಡ್ ಬಾಧಿತರು ಧೈರ್ಯದಿಂದ ಇರುವುದು ಕೂಡ ಮುಖ್ಯ”**
>
> **ವಿನಾಯಕ ತಲಗೇರಿ ಯೋಗ ಗುರು,**
>
> ಧನ್ಯೋಸ್ಮಿ ಯೋಗ ಕೇಂದ್ರ, ಹುಬ್ಬಳ್ಳಿ

ಉಸಿರಾಟ ಸರಾಗಗೊಳಿಸಲು ಯಾವ್ಯಾವ ಪ್ರಾಣಾಯಾಮಗಳನ್ನು ಮಾಡಬಹುದು ಎಂಬ ಕುರಿತು ಅವರು ನೀಡಿರುವ ಸಲಹೆಗಳು ಇಲ್ಲಿವೆ.

ಮೊದಲು ಟೈಗರ್ ಬ್ರೀಥಿಂಗ್. ಇದರಲ್ಲಿ ಚತುಷ್ಪಾದಾಸನದಲ್ಲಿ (ಹುಲಿ ನಿಂತ ಭಂಗಿಯಲ್ಲಿ) ಮೊಣಕಾಲು ಹಾಗೂ ಕೈಗಳ ಮೇಲೆ ನಿಂತು ಮುಖವನ್ನು ಕೆಳಗೆ ಹಾಕಬೇಕು. ನಿಧಾನವಾಗಿ ಉಸಿರು ತೆಗೆದುಕೊಳ್ಳುತ್ತ ತಲೆ ಎತ್ತಬೇಕು. ಮತ್ತೆ ನಿಧಾನವಾಗಿ ಉಸಿರನ್ನು ಬಿಡುತ್ತ ತಲೆಯನ್ನು ಕೆಳಗೆ ಹಾಕಬೇಕು. ಈ ರೀತಿ ಆರು ಬಾರಿ ಮಾಡಬೇಕು. ನಂತರ ದೀರ್ಘವಾಗಿ ಉಸಿರು ತೆಗೆದುಕೊಂಡು ಬಿಡುವಾಗ ಹೊಟ್ಟೆಯನ್ನು ಒಳಕ್ಕೆ ತೆಗೆದುಕೊಳ್ಳಬೇಕು. ಇದನ್ನು 8–10 ಬಾರಿ ಮಾಡಬೇಕು. ನಂತರ ಸಾಮಾನ್ಯ ಆಸನದಲ್ಲಿ ಕುಳಿತು ಕಪಾಲಭಾತಿಯನ್ನು ಒಂದು ನಿಮಿಷ ಮಾಡಬೇಕು. ಇದು ಉಸಿರನ್ನು ಮೂಗಿನಿಂದ ಹೊರಹಾಕುವ ಕ್ರಿಯೆ. ನಂತರ ದೀರ್ಘ ಉಸಿರಾಟ ಮೂರು ಬಾರಿ ಮಾಡಬೇಕು. ನಂತರ ಅನುಲೋಮ–ವಿಲೋಮ (ನಾಡಿಶೋಧ ಪ್ರಾಣಾಯಾಮ) ವನ್ನು 5 ನಿಮಿಷ ಮಾಡಬೇಕು. ಇದಾದ ನಂತರ 9 ಸುತ್ತು ಭ್ರಾಮರಿ ಮಾಡಬೇಕು. ಇದರ ಜೊತೆಗೆ ನೆಲದ ಮೇಲೆ ಅಂಗಾತ ಮಲಗಿ ಎದೆ ಹಿಂಭಾಗದಲ್ಲಿ ದಿಂಬನ್ನು ಇಟ್ಟು ಉಸಿರಾಟ ಸಹಜ ನಡೆಸಬೇಕು.

ಸಹಜ ಉಸಿರಾಟಕ್ಕೆ ಸಹಾಯವಾಗಬಲ್ಲ ಅಗತ್ಯ ಪ್ರಾಣಾಯಾಮದ ಹೆಚ್ಚಿನ ಮಾಹಿತಿಗಾಗಿ ವಿನಾಯಕ ತಲಗೇರಿ ಅವರನ್ನು (9480397682) ಸಂಪರ್ಕಿಸಬಹುದು. ಅಗತ್ಯ ಸಂದರ್ಭದಲ್ಲಿ ವೈದ್ಯರ ಸಲಹೆಯನ್ನು ಪಡೆಯುವುದನ್ನು ಮರೆಯಬೇಡಿ ❖

**ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ**

# ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆ

(ಮುಂದುವರಿದ ಭಾಗ)

ವಿಜ್ಞಾನ

ಎಸ್ಸೆಸ್ಸೆಲ್ಸಿ

**ಹಿಂದಿನ ಕಾಲದಲ್ಲಿ ರೂಢಿಸಿಕೊಂಡಿದ್ದ ಪರಿಸರ ಸಂರಕ್ಷಣೆಯ ವಿಧಾನಗಳು**

- ಪವಿತ್ರವನ, ಪವಿತ್ರ ತೋಪುಗಳು, ಪವಿತ್ರ ವಲಯಗಳು ಮತ್ತು ಬುಡಕಟ್ಟು ಜನರ ಅರಣ್ಯ ಸಂರಕ್ಷಣೆ ಚಟುವಟಿಕೆಗಳಂತಹ ವೈವಿಧ್ಯಮಯವಾದ ಸಾಂಸ್ಕೃತಿಕ ಭೂಪ್ರದೇಶ ಪರಿಕಲ್ಪನೆಗಳು ವಿಕಸನಗೊಂಡು ಪರಿಸರ ಸಂರಕ್ಷಣೆಯಲ್ಲಿ ಮುಖ್ಯ ಪಾತ್ರ ವಹಿಸಿದ್ದವು.
- ಬುಡಕಟ್ಟು ಜನರ ಅರಣ್ಯ ಸಂರಕ್ಷಣೆ ಚಟುವಟಿಕೆಗಳು, ಸಂಪ್ರದಾಯ ಪದ್ಧತಿಗಳು ಮತ್ತು ಧಾರ್ಮಿಕ ಆಚರಣೆಗಳು ನಿಸರ್ಗ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದವು.

**ಅರಣ್ಯಗಳ ಸಂರಕ್ಷಣೆಯಲ್ಲಿನ ಪಾಲುದಾರರು ಮತ್ತು ಅವರ ಕಾರ್ಯವೈಖರಿಗಳು:**

- ಕಾಡಿನಲ್ಲಿ ವಾಸಿಸುವ ಜನರು ತಮ್ಮ ಅವಶ್ಯಕತೆಗಳಾದ ಉರುವಲು, ಸಣ್ಣ ಮರಮಟ್ಟುಗಳು, ಹುಲ್ಲು, ಮೇಲ್ಹಾವಣಿ, ಆಹಾರ ಸಂಗ್ರಹಿಸುವ ವಸ್ತುಗಳು, ಕೃಷಿ ಉಪಕರಣಗಳು, ಮೀನುಗಾರಿಕೆ ಮತ್ತು ಬೇಟೆಯಾಡುವ ಉಪಕರಣಗಳಿಗಾಗಿ ಅರಣ್ಯವನ್ನು ಅವಲಂಬಿಸಿರುತ್ತಾರೆ. ಅಲ್ಲದೇ ಆಹಾರ ಮತ್ತು ಔಷಧಿಗಳಿಗಾಗಿಯೂ ಅರಣ್ಯವನ್ನು ಅವಲಂಬಿಸಿದ್ದಾರೆ. ಆದರೆ ಕೈಗಾರೀಕರಣ ಮುಂದುವರೆದಂತೆ ಈ ಜನರನ್ನು ಕಡೆಗಣಿಸಿ ಅರಣ್ಯವನ್ನು ದುರುಪಯೋಗ ಪಡಿಸಿಕೊಳ್ಳುವುದನ್ನು ಪ್ರಾರಂಭಿಸಲಾಗಿದೆ. ಈ ಅರಣ್ಯವಾಸಿಗಳು ಕೇವಲ ತಮ್ಮ ಮೂಲಭೂತ ಅವಶ್ಯಕತೆಗಳನ್ನು ಮಾತ್ರ ಅರಣ್ಯದಿಂದ ಪಡೆಯುತ್ತಿದ್ದು ಅರಣ್ಯಗಳ ಸಮತೋಲನವನ್ನು ಕಾಪಾಡಿಕೊಳ್ಳುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.
- ಕೈಗಾರೀಕರಣ ಅಥವಾ ಏಕ ಫಸಲಿನ ಕೃಷಿ ಭೂಮಿಯನ್ನು ಹೆಚ್ಚಾಗಿ ಬೆಳೆಸುವುದು ಈಗ ರೂಢಿಯಾಗಿದ್ದು ಇದು ಬೃಹತ್ ಪ್ರದೇಶಗಳಲ್ಲಿನ ಎಲ್ಲಾ ಸಸ್ಯವರ್ಗಗಳನ್ನು ತೆರವುಗೊಳಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದು, ಇದು ಆ ಪ್ರದೇಶದಲ್ಲಿನ ಜೀವ ವೈವಿದ್ಯತೆಯನ್ನು ನಾಶಪಡಿಸುವುದಲ್ಲದೇ ಸ್ಥಳೀಯ ಜನತೆಯ ಮೂಲಭೂತ ಅವಶ್ಯಕತೆಗಳನ್ನು ಪೂರೈಸದೇ ಅಸಮತೋಲನ ಉಂಟು ಮಾಡುತ್ತದೆ.
- ಕೈಗಾರಿಕೆಗಳು ಅರಣ್ಯವನ್ನು ಕೇವಲ ಕಚ್ಚಾ ಪದಾರ್ಥಗಳನ್ನು ಒದಗಿಸುವ ಆಕರವೆಂದು ಪರಿಗಣಿಸುತ್ತಿದ್ದು, ಈ ಕಚ್ಚಾ ವಸ್ತುಗಳನ್ನು ತೋರಿಕೆಯ ಕಡಿಮೆ ದರದಲ್ಲಿ ಖರೀದಿಸಲು ಬೃಹತ್ ಆಸಕ್ತ ಗುಂಪುಗಳು ಸರ್ಕಾರದಲ್ಲಿ ಲಾಬಿ ಮಾಡುತ್ತಿರುವುದು ವಿಷಾದನೀಯವಾಗಿದೆ.
- ನ್ಯಾಷನಲ್ ಪಾರ್ಕ್‌ನಂತಹ ಮೀಸಲು ಪ್ರದೇಶಗಳಲ್ಲಿ ಸಾಂಪ್ರದಾಯಿಕ ಬಳಕೆಯನ್ನು ವಿರೋಧಿಸಲಾಗುತ್ತದೆ. ಇದರಿಂದ ಅರಣ್ಯದ ನೈಸರ್ಗಿಕ ಬೆಳವಣಿಗೆಯಲ್ಲಿ ಏರುಪೇರಾಗುತ್ತದೆ.

**ಸ್ಥಳೀಯ ಜನರಿಂದ ಅರಣ್ಯ ಸಂರಕ್ಷಣೆಯ ಬಗ್ಗೆ ತೆಗೆದುಕೊಂಡ ಜಾಗೃತಿ ಕ್ರಮಗಳ ನಿದರ್ಶನಗಳು**

- **ರಾಜಸ್ಥಾನದ ಬಿಷ್ಣೋಯಿ ಸಮುದಾಯದ ಪ್ರಕರಣ:** ಈ ಸಮುದಾಯದವರು ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಯನ್ನು ಒಂದು ಧಾರ್ಮಿಕ ಸಿದ್ಧಾಂತವನ್ನಾಗಿ ಮಾಡಿಕೊಂಡು ಶತಮಾನಗಳಿಂದ ಸಸ್ಯ ಹಾಗೂ ಪ್ರಾಣಿ ವರ್ಗಗಳ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿದೆ. ಎಲ್ಲಾ ಜೀವಿಗಳೂ ಬದುಕುವ ಹಾಗೂ ಸಂಪನ್ಮೂಲಗಳನ್ನು ಸಮನಾಗಿ ಹಂಚಿಕೊಳ್ಳಲು ಹಕ್ಕನ್ನು ಹೊಂದಿವೆ ಎಂಬ ತತ್ವದ ಮೇಲೆ ಬದುಕುತ್ತಿದ್ದಾರೆ.
- **ಚಿಪ್ಕೊ ಚಳವಳಿ:** 1970ರಲ್ಲಿ ಹಿಮಾಲಯದ ಘರ್‌ವಾಲ್‌ನ ರೇನಿ ಎಂಬ ಕುಗ್ರಾಮದಲ್ಲಿ ಅರಣ್ಯದಲ್ಲಿನ ಮರಗಳನ್ನು ಉರುಳಿಸಲು ಗುತ್ತಿಗೆಯನ್ನು ಪಡೆಯಲಾಗಿತ್ತು. ಅದನ್ನು ನಿಲ್ಲಿಸಲು ಅಲ್ಲಿನ ಹೆಂಗಸರು ಮರವನ್ನು ತಬ್ಬಿಕೊಂಡು ಅರಣ್ಯನಾಶವನ್ನು ನಿಲ್ಲಿಸುವಲ್ಲಿ ಸಫಲರಾದರು. ❖



# ವುರ್ಟ್ಸ್ ರಾಸಾಯನಿಕ ಕ್ರಿಯೆ

ರಸಾಯನಶಾಸ್ತ್ರ

ದ್ವಿತೀಯ ಪಿಯುಸಿ

**ಆಲ್ಕೈಲ್** ಹ್ಯಾಲೈಡ್‌ಗಳು ಶುಷ್ಕ ಈಥರ್‌ನಲ್ಲಿ ಸೋಡಿಯಂನೊಂದಿಗೆ ವರ್ತಿಸಿ, ಹ್ಯಾಲೈಡ್‌ಗಳಲ್ಲಿರುವ ಎರಡರಷ್ಟು ಸಂಖ್ಯೆಯ ಕಾರ್ಬನ್ ಪರಮಾಣುಗಳು ಹೈಡ್ರೋ ಕಾರ್ಬನ್‌ಗಳನ್ನು ಉಂಟು ಮಾಡುತ್ತವೆ. ಈ ರಾಸಾಯನಿಕ ಕ್ರಿಯೆಯನ್ನು ವುರ್ಟ್ಸ್ ಕ್ರಿಯೆ (wurtz) ಎನ್ನುವರು.

$$R-X+2Na+X-R \xrightarrow[\triangle]{dry\ ether} R-R+2NaX$$

**ಉದಾಹರಣೆ:**


$$CH_3CH_2Br+2Na+BrCH_2CH_3 \xrightarrow{dry\ ether} CH_3CH_2CH_2CH_3+2NaBr$$

## ನ್ಯೂಕ್ಲಿಯೋಕಾಂಕ್ಷಿ ಆದೇಶ್ಯಕ್ರಿಯೆಗಳು

ಅರೈಲ್ ಹ್ಯಾಲೈಡ್‌ಗಳು ನ್ಯೂಕ್ಲಿಯೋಕಾಂಕ್ಷಿ ಆದೇಶ್ಯಕ್ರಿಯೆಗಳಿಗೆ ಈ ಕೆಳಗಿನ ಕಾರಣಗಳಿಂದಾಗಿ ಅತ್ಯಂತ ನಿಧಾನವಾಗಿ ಪ್ರತಿಕ್ರಯಿಸುತ್ತವೆ.

## ಅನುರಣನಾ ಪರಿಣಾಮ

ಹ್ಯಾಲೋ ಆರೀನ್‌ಗಳಲ್ಲಿ ಹ್ಯಾಲೋಜನ್ ಪರಮಾಣುವಿನಲ್ಲಿರುವ ಒಂದು ಜೋಡಿ ಎಲೆಕ್ಟ್ರಾನ್‌ಗಳು ಉಂಗುರದ $\pi$ – ಎಲೆಕ್ಟ್ರಾನ್‌ಗಳೊಂದಿಗೆ ಸಂಯುಗ್ಮಿತವಾಗಿರುವುದರಿಂದ ಮತ್ತು ಕೆಳಗಿನ ಅನುರಣನಾ ರಚನೆಗಳು ಸಾಧ್ಯವಾಗಿವೆ.




C-Cl ಬಂಧವು ಅನುರಣತೆಯಿಂದಾಗಿ ಭಾಗಶಃ ದ್ವಿ–ಬಂಧ ಲಕ್ಷಣವನ್ನು ಹೊಂದಿದೆ.

C-CI ಬಂಧವು ಅನುರಣತೆಯಿಂದಾಗಿ ಭಾಗಶಃ ದ್ವಿ-ಬಂಧ ಲಕ್ಷಣವನ್ನು ಹೊಂದಿದೆ. ಪರಿಣಾಮವಾಗಿ ಹ್ಯಾಲೋ-ಆಲ್ಕೈನ್‌ಗಳಿಗಿಂತ ಹ್ಯಾಲೋ ಆರೀನ್‌ಗಳಲ್ಲಿ ಬಂಧ ಒಡೆಯುವಿಕೆ ಕಷ್ಟವಾಗಿದೆ. ಆದ್ದರಿಂದ ಅವುಗಳ ಕ್ರಿಯಾಶೀಲತೆಯು ನ್ಯೂಕ್ಲಿಯೋಕಾಂಕ್ಷಿ ಆದೇಶ್ಯ ಕ್ರಿಯೆಗೆ ಅತಿ ಕಡಿಮೆ ಪ್ರಮಾಣದಲ್ಲಿದೆ.

## C-X ಬಂಧದಲ್ಲಿ ಕಾರ್ಬನ್ ಪರಮಾಣುವಿನ ಸಂಕರಣದ ವ್ಯತ್ಯಾಸ

ಹ್ಯಾಲೋ ಆಲ್ಕೇನ್‌ಗಳಲ್ಲಿ ಹ್ಯಾಲೋಜನ್‌ಗೆ ಬಂಧಿತವಾದ ಕಾರ್ಬನ್ ಪರಮಾಣುವು $SP^3$ ಸಂಕರಣ ಹೊಂದಿದೆ. ಆದರೆ ಹ್ಯಾಲೋ ಆರೀನ್‌ಗಳಲ್ಲಿ ಹ್ಯಾಲೋಜನ್‌ಗೆ ಬಂಧಿತವಾದ ಕಾರ್ಬನ್ ಪರಮಾಣುವು $SP^2$ ಸಂಕರಣದ್ದಾಗಿದೆ.




## ಫಿನೈಲ್ ಕ್ಯಾಟಾಯನ್ ಅಸ್ಥಿರತೆ


ಹ್ಯಾಲೋ ಆರೀನ್‌ಗಳಲ್ಲಿ ಫಿನೈಲ್ ಕ್ಯಾಟಾಯಾನ್ ಸ್ವ ಅಯಾನೀಕರಣದಿಂದ ಉಂಟಾಗುವುದರಿಂದ ಅನುರಣತೆಯಿಂದ ಸ್ಥಿರತೆ ಪಡೆಯುವುದಿಲ್ಲ. ಆದ್ದರಿಂದ $SN_1$ ಕ್ರಿಯಾತಂತ್ರ ಸಾಧ್ಯವಿಲ್ಲ.

## ವಿಕರ್ಷಣೆಯ ಸಾಧ್ಯತೆಯಿಂದ:


ಎಲೆಕ್ಟ್ರಾನ್ ಸಮೃದ್ಧ ಆರೀನ್‌ಗಳನ್ನು ಸಮೀಪಿಸುವುದಕ್ಕೆ, ಎಲೆಕ್ಟ್ರಾನ್ ಸಮೃದ್ಧ ನ್ಯೂಕ್ಲಿಯೋಕಾಂಕ್ಷಿಗಳು ಕಡಿಮೆ ಒಲವನ್ನು ಹೊಂದಿರುತ್ತವೆ.

## ಹೈಡ್ರಾಕ್ಸಿಲ್ ಗುಂಪಿನ ಬದಲಾವಣೆಯಿಂದ:

ಕ್ಲೋರೋ ಬೆಂಝೀನ್ ಜಲೀಯ ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣದೊಂದಿಗೆ 623K ಉಷ್ಣತೆ 300atm ಒತ್ತಡದಲ್ಲಿ ಕಾಯಿಸಿ ಫಿನಾಲ್ ಅನ್ನಾಗಿ ಪರಿವರ್ತಿಸಬಹುದು.




ಆರ್ಥೋ ಮತ್ತು ಪ್ಯಾರಾ ಸ್ಥಾನದಲ್ಲಿ ಎಲೆಕ್ಟ್ರಾನ್ ಸೆಳೆಯುವ ಗುಂಪು($NO_2$) ಗಳಿದ್ದರೆ ಹ್ಯಾಲೋ ಆರೀನ್‌ಗಳ ಕ್ರಿಯಾಶೀಲತೆ ಹೆಚ್ಚುವುದು.




> ಪ್ರಜಾವಾಣಿ ನೋಡಿಯೊ
>
> https://bit.ly/3hfsrJu
>
> ದ್ವಿತೀಯ ಪಿಯುಸಿ ರಸಾಯನಶಾಸ್ತ್ರ ವಿಭಾಗದ 'ಎಲೆಕ್ಟ್ರೊ ಕೆಮಿಸ್ಟ್ರಿ_ಗ್ಯಾಲ್ವಾನಿಕ್ ಸೆಲ್ಸ್ ಅಂಡ್ ಡ್ರೈ ಸೆಲ್ಸ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

# ಅಭಿಮತ



❦ ಸುಭಾಷಿತ ❦

ಮುಳ್ಳು ಎಲ್ಲಿದೆ ಎಂಬುದು ನಿಮಗೆ ತಿಳಿದಿದ್ದರಷ್ಟೇ ನೀವು ಅದನ್ನು ಕಿತ್ತು ತೆಗೆಯಲು ಸಾಧ್ಯ.

-ರವೀಂದ್ರನಾಥ ಟ್ಯಾಗೋರ್

## ಜನಸಾಮಾನ್ಯರಿಗೆ ಲಾಠಿ ಏಟು ಪೊಲೀಸ್ ದೌರ್ಜನ್ಯ ನಿಲ್ಲಿಸಿ

ರಾಜ್ಯದಲ್ಲಿ ಸೋಮವಾರದಿಂದ ಆರಂಭವಾಗಿರುವ ಲಾಕ್‌ಡೌನ್‌ನ ಮಾರ್ಗಸೂಚಿ ಪಾಲನೆಯ ನೆಪದಲ್ಲಿ ಪೊಲೀಸರು ಜನಸಾಮಾನ್ಯರ ಮೇಲೆ ಬಲಪ್ರಯೋಗ ನಡೆಸಿದ್ದಾರೆ. ಪೊಲೀಸರು ಪಾಳೆಯಪಟ್ಟಿನ ಪ್ರತಿನಿಧಿಗಳಂತೆ ವರ್ತಿಸಿರುವುದು ನಾಚಿಕೆಗೇಡಿನ ಸಂಗತಿ. ರೋಗಿಗಳನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ಆಟೊ ಚಾಲಕರ ಮೇಲೆ, ದಿನಸಿ ತರಲು ಕಿರಾಣಿ ಅಂಗಡಿಗಳಿಗೆ ಹೊರಟ ಜನರ ಮೇಲೆ, ಔಷಧಿ ತರಲು ಬಂದ ರೋಗಿಗಳ ಸಂಬಂಧಿಕರ ಮೇಲೆ ಪೊಲೀಸರು ಅಮಾನವೀಯವಾಗಿ ಲಾಠಿ ಬೀಸಿದ ಕುರಿತು ವರದಿಯಾಗಿದೆ. ಮೊದಲ ದಿನವೇ ಭೀತಿ ಹುಟ್ಟಿಸಿದರೆ ಉಳಿದ 13 ದಿನ ಜನ ಮನೆಯಿಂದ ಆಚೆ ಬರುವುದಿಲ್ಲ ಎಂಬ ಆಲೋಚನೆಯೂ ಅವರ ದುರ್ವರ್ತನೆಗೆ ಕಾರಣವಾಗಿರಬಹುದು. 'ವಾಹನದಲ್ಲಿ ಓಡಾಡುವಂತಿಲ್ಲ' ಎಂಬ ನಿಯಮವನ್ನೇ ನೆಪ ಮಾಡಿಕೊಂಡು ಈ ರೀತಿ ದಬ್ಬಾಳಿಕೆಯನ್ನು ಪ್ರದರ್ಶಿಸಲಾಗಿದೆ. ಅಮಾಯಕರ ಮೇಲೆ ಲಾಠಿ ಬೀಸಲು ಆದೇಶ ನೀಡಿದ್ದು ಯಾರು? ಆದೇಶಕ್ಕೆ ಕಾರಣ ಏನು? ಮನಬಂದಂತೆ ಲಾಠಿ ಬೀಸಲು ನಮ್ಮಲ್ಲೇನು ಪೊಲೀಸ್ ರಾಜ್ಯಭಾರವಿಲ್ಲ. ವಾಸ್ತವವಾಗಿ, ಸರ್ಕಾರ ರೂಪಿಸಿದ ಮಾರ್ಗಸೂಚಿ ನಿಯಮದಲ್ಲೇ ದೋಷವಿದೆ. ಕಿಲೊಮೀಟರ್‌ಗಟ್ಟಲೆ ದೂರದಲ್ಲಿರುವ ಆಸ್ಪತ್ರೆಗಳಿಗೆ, ನೀರು ಶುದ್ಧೀಕರಣ ಘಟಕಗಳಿಗೆ ವಾಹನವಿಲ್ಲದೆ ನಡೆದುಕೊಂಡೇ ಹೋಗಿಬರುವುದು ಹೇಗೆ ಸಾಧ್ಯ? ಈ ಮಾತು ನಗರಗಳಿಗೆ ಮಾತ್ರವಲ್ಲದೆ ಗ್ರಾಮೀಣ ಪ್ರದೇಶಗಳಿಗೂ ಅನ್ವಯಿಸುತ್ತದೆ. ಶುದ್ಧೀಕರಣ ಘಟಕಗಳಿಂದ ಬಹುದೂರದಲ್ಲಿರುವ ಮನೆಗಳಿಗೆ 20 ಲೀಟರ್‌ನ ಭಾರದ ನೀರಿನ ಕ್ಯಾನುಗಳನ್ನು ತಲೆಯ ಮೇಲೆ ಹೊತ್ತುಕೊಂಡೇ ತರಬೇಕೆ? ನಿಯಮಗಳನ್ನು ರೂಪಿಸುವವರು ದಂತಗೋಪುರಗಳಲ್ಲಿ ಕುಳಿತು ಯೋಚಿಸದೆ ಜನಸಾಮಾನ್ಯರು ನಿತ್ಯ ಅನುಭವಿಸುವ ಕಷ್ಟ-ನಷ್ಟಗಳ ದೃಷ್ಟಿಕೋನದಿಂದಲೂ ಯೋಚಿಸಿದ್ದರೆ ಹೀಗಾಗುತ್ತಿರಲಿಲ್ಲ. ನಿಯಮಗಳಿಂದ ಜನರಿಗಾಗುವ ಸಮಸ್ಯೆಗಳ ಕುರಿತೂ ಅಧಿಕಾರಿಗಳಿಗೆ ಮುಂಗಾಣ್ಕೆ ಬೇಕಿತ್ತು. 'ವಾಹನದಲ್ಲಿ ಓಡಾಡಲೇಬಾರದು' ಎಂಬಂತಹ ನಿಯಮಗಳನ್ನು ಮರುಪರಿಶೀಲನೆ ನಡೆಸುವುದು ಅಗತ್ಯ. ಕೋವಿಡ್ ಪ್ರಕರಣಗಳು ನಿಯಂತ್ರಣಕ್ಕೆ ಬರಬೇಕು ಎನ್ನುವುದರಲ್ಲಿ ಎರಡನೆಯ ಮಾತೇ ಇಲ್ಲ. ಆದರೆ, ಅದಕ್ಕಾಗಿ ರೂಪಿಸುವ ನಿಯಮಗಳು, ಅನಿವಾರ್ಯವಾಗಿ ಹೊರಹೋಗಬೇಕಾದವರಿಗೆ ಸಂಕೋಲೆ ಆಗಬಾರದು. ಪೊಲೀಸರಿಂದ ಅವರು ಲಾಠಿ ಏಟು ತಿನ್ನುವಂತೆಯೂ ಆಗಬಾರದು. ಒಂದುವೇಳೆ ಯಾರಾದರೂ ಸುಖಾಸುಮ್ಮನೆ ಹೊರ ಬಂದಿದ್ದರೆ ಅವರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕೇ ವಿನಾ ದೌರ್ಜನ್ಯ ಎಸಗುವಂತಹ ಧಾರ್ಷ್ಟ್ಯ ತೋರಬಾರದು. ಮಾರ್ಗಸೂಚಿ ಉಲ್ಲಂಘಿಸಿದವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲು ಯಾರದೂ ತಕರಾರಿಲ್ಲ.



> ಲಾಕ್‌ಡೌನ್ ಹಿಂದಿನ ಸರ್ಕಾರದ ಉದ್ದೇಶವನ್ನು ಜನರೂ ಜನರ ಸಮಸ್ಯೆಗಳನ್ನು ಸರ್ಕಾರವೂ ಅರ್ಥಮಾಡಿಕೊಳ್ಳಬೇಕು. ಜನರ ಮೇಲಿನ ಪೊಲೀಸ್ ದಬ್ಬಾಳಿಕೆಯನ್ನು ಕೂಡಲೇ ತಡೆಗಟ್ಟಬೇಕು

ರಸ್ತೆಗಳಲ್ಲಿ ಓಡಾಡಿದ ಜನರನ್ನು ಪೊಲೀಸರು ಮನಬಂದಂತೆ ಥಳಿಸಿದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ, ದೃಶ್ಯಮಾಧ್ಯಮಗಳಲ್ಲಿ ಪ್ರಸಾರವಾಗಿವೆ. ಮಾರ್ಗಸೂಚಿ ಪಾಲನೆ ಆಗುವಂತೆ ಪೊಲೀಸರು ನೋಡಿಕೊಳ್ಳುತ್ತಿರುವ ಈ ಪರಿ ಭಯಾನಕವಾಗಿದೆ. 'ಇವರೇನು ಮನುಷ್ಯರೇ, ಕಾನೂನು ಸುವ್ಯವಸ್ಥೆ ನೋಡಿಕೊಳ್ಳುವ ಹೊಣೆ ಇಂಥವರ ಮೇಲಿದೆಯೇ' ಎಂಬ ಉದ್ಗಾರ ಎತ್ತುವಂತೆಯೂ ಮಾಡುತ್ತವೆ. ಕೆಲವೊಂದು ಕಡೆ ಪೊಲೀಸರು ಜನರ ಕಣ್ಣೀರು ಒರೆಸಿ ಮಾನವೀಯತೆ ಮೆರೆದಿದ್ದೂ ಇದೆ. ಆದರೆ, ಎಲ್ಲ ಬಣ್ಣಗಳನ್ನೂ ಮಸಿ ನುಂಗಿತು ಎನ್ನುವಂತೆ ಲಾಠಿ ಪ್ರಹಾರದ ಘಟನೆಗಳು ಪೊಲೀಸ್ ವ್ಯವಸ್ಥೆಗೆ ಕೆಟ್ಟಹೆಸರು ತರುತ್ತವೆ. ಹಿರಿಯ ಪೊಲೀಸ್ ಅಧಿಕಾರಿಗಳು ಕೂಡಲೇ ಎಚ್ಚೆತ್ತುಕೊಂಡು ಕೆಳಹಂತದ ತಮ್ಮ ಸಿಬ್ಬಂದಿಯ ಕಿವಿ ಹಿಂಡಬೇಕು. ತಾವು ಜನರ ಒಳಿತಿಗಾಗಿ ಕರ್ತವ್ಯಕ್ಕೆ ನಿಯೋಜನೆಗೊಂಡವರೇ ವಿನಾ ಜನರ ಮೇಲೆ ದೌರ್ಜನ್ಯ ನಡೆಸುವುದಕ್ಕಲ್ಲ ಎನ್ನುವುದನ್ನು ಅವರಿಗೆ ಅರ್ಥವಾಗುವ ಭಾಷೆಯಲ್ಲಿ ಹೇಳಬೇಕು. ತಪ್ಪಿತಸ್ಥರ ವಿರುದ್ಧ ಮುಲಾಜಿಲ್ಲದೆ ಕ್ರಮವನ್ನೂ ಕೈಗೊಳ್ಳಬೇಕು. ಅಂತಹ ಕ್ರಮಗಳು, ಕೈ ತುರಿಕೆಗೆ ಲಾಠಿ ಬೀಸುವಂತಹ ಇತರ ಸಿಬ್ಬಂದಿಗೂ ಪಾಠವಾಗಬೇಕು. ಜನರೂ ಅಷ್ಟೆ. ಇದು ತುಂಬಾ ಅಸಾಧಾರಣವಾದ ಸಂದರ್ಭ. ಆಸ್ಪತ್ರೆಗಳಲ್ಲಿ, ಹಾದಿ-ಬೀದಿಗಳಲ್ಲಿ ರೋಗಿಗಳು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ ಎನ್ನುವುದು ಬಹುತೇಕರಿಗೆ ಗೊತ್ತಿದೆ. ಹೀಗಾಗಿ, ಅನಿವಾರ್ಯ ಸಂದರ್ಭ ಹೊರತುಪಡಿಸಿ, ಜನ ಮನೆಯಲ್ಲೇ ಇರಬೇಕು. ಕೋವಿಡ್‌ನ ತೀವ್ರತೆಯನ್ನು ಕಡಿಮೆ ಮಾಡಲು ಸರ್ಕಾರ ನಡೆಸಿರುವ ಯತ್ನಗಳಿಗೆ ಎಲ್ಲ ರೀತಿಯ ಸಹಕಾರವನ್ನು ನೀಡಬೇಕು. ಸರ್ಕಾರದ ಉದ್ದೇಶವನ್ನು ಜನ ಅರ್ಥಮಾಡಿಕೊಳ್ಳಬೇಕು. ಹಾಗೆಯೇ ಜನರ ಸಮಸ್ಯೆಗಳನ್ನು ಸರ್ಕಾರವೂ ಅರ್ಥಮಾಡಿಕೊಳ್ಳಬೇಕು. ಅವರ ಮೇಲಿನ ಪೊಲೀಸ್ ದಬ್ಬಾಳಿಕೆಯನ್ನು ಕೂಡಲೇ ತಡೆಗಟ್ಟಬೇಕು.

### ದಿನದ ಟ್ವೀಟ್

#### ಜಾಗೃತಿಗೆ ಸಿಕ್ಕ ಫಲ



**ಶುಭ ಸುದ್ದಿ. ಸುಮಾರು 20 ದಿನಗಳ ಹಿಂದೆ ನನಗೆ ಕೋವಿಡ್-19 ದೃಢಪಟ್ಟಿತ್ತು. ಶೇ 100ರಷ್ಟು ಚೇತರಿಸಿಕೊಂಡ ಬಳಿಕವಷ್ಟೇ ನಿಮ್ಮೊಂದಿಗೆ ನನ್ನ ಅನುಭವ ಹಂಚಿಕೊಳ್ಳಲು ಬಯಸುತ್ತಿದ್ದೇನೆ. ಕೋವಿಡ್ ಪಾಸಿಟಿವ್ ವರದಿ ಬಂದ ಬಳಿಕ, ನಮ್ಮ ವೈದ್ಯರ ಸಲಹೆಯಂತೆ ಎಲ್ಲಾ 5-6 ಔಷಧಿಗಳನ್ನು ಕಟ್ಟುನಿಟ್ಟಾಗಿ ತೆಗೆದುಕೊಳ್ಳಲಾರಂಭಿಸಿದೆ. ಅಗತ್ಯವಾದ ಎಲ್ಲ ಬಗೆಯ ಮುನ್ನೆಚ್ಚರಿಕೆಗಳನ್ನೂ ವಹಿಸಿದೆ. ದಿನಕ್ಕೆ ಎರಡು ಬಾರಿ ಆವಿ ತೆಗೆದುಕೊಳ್ಳುತ್ತಿದ್ದೆ, ಜೇನುತುಪ್ಪ- ನಿಂಬೆರಸ ಮಿಶ್ರಿತ ನೀರು ಸೇವನೆ ಮಾಡುತ್ತಿದ್ದೆ. ಈಗ ಗಟ್ಟಿಮುಟ್ಟಾಗಿದ್ದೇನೆ. ದೇವರಿಗೆ ಧನ್ಯವಾದ.**

**ಗಿರೀಶ್ ಅರೋರ,** ಸಾಮಾಜಿಕ ಕಾರ್ಯಕರ್ತ, ನವದೆಹಲಿ

### 25 ವರ್ಷಗಳ ಹಿಂದೆ

ಶನಿವಾರ, 11-5-1996

**• ಸರ್ಕಾರ ರಚನೆಗೆ ಬಿಜೆಪಿ, ರಾಷ್ಟ್ರೀಯ ರಂಗ ಪೈಪೋಟಿ**

**ನವದೆಹಲಿ, ಮೇ 10 (ಪಿಟಿಐ)–** ದೆಹಲಿಯ ಗದ್ದುಗೆ ಹಿಡಿಯಲು ವಿವಿಧ ರಾಜಕೀಯ ಪಾಳಯಗಳಲ್ಲಿ ಬಿರುಸಿನ ಚಟುವಟಿಕೆ ಆರಂಭವಾಗಿದ್ದು, ಪಿ.ವಿ. ನರಸಿಂಹ ರಾವ್ ನೇತೃತ್ವದ ಸರ್ಕಾರ ರಾಜೀನಾಮೆ ನೀಡಿದೆ. ಯಾವ ಪಕ್ಷಕ್ಕೂ ಪೂರ್ಣ ಬಹುಮತ ಸಿಗದ ಪರಿಸ್ಥಿತಿಯಲ್ಲಿ ಕೇಂದ್ರದಲ್ಲಿ ಸರ್ಕಾರ ರಚಿಸಲು ಒಂದೆಡೆ ಬಿಜೆಪಿ ಪ್ರಯತ್ನ ನಡೆಸಿದರೆ, ಇನ್ನೊಂದೆಡೆ ರಾಷ್ಟ್ರೀಯ ರಂಗ ಮತ್ತು ಎಡರಂಗ ಕೂಡಾ ಬಿಜೆಪಿ ಹೊರತಾದ ಸಮ್ಮಿಶ್ರ ಸರ್ಕಾರ ರಚನೆ ಯತ್ನಗಳನ್ನು ಆರಂಭಿಸಿವೆ.

**• ಭಾಷಾ ವಿಜ್ಞಾನಿ ಬಿಳಿಗಿರಿ ನಿಧನ**

**ಬೆಂಗಳೂರು, ಮೇ 10–** ಕನ್ನಡದ ಭಾಷಾ ವಿಜ್ಞಾನಿ ಹಾಗೂ ಕವಿ ಡಾ. ಎಚ್.ಎಸ್. ಬಿಳಿಗಿರಿ (71) ಅವರು ಇಂದು ಬೆಳಿಗ್ಗೆ ನವದೆಹಲಿಯಲ್ಲಿ ನಿಧನರಾದರು.

ಬಿಳಿಗಿರಿ ಅವರಿಗೆ ಖ್ಯಾತಿ ತಂದುಕೊಟ್ಟ ಕೃತಿ 'ಆಲೋಕ'. ಕೇಶಿರಾಜನ ಶಬ್ದಮಣಿ ದರ್ಪಣಕ್ಕೆ ಅವರು ಬರೆದ ವ್ಯಾಖ್ಯಾನ ಈ ಕೃತಿ. 'ವರ್ಣನಾತ್ಮಕ ವ್ಯಾಕರಣದ ಮೂಲತತ್ವಗಳು', 'ವರಸೆಗಳು' ಅವರ ಇನ್ನೆರಡು ಪ್ರಮುಖ ಕೃತಿಗಳು.

### 50 ವರ್ಷಗಳ ಹಿಂದೆ

ಮಂಗಳವಾರ, 11-5-1971

**• ಎಂ.ಪಿ.ಸಿ.ಸಿ. (ಸಂಸ್ಥಾ) ಅಧ್ಯಕ್ಷರಾಗಿ ವೀರೇಂದ್ರ ಪಾಟೀಲ್**

**ಬೆಂಗಳೂರು, ಮೇ 10–** ಮಾಜಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ್ ಅವರು ಇಂದು ಸಂಸ್ಥಾ ಕಾಂಗ್ರೆಸ್ಸಿನ ಮೈಸೂರು ಪ್ರದೇಶ ಸಮಿತಿಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿತರಾದರು.

ಈ ಜವಾಬ್ದಾರಿಯನ್ನು ಹೊರಲು ಮೊದಲಿನಿಂದಲೂ ಬೇಡವೆನ್ನುತ್ತಿದ್ದ ಶ್ರೀಯುತರು, ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪ ಅವರಾದಿಯಾಗಿ ಸ್ನೇಹಿತರ ಒತ್ತಾಯಕ್ಕೆ ಮಣಿದು ಕಡೆಯಲ್ಲಿ ಪ್ರದೇಶ ಸಮಿತಿ ಅಧ್ಯಕ್ಷರಾಗಲು ಒಪ್ಪಿಕೊಂಡರು.

ಲೋಕಸಭೆಗೆ ನಡೆದ ಮಧ್ಯಂತರ ಚುನಾವಣೆಯಲ್ಲಿ ರಾಜ್ಯದಲ್ಲಿ ಸಂಸ್ಥಾ ಕಾಂಗ್ರೆಸ್ ಭಾರಿ ಅಪಜಯ ಹೊಂದಿ, ಆನಂತರ ಅದರ ನೇತೃತ್ವದ ಸರ್ಕಾರವೂ ರಾಜೀನಾಮೆ ಕೊಡಬೇಕಾಗಿ ಬಂದ ಘಟನೆಯ ನಂತರ, ನೂತನ ಪ್ರದೇಶ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಸೂಕ್ತರಾದವರನ್ನಾರಿಸುವ ವಿಷಯದ ಕುರಿತು ಈ ಕಾಂಗ್ರೆಸ್ಸಿನಲ್ಲಿ ಕೆಲ ದಿನಗಳಿಂದ ಚರ್ಚೆ ನಡೆಯುತ್ತಿತ್ತು.

ಈ ಸಂಬಂಧದಲ್ಲಿ ಸರ್ವಶ್ರೀ ವೀರೇಂದ್ರ ಪಾಟೀಲ್, ರಾಮಕೃಷ್ಣ ಹೆಗಡೆ, ಕೆ.ವಿ. ಶಂಕರಗೌಡ ಹಾಗೂ ಡಾ. ಎಚ್.ಎಲ್. ತಿಮ್ಮೇಗೌಡ ಅವರುಗಳ ಹೆಸರುಗಳು ಪ್ರಸ್ತಾಪದಲ್ಲಿದ್ದವು. ಆದರೆ ಇವರಾರೂ ಒಪ್ಪದೆ, ಕಡೆಗೆ ಶ್ರೀ ವೀರೇಂದ್ರ ಪಾಟೀಲ್ ಅವರ ಮೇಲೆ ಎಲ್ಲರ ಒತ್ತಾಯ ಬಂತು.

ನಾವು ಸೃಷ್ಟಿಸಿಕೊಂಡ ತ್ರಿಶಂಕು ಸ್ವರ್ಗಗಳು ನಿತ್ಯ ನರಕಗಳಾಗಿ ಹೊರಹೊಮ್ಮಿದ್ದು ಏಕಾಏಕಿಯೇನಲ್ಲ

## ದೇಹ– ಪ್ರಜ್ಞೆಗೆ ಬೇಕು ಧಾರಣಶಕ್ತಿ



ವಿಶ್ಲೇಷಣೆ

ಡಾ. ಗೀತಾ ವಸಂತ

**ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ**
**ತನ್ನ ನೂಲು ತನ್ನನೇ ಸುತ್ತಿ ಸುತ್ತಿ ಸಾವ ತೆರನಂತೆ**
**ಮನ ಬಂದುದ ಬಯಸಿ ಬಯಸಿ ಬೇವುತ್ತಿರುವೆನಯ್ಯ!**
**ಅಯ್ಯಾ, ಎನ್ನ ಮನದ ದುರಾಶೆಯ ಮಾಣಿಸಿ**
**ನಿಮ್ಮತ್ತ ತೋರಾ, ಚೆನ್ನಮಲ್ಲಿಕಾರ್ಜುನ**

ಅಕ್ಕಮಹಾದೇವಿಯ ಈ ಸಂಕಟದ ಸಾಲುಗಳು ಸರ್ವಕಾಲಕ್ಕೂ ಆತ್ಮನಿರೀಕ್ಷಣೆಗೆ ಸಲ್ಲುವಂಥವು. ನಮಗರಿವಿಲ್ಲದೇ ನಮ್ಮ ಸಾವನ್ನು ನಾವೇ ಆಹ್ವಾನಿಸಿಕೊಳ್ಳುವ ವಿಸ್ಮೃತಿಯಲ್ಲಿ ಬಂದಿಗಳು ನಾವು. ಟಿ.ವಿ. ಪರದೆಗಳ ಮೇಲೆ ಉರಿವ ಚಿತೆಗಳನ್ನೂ ಅಸಹಾಯಕರ ಚೀತ್ಕಾರಗಳನ್ನೂ ಕಾಣುತ್ತ ಕೇಳುತ್ತ ಇಂದ್ರಿಯ ಸಂವೇದನೆಯನ್ನೇ ಕಳೆದುಕೊಂಡಂಥ ನಿಷ್ಕ್ರಿಯತೆಗೆ ಒಡ್ಡಿಕೊಂಡಂಥ ಕಾಲವಿದು. ಎಲ್ಲೋ ಒಳಗೆ ದಹಿಸುವ ವಾಸನೆ ಸೂಕ್ಷ್ಮಗೊಂಡರಷ್ಟೇ ಅರಿವಿಗೆ ಬರುತ್ತದೆ.

ನಮ್ಮ ಮನದ ಬಯಕೆಗಳೇ ನಮ್ಮನ್ನು ದಹಿಸುತ್ತಿರುವುದಂತೂ ಕಟುಸತ್ಯ. ನಮ್ಮ ಅನುದಿನದ ಬಯಕೆಗಳನ್ನು ಪೂರೈಸಲು ನಮ್ಮ ಸುತ್ತಲೂ ನಾವೇ ನೇಯ್ದುಕೊಂಡಿರುವ ವ್ಯವಸ್ಥೆ ನಮ್ಮನ್ನೇ ಅಸಹಾಯಕರನ್ನಾಗಿಸುತ್ತಿರುವ ವ್ಯಂಗ್ಯವಿದು. ಆಧುನಿಕತೆಯು ಕಲಿಸಿದ ವ್ಯಕ್ತಿಪ್ರಜ್ಞೆಯು ನಮಗೆ ವೈಯಕ್ತಿಕ ಸ್ವರ್ಗಗಳನ್ನು ನಿರ್ಮಿಸಿಕೊಳ್ಳುವ ದುರಾಸೆಯನ್ನು ನೀಡಿದೆ. ಅದಕ್ಕೆ ಬೇಕಾದ ಹಣ ಹಾಗೂ ತಂತ್ರಜ್ಞಾನಗಳ ಬೇಟೆಗೆ ನಾವು ತೊಡಗಿಯಾಗಿದೆ. ನಮ್ಮ ಬೇರುಗಳಿಂದ ನಾವು ಬೇರ್ಪಟ್ಟು ನಗರಗಳೆಂಬ ತ್ರಿಶಂಕು ಸ್ವರ್ಗಗಳೆಡೆ ಆಕರ್ಷಿತರಾದೆವು. ಬೃಹತ್ ಕಟ್ಟಡಗಳು, ಥಳಕಿನ ರಸ್ತೆಗಳು, ಫ್ಲೈ ಓವರ್‌ಗಳು, ವೈಭವೋಪೇತ ಮಾಲ್‌ಗಳು, ರೆಸ್ಟೊರಂಟ್, ಪಬ್‌ಗಳು, ಜೂಜು ಅಡ್ಡೆಗಳು, ಹಣ ಗಳಿಸಲು ಹಾಗೂ ವ್ಯಯಿಸಲು ಇರುವ ಅಸಂಖ್ಯ ದಾರಿಗಳು ನಮ್ಮನ್ನು ರೋಮಾಂಚನಗೊಳಿಸಿದವು. ಈ ರೋಮಾಂಚನದ ಅಮಲು ನಮ್ಮನ್ನು ಸಂವೇದನಾರಹಿತರನ್ನಾಗಿಸುತ್ತ, ತಣ್ಣನೆಯ ಕ್ರೌರ್ಯವನ್ನು ನಮ್ಮ ನೆತ್ತರಿನಲ್ಲಿ ಬೆರೆಸಿಬಿಟ್ಟಿತು.

ಇಂದು ಆರೋಗ್ಯ ತುರ್ತುಪರಿಸ್ಥಿತಿ ಎದುರಾಗಿ ಸಾವಿನ ಕ್ಷಣಗಳ ತುತ್ತತುದಿಯಲ್ಲಿ ನಿಂತು ಒಂಟಿಯಾಗಿ ಕಂಪಿಸಬೇಕಾದ ಅಸಹಾಯ ಉಮ್ಮಳಕ್ಕೆ ಬೆಚ್ಚಿಬಿದ್ದಿದ್ದೇವೆ. ಒಂದುಕಡೆ ಆಕ್ಸಿಜನ್‌ಗಾಗಿ ಅಲೆದಾಡುವ, ಚಿತಾಗಾರಗಳ ಮುಂದೆ ಸರದಿಯಲ್ಲಿ ನಿಂತ ಜನರ ತಲ್ಲಣವನ್ನು ಅಂದಾಜೂ ಮಾಡಲಾಗದ ಅಸಹಾಯಕತೆ. ಬೇಕೋ ಬೇಡವೋ ಎಲ್ಲರೂ ಅಂಗಡಿಗಳ ಮುಂದೆ ಸರದಿಯಲ್ಲಿ ಮುನ್ನುಗ್ಗುತ್ತಿದ್ದಾರೆ. ತರಹೇವಾರಿ ಸರಕುಗಳನ್ನು ಕಾಯ್ದಿರಿಸಿಕೊಳ್ಳುವ ಹೊಟ್ಟೆಬಾಕ ಸಂಭ್ರಮವೊಂದು ಮೈಮರೆತು ಕುಣಿಯುತ್ತಿದೆ. ನಾಳೆ ಸಾವಿನ ಸರದಿ ನಮ್ಮದೂ ಆಗಬಹುದೆಂಬ ಅರಿವಿಲ್ಲದ ಮೈಮರೆವು ಇದು.

ನಾವು ಸೃಷ್ಟಿಸಿಕೊಂಡ ತ್ರಿಶಂಕು ಸ್ವರ್ಗಗಳು ನಿತ್ಯ ನರಕಗಳಾಗಿ ಹೊರಹೊಮ್ಮಿದ್ದು ಏಕಾಏಕಿಯೇನಲ್ಲ. ನಮ್ಮ ಸ್ವಾರ್ಥವೇ ನಮ್ಮನ್ನು ನಮ್ಮ ಕೊನೆಯ ಕ್ಷಣಗಳಲ್ಲಿ ಏಕಾಂಗಿಗಳನ್ನಾಗಿಸಿದೆ. ಯುದ್ಧಗಳು, ನಿಸರ್ಗ ವಿಕೋಪಗಳು, ಸಾಂಕ್ರಾಮಿಕ ರೋಗಗಳು ಇಡೀ ಸಮೂಹ ಬದುಕನ್ನು ತುಂಡರಿಸುವ ವಿದ್ಯಮಾನಗಳು. ಎಲ್ಲ ಕಳೆದುಕೊಂಡ ವಿಹ್ವಲತೆಯಲ್ಲಿ ಆವರಿಸುವ ಖಾಲಿತನ ಹಾಗೂ ಬದುಕಿನ ಕೊಂಡಿ ಕಳಚಿದಂಥ ಆಘಾತಗಳು ಉದಾಸ ಭಾವವೊಂದು ಆವರಿಸುವಂತೆ ಮಾಡುತ್ತವೆ. ಆದರೆ ಇದೇ ಸಮಯದಲ್ಲಿ ಸಂವೇದನಾರಹಿತ ಸ್ವಾರ್ಥ ಮನಃಸ್ಥಿತಿಯೊಂದು ತನ್ನ ಹಲ್ಲು, ಉಗುರುಗಳನ್ನು ಬೆಳೆಸಿಕೊಂಡುಬಿಟ್ಟಿರುತ್ತದೆ.

ಇಂದು ನಾವು ಎದುರಿಸುತ್ತಿರುವ ಸಾವಿನ ತಳಮಳ ಎರಡು ಬಗೆಯದು. ಒಂದು ದೈಹಿಕ ಸಾವಾದರೆ ಇನ್ನೊಂದು ನೈತಿಕ ಸಾವು. ಹಣ ಮಾಡುವ ಉನ್ಮಾದಕ್ಕೊಳಗಾದ ಜನ ಹಣ ಎಣಿಸಿ ಹಣ ಮಾಡಲು ಎಂಥ ಸುಲಿಗೆಗೂ ಇಳಿದುಬಿಟ್ಟಿದ್ದಾರೆ. ಸಾವಿನ ಬಾಗಿಲಲ್ಲಿ ನಿಂತವರಿಗೆ ಆಸ್ಪತ್ರೆಯ ಬಾಗಿಲುಗಳು ಮುಚ್ಚಿವೆ. ಆಸ್ಪತ್ರೆಯ ಹಾಸಿಗೆ ಬುಕ್ಕಿಂಗ್ ದಂಧೆಯ ಕರಾಳಮುಖ ಬಯಲಾಗುತ್ತಿರುವಂತೆಯೇ ವ್ಯವಸ್ಥೆಯ ಕರಾಳ ಮುಖ ತಲ್ಲಣಗೊಳಿಸುತ್ತಿದೆ. 'ಒಲೆಹೊತ್ತಿ ಉರಿದಡೆ ನಿಲಲುಬಹುದಲ್ಲದೆ ಧರೆ ಹೊತ್ತಿ ಉರಿದರೆ ನಿಲಲುಬಾರದು' ಎಂಬ ಅಸಹಾಯ ಮೊರೆ ಶ್ರೀಸಾಮಾನ್ಯನದಾಗಿದೆ.

ನಮ್ಮನ್ನು ಸಲಹುವ ವ್ಯವಸ್ಥೆಯೇ ಕತ್ತು ಹಿಸುಕಿದರೆ ಅದರ ವಿರುದ್ಧ ಪ್ರಾಣಚೈತನ್ಯವನ್ನು ಸಂಚಯಿಸಿ ಎದ್ದು ನಿಲ್ಲುವ ತ್ರಾಣವನ್ನೇ ಕಳೆದುಕೊಂಡ ನಿಷ್ಕ್ರಿಯಭಾವ ಆವರಿಸಿ ನಿಂತಿದೆ. ಹಣ ಹೀರುವ ಜಿಗಣೆಗಳಂತೆ ವರ್ತಿಸುತ್ತಿರುವ ಕೆಲವು ಆಸ್ಪತ್ರೆಗಳ ದುರಾಸೆ, ಔಷಧಗಳ ಕೃತಕ ಅಭಾವ ಸೃಷ್ಟಿಸುವ ಕಾಳಸಂತೆಕೋರರ ನೀಚತನ ಮುಂತಾದವು ಬಯಲಿಗೆ ಬರುತ್ತಾ ವೈದ್ಯಕೀಯ ರಂಗದ ಘೋರ ಮಾಫಿಯಾ ಭಯ ಹುಟ್ಟಿಸುತ್ತಿದೆ. ಹಣ ಕಟ್ಟದೇ ಹೆಣ ಕೊಡುವುದಿಲ್ಲವೆಂದು ತೊಡೆ ತಟ್ಟಿ ನಿಂತ ವ್ಯವಸ್ಥೆಯೆದುರು ಅಸಹಾಯಕಳಾಗಿ ಪತಿಯ ಶವವನ್ನು ಆಸ್ಪತ್ರೆಯಲ್ಲೇ ಬಿಟ್ಟುಬಂದ ಹೆಂಡತಿ, ಮಕ್ಕಳ ಮನದಲ್ಲಿ ಏನು ಹೆಪ್ಪುಗಟ್ಟಿರಬಹುದೆಂದು ನಾವು ಊಹಿಸಲು ಸಾಧ್ಯವೇ?

ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದು ಕಣ್ಣೆದುರೇ ಉಸಿರಿಗಾಗಿ ಪರದಾಡಿ ಉಸಿರು ನಿಲ್ಲಿಸುವ ಆಪ್ತರಿಗಾಗಿ ಕಣ್ಣೀರು ಮಿಡಿಯಲೂ ಆಗದಂತೆ ಸ್ತಬ್ಧವಾಗಿ ನಿಂತ ಮುಖಗಳನ್ನು ಎದುರುಗೊಳ್ಳುವುದು ಹೇಗೆ? ಇದಕ್ಕೆಲ್ಲ ಉತ್ತರಿಸಬೇಕಾದ, ನಿರ್ವಹಿಸಬೇಕಾದ ವ್ಯವಸ್ಥೆಯನ್ನು ದೂರುವುದೇ? ಆ ವ್ಯವಸ್ಥೆಯಲ್ಲಿ ನಮ್ಮದೂ ಪಾಲಿದೆಯೆಂದು ಆತ್ಮವಿಮರ್ಶೆಗಿಳಿಯುವುದೇ?

ಜನಸಾಮಾನ್ಯರ ಬದುಕು ಇಂದು ಒಮ್ಮೆಲೇ ಕೊಂಡಿ ಕಳಚಿಬಿದ್ದ ಅತಂತ್ರ ಸ್ಥಿತಿಗೆ ಸಿಲುಕಿ ತತ್ತರಿಸುತ್ತಿದೆ. ಮುಂದೇನು ಎಂಬ ಬೃಹದಾಕಾರದ ಪ್ರಶ್ನೆ ಉತ್ತರ ಕಾಣದ ಭೀತಿಯಲ್ಲಿ ನಲುಗಿಸುತ್ತಿದೆ. ಮತ್ತೆ ತಮ್ಮ ಊರುಗಳಿಗೆ ಗುಳೆ ಹೊರಟವರಲ್ಲಿ ಅಭಾವ ವೈರಾಗ್ಯ. ಹಳ್ಳಿಗಳ ಬದುಕೇನೂ ಅವರನ್ನು ಸಂಭ್ರಮದಿಂದ ಸ್ವಾಗತಿಸುತ್ತಿಲ್ಲ. ತುಂಬು ಕುಟುಂಬಗಳ ಜೊತೆಗೇ ಮನಸ್ಸುಗಳೂ ಒಡೆದುಹೋಗಿವೆ. ಮನುಷ್ಯರ ದುರಾಸೆಗಳನ್ನು ತಣಿಸುವ ತ್ರಾಣ ಹಳ್ಳಿಗಳಿಗಿಲ್ಲ. ಇಲ್ಲಿರಲಾರೆ, ಅಲ್ಲಿಯೂ ಹೋಗಲಾರೆ ಎಂಬ ತ್ರಿಶಂಕು ನರಕಗಳಲ್ಲಿ ಯುವಜನತೆ ಬೇಯುತ್ತಿದೆ. ಬೇರುಗಳು ಗ್ರಾಮೀಣ ಪರಿಸರದಲ್ಲಿ ಹೂತಿದ್ದರೆ, ನಗರಗಳು ತೋರಿಸಿದ ಅವಕಾಶಗಳ ಆಕಾಶ ತನ್ನತ್ತ ಸೆಳೆಯುತ್ತಿದೆ.

ಹಾಗೆ ನೋಡಿದರೆ ನಗರಗಳು ಅನಾಮಿಕರಾಗುವ ಸುಖವೊಂದನ್ನು ನಮಗೆ ದಯಪಾಲಿಸಿದ್ದವು. ದಮನಿತ ಸಮುದಾಯಗಳಿಗೂ ಸ್ತ್ರೀಯರಿಗೂ ಜಾತಿ ಅವಮಾನಗಳಿಂದಲೂ ಲಿಂಗತಾರತಮ್ಯದ ಕುಲುಮೆಯಿಂದಲೂ ಹೊರಬಂದು ತಮ್ಮನ್ನು ಮರುಶೋಧಿಸಿಕೊಳ್ಳುವ ಹಾಗೂ ಪುನರ್‌ರಚಿಸಿಕೊಳ್ಳುವ ಕನಸಿಗೆ ರೆಕ್ಕೆ ಹಚ್ಚಿದ್ದವು. ಹಳ್ಳಿಗಳ ಸರ್ಕಾರಿ ಶಾಲೆಯಲ್ಲಿ ಓದಿಯೂ ಕಲಿಕೆಯ ಶ್ರದ್ಧೆಯಿಂದ ಎತ್ತರದ ಹುದ್ದೆಗಳಿಗೇರುವ, ವಿದೇಶಗಳಿಗೆ ಹಾರುವ ಉದಾಹರಣೆಗಳು ಕಿರಿಯರನ್ನು ನಗರ ಮುಖಿಯಾಗಿಸಿದವು. ಇಂದು ಕಿಕ್ಕಿರಿದ ನಗರಗಳು ನರಕಗಳಾಗಿದ್ದರೆ, ಪಾಳುಬಿದ್ದ ಹಳ್ಳಿಗಳಿಗೆ ಕನಸುಗಳಿಗೆ ಕಾವು ಕೊಡುವ ಚೈತನ್ಯವಿಲ್ಲ.


ಬದುಕಿನ ಕ್ಷೇತ್ರವನ್ನು ವಿಸ್ತರಿಸಿಕೊಳ್ಳಬೇಕೆಂಬ ಹಂಬಲದಲ್ಲಿ ಯಾವ ತಪ್ಪೂ ಇಲ್ಲ. ಆದರೆ ಅವಕಾಶಗಳಿಗಾಗಿ ಏನು ಬೇಕಾದರೂ ಮಾಡಿಯೇನು ಎಂಬ ನೈತಿಕ ಕುಸಿತವು ಸಮೂಹದಿಂದ ಅಗಲಿದ ಏಕಾಕಿ ಅಪರಾಧಿಗಳನ್ನು ಸೃಷ್ಟಿಸಿದೆ. ಇಂಥವರು ಸುತ್ತಲಿನವರ ಸಾವಿನ ಆಕ್ರಂದನವನ್ನೂ ಕೇಳದಷ್ಟು ಕಿವುಡರೂ ಮನೆಯುರಿಯುವ ಬೆಂಕಿಯಲ್ಲಿ ಬೀಡಿ ಹೊತ್ತಿಸಿಕೊಳ್ಳುವ ಸಮಯಸಾಧಕರೂ ಆಗಿ ಬದಲಾಗಿಬಿಟ್ಟಿದ್ದಾರೆ. ಹೇಗಾದರೂ ಬದುಕಬೇಕೆಂಬ ದಾಹ, ಹಿಂಬಾಲಿಸುವ ಸಾವಿನ ನೆರಳನ್ನು ಕಾಣದಷ್ಟು ಅಸೂಕ್ಷ್ಮವಾಗಿಬಿಟ್ಟಿದೆ.

ಬೆಳಕಿಗೆ ಬರದ ಇಂಥ ಇನ್ನೂ ಎಷ್ಟೋ ಘಟನೆಗಳು ಆತ್ಮಸಾಕ್ಷಿಯನ್ನು ಕೊಲ್ಲುತ್ತಲೇ ಹೋಗುತ್ತವೆ. ಈ ದೈಹಿಕ ಸಾವು ಹಾಗೂ ನೈತಿಕ ಸಾವುಗಳು ದಿನವೂ ಸಂಭವಿಸುತ್ತಿರುವ ಇಂದಿನ ದಿನಮಾನದಲ್ಲಿ ಎಳೆಯ ಮನಸ್ಸುಗಳನ್ನು ರೂಪಿಸುವ ಕೆಲಸದಿಂದ ಹಿಂದೆಗೆಯುವಂತಿಲ್ಲ. ಮೌಲ್ಯವ್ಯವಸ್ಥೆಯೊಂದನ್ನು ರೂಪಿಸಬೇಕಾದ ಕುಟುಂಬಗಳು ಆರ್ಥಿಕ ಅತಂತ್ರತೆಯಲ್ಲಿ ಹೊಯ್ದಾಡುತ್ತಿದ್ದರೆ ಶೈಕ್ಷಣಿಕ ವ್ಯವಸ್ಥೆಯು ಬರಿಯ ತಾಂತ್ರಿಕ ಆಕರಗಳಲ್ಲಿ ಪಠ್ಯಕ್ರಮವನ್ನು ಪೂರೈಸಲು ಹೆಣಗುತ್ತಿದೆ. ಜಾಣ್ಮೆಯೆಂದರೆ ಸದಾ ಅಪ್‌ಡೇಟ್ ಆಗುವುದು, ವೇಗಕ್ಕೆ ಹೊಂದಿಕೊಳ್ಳುವುದು ಎಂಬುದನ್ನೇ ನಿರೀಕ್ಷಿಸುವ ನಾವು, ವೇಗವು ತಲೆ ತಿರುಗುವಂತೆ ಮಾಡಿ ಭ್ರಮಿತ ಸ್ಥಿತಿಯನ್ನು ಸೃಷ್ಟಿಸಬಲ್ಲದು ಎಂಬ ಎಚ್ಚರವನ್ನೂ ಹೊಂದಿರಬೇಕಾಗುತ್ತದೆ.

ಕೃತಕ ಬುದ್ಧಿಮತ್ತೆಯ ಆವಿಷ್ಕಾರದ ಈ ಯುಗದಲ್ಲಿ ಇಂಥ ಚರ್ಚೆಗಳೇ ಅರ್ಥಹೀನವೆಂದು ಕೆಲವರು ಕಾಲೆಳೆಯುವುದಿದೆ. ಆದರೆ ಬುಗುರಿಯೊಂದು ತಿರುಗಿ ಮುಗಿದಮೇಲೆ ನೆಲಕ್ಕೊರಗಲೇಬೇಕಲ್ಲವೇ? ಆಗ ನೆಲದ ವಾಸ್ತವಗಳೇ ನಮ್ಮನ್ನು ಕಾಯಬೇಕು. ದೈಹಿಕವಾಗಿ ರೋಗನಿರೋಧಕ ಶಕ್ತಿ ಹಾಗೂ ಪ್ರಜ್ಞೆಯ ನೈತಿಕ ಧಾರಣ ಶಕ್ತಿಗಳೇ ನಮ್ಮನ್ನು ಪೊರೆಯಬೇಕು.



### ಚುರುಮುರಿ



#### ಕೊರೊನಾ ವರ್ಣಮಾಲೆ!

• ಲಿಂಗರಾಜು ಡಿ.ಎಸ್.

'**ಕೊರೊನಾ** ಪ್ರಕರಣ ಏರಿಕೆ ಹ್ಯಂಗೆ, ಯಾಕೆ ಅನ್ನೋ ರಹಸ್ಯ ಗೊತ್ತೇನ್ಲಾ?' ಅಂದ್ರು ತುರೇಮಣೆ. ಈವಯ್ಯನ ಹಕ್ಲಾಸ ಸುರುವಾಯ್ತು ಅಂತ 'ಅದೇನ್ಸಾ?' ಅಂತ ಕೇಳಿದೆ.

'ನೋಡ್ಲಾ, ಬಿ, ಸಿ, ಐ ಅನ್ನೋ ಅಕ್ಸರದಿಂದ ಸುರುವಾಗೋ ಪದ ಎಲ್ಲವೋ ಅಲ್ಲೇ ಕೊರೊನಾ ಸುತ್ತು ವಡಿತಾದೆ!' ಅಂದ್ರು.

'ಬಿಸಿಸಿಐ, ಐಪಿಎಲ್ ಬಾಲುಕಾಂಡದ ಬಯೊಬಬಲ್ ಕತೆಯೋ ಇದು?' ಕೇಳಿದೆ.

'ಕೊರೊನಾ ಹಿಸ್ಟರಿ ನೋಡ್ಲಾ, ಬಿಸಿಐ ಅಕ್ಸರದ ಅಕ್ಕಪಕ್ಕದಗೇ ಅದೆ. ಈ ಅಕ್ಸರಗಳ ತೆಗೆದಾಕಿಬುಟ್ರೆ ಸರೋತದೆ. ಕೊರೊನಾ ಸಿ ಅಕ್ಸರವಾ, ಸಿ ಅಕ್ಸರದ ಚೀನಾದಲ್ಲಿ ಹುಟ್ಟಿ, ಬಿ ಅಂದ್ರೆ ಬೀಜಿಂಗಿಂದ ಬ್ರೆಜಿಲಿಗೆ ಅಮರಿಕ್ಯಂಡು, ಐ ಅಕ್ಸರದ ಇರಾನ್, ಇಟಲಿಗೆ ಬಂತು. ಅಲ್ಲಿಂದ ಬಿ-ಭಾರತಕ್ಕೆ, ಬಾಂಬೆಯಿಂದ ಸುರುವಾಯ್ತು. ಆಮೇಲೆ ಬಿ-ಬೆಂಗಳೂರಿಗಾ, ಇಲ್ಲಿಂದ ಸಿ-ಚಾಮರಾಜನಗರಕ್ಕೆ ಹೋಗ್ಯದೆ. ಈಗ ಸೀದಾ ಬಿಬಿಎಂಪಿಗೆ ಅಮರಿಕ್ಯಂಡು ಬಿ-ಬೆಡ್ ಬ್ಲಾಕಿಂಗ್‌ವರೆಗು ಬಂದು ನಿಂತದೆ!' ಅಂದ್ರು.

'ಇದೇನು ಪಕ್ಸಗಳಿಗೆ ಅನ್ವಯಿಸೂದಿಲ್ಲವೇ?' ಅಂದ ಚಂದ್ರು.

'ಏನೋ ನಾಕಾಣಪ್ಪ!' ಅಂದು ಸುಮ್ಮಾದರು. 'ಆಯ್ತು ಸಾ, ಕೊರೊನಾ ಕಡಮೆ ಮಾಡದು ಹ್ಯಂಗೆ?' ಅಂದೆ.

'ಕೊರೊನಾ ಟೆಸ್ಟ್ ಮಾಡದು ನಿಲ್ಲಿಸಿಬುಡ್ತರಂತೆ. ಆಗ ಸಕ್ರಿಯ ಪ್ರಕರಣ ನಿಲ್ ಆಗೋಯ್ತದೆ' ಅಂದ್ರು.

'ಅಯ್ಯೋ ಬೊಡ್ಡಿಹೈದ್ನೆ, ಜನ ಹಿಂಗೆ ಸಾಯ್ತಾ ಅವ್ರಲ್ಲಾ ಲೆಕ್ಕ ಹ್ಯಂಗೆ ಕೊಡ್ತೀರಲಾ ಗೆಂಡೆಕಾಳ?' ಅಂತು ಯಂಟಪ್ಪಣ್ಣ.

'ಯಂಟಪ್ಪಣ್ಣ, ಬಿ-ಬ್ಯಾಳೆಕಾಳು ರೇಟು ಜಾಸ್ತಿಯಾಗಿದ್ದುಕ್ಕೆ ಜನ ಸತ್ತವ್ರೆ ಅಂತೇಳಿ ಡೆತ್ ಸರ್ಟಿಫಿಕೇಟಲ್ಲಿ 'ಡೆತ್ ಡ್ಯುಟು ಹೈಯರ್ ಪಲ್ಸ್ ರೇಟ್' ಅಂತ ಬರುದ್ರಾಯ್ತಪ್ಪ. ಇದು ಡೆತ್ ಆಡಿಟ್ಟಲ್ಲಿ ಕರೆಟ್ಟಾಗು ಇರ್ತದೆ!' ಅಂದ್ರು. ಸರ್ಕಾರಕೂ ಮಂತ್ರಿಗಳ ಮಾತಿಗೂ ವಿರೋಧಪಕ್ಸಕೂ ಬ್ಯಾಳೆಕಾಳಿಗೂ ಕೊರೊನಾಗೂ ಎಲ್ಲೆಲ್ಲಿ ಸಂಬಂಜ ಅಂತ ತಲೆ ಕೆಟ್ಟೋಯ್ತು!

### ಸಂಗತ

## ಬಂಗಾಳ: ಮೇಲೆದ್ದ ದಲಿತ ರಾಜಕಾರಣ

**ರಾಜ್ಯದಲ್ಲಿ ಬಿಜೆಪಿ ಮತ್ತು ದಲಿತ ರಾಜಕಾರಣ ಎರಡೂ ಒಟ್ಟೊಟ್ಟಿಗೆ ಗಟ್ಟಿಗೊಳ್ಳುತ್ತಿರುವುದು ಹೆಚ್ಚು ಚರ್ಚೆಗೆ ಒಳಪಡಬೇಕಾದ ಸಂಗತಿಯಾಗಿದೆ**

• ವಾದಿರಾಜ್

**ಜಿದ್ದಾಜಿದ್ದಿನ** ಚುನಾವಣಾ ಕಣವಾಗಿದ್ದ ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಭಾರಿ ಬಹುಮತದೊಂದಿಗೆ ಗೆಲುವು ದಾಖಲಿಸಿದೆ. ಮಮತಾ ಬ್ಯಾನರ್ಜಿ ಮತ್ತೆ ಮುಖ್ಯಮಂತ್ರಿಯಾಗಿದ್ದಾರೆ. ದೊಡ್ಡ ಇತಿಹಾಸವಿರುವ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ನೆಲಕಚ್ಚಿವೆ. ಲೆಕ್ಕಕ್ಕೆ ಇಲ್ಲದಂತೆ ಇದ್ದ ಬಿಜೆಪಿ, 77 ಶಾಸಕರೊಂದಿಗೆ ಪ್ರಬಲ ವಿರೋಧ ಪಕ್ಷವಾಗಿ ಎದ್ದು ನಿಂತಿದೆ.

ಈ ಚುನಾವಣೆಯು ಪಶ್ಚಿಮ ಬಂಗಾಳದಲ್ಲಿ 'ಭದ್ರಲೋಕ' ಎಂದೇ ಗುರುತಿಸಲಾಗುವ ಮುಂದುವರಿದ ಜಾತಿಗಳ ಪ್ರಾಬಲ್ಯಕ್ಕೆ ಏಟು ಕೊಟ್ಟಿದೆ. ಮಾತ್ರವಲ್ಲ, ದಲಿತ ರಾಜಕಾರಣದ ಹೊಸ ಅಲೆ ಮೇಲೇಳಲು ಕಾರಣವಾಗಿದೆ. ರಾಜ್ಯದಲ್ಲಿ ಬಿಜೆಪಿ ಮತ್ತು ದಲಿತ ರಾಜಕಾರಣ ಎರಡೂ ಒಟ್ಟೊಟ್ಟಿಗೆ ಗಟ್ಟಿಗೊಳ್ಳುತ್ತಿರುವುದು ಹೆಚ್ಚು ಚರ್ಚೆಗೆ ಒಳಪಡಬೇಕಾದ ಸಂಗತಿಯಾಗಿದೆ.

ಶೇ 23ರಷ್ಟು ಎಸ್‌ಸಿ, ಶೇ 6ರಷ್ಟು ಎಸ್‌ಟಿ ಜನಸಂಖ್ಯೆ ಹೊಂದಿರುವ ಪಶ್ಚಿಮ ಬಂಗಾಳದಲ್ಲಿ ನಾಮಶೂದ್ರ, ರಾಜಬಂಶಿ, ಬೌರಿ, ಪೌಂಡ್ರ, ಬಾಗಡಿ, ಚಮ್ಮಾರ ಪ್ರಮುಖ ದಲಿತ ಜಾತಿಗಳು. ಇಲ್ಲಿ 68 ಎಸ್‌ಸಿ, 16 ಎಸ್‌ಟಿ ಮೀಸಲು ಕ್ಷೇತ್ರಗಳಿವೆ. ಅತಿಹೆಚ್ಚು ಪರಿಶಿಷ್ಟ ಜಾತಿಯವರಿರುವ ದೇಶದ ಮೂರನೇ ರಾಜ್ಯವಾದರೂ ದಲಿತ ರಾಜಕಾರಣ, ದಲಿತ ನಾಯಕತ್ವ ಮುನ್ನೆಲೆಗೆ ಬಂದಿರಲಿಲ್ಲ. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 10 ಎಸ್‌ಸಿ ಮೀಸಲು ಲೋಕಸಭಾ ಕ್ಷೇತ್ರಗಳಲ್ಲಿ 5 ಹಾಗೂ ಎರಡೂ ಎಸ್‌ಟಿ ಮೀಸಲು ಕ್ಷೇತ್ರಗಳನ್ನು ತನ್ನದಾಗಿಸಿಕೊಂಡಿತು.

ಈ ಬೆಳವಣಿಗೆ ಟಿಎಂಸಿಯ ರಣನೀತಿ ನಿರೂಪಕರನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿತು. ಚುನಾವಣೆಯ ದಿನಾಂಕ ಘೋಷಣೆಯಾದ ಮರುದಿನವೇ ಎಲ್ಲಾ 294 ವಿಧಾನಸಭಾ ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಪ್ರಕಟಿಸಿದ ಟಿಎಂಸಿ, 68 ಎಸ್‌ಸಿ ಮೀಸಲು ಕ್ಷೇತ್ರವಲ್ಲದೇ 11 ಸಾಮಾನ್ಯ ಕ್ಷೇತ್ರಗಳಲ್ಲಿ ದಲಿತರಿಗೆ ಟಿಕೆಟ್ ನೀಡಿತು. ಹಾಗೆಯೇ ಮುಸ್ಲಿಮರಿಗೆ ಕೊಡುತ್ತಿದ್ದ 60 ಸ್ಥಾನಗಳನ್ನು 44ಕ್ಕೆ ಇಳಿಸಿತು.

ಸಾಮಾನ್ಯ ಕ್ಷೇತ್ರಗಳಲ್ಲಿ ದಲಿತರಿಗೆ ಟಿಕೆಟ್ ಕೊಡುವ ಪ್ರಯೋಗವನ್ನು ಬಿಜೆಪಿ 2016ರಲ್ಲೇ ಮಾಡಿತ್ತು. ಈ ಸಲ ಬಿಜೆಪಿ, ಟಿಎಂಸಿಗಿಂತಲೂ ಮುಂದೆ ಹೋಯಿತು. 68 ಎಸ್‌ಸಿ ಮೀಸಲು ಕ್ಷೇತ್ರಗಳ ಜೊತೆಗೆ 27 ಸಾಮಾನ್ಯ ಕ್ಷೇತ್ರಗಳಲ್ಲಿಯೂ ದಲಿತರಿಗೆ ಟಿಕೆಟ್ ನೀಡಿತು. ಇದು ದಲಿತ ರಾಜಕಾರಣದಲ್ಲಾದ ದೊಡ್ಡ ಬೆಳವಣಿಗೆ.

ಈ ಸಲದ ಚುನಾವಣೆಯ ಫಲಿತಾಂಶದಲ್ಲಿ ಟಿಎಂಸಿ 213 ಕ್ಷೇತ್ರಗಳಲ್ಲಿ ಗೆದ್ದು ದಾಖಲೆ ನಿರ್ಮಿಸಿತಾದರೂ ಎಸ್‌ಸಿ ಮೀಸಲು ಕ್ಷೇತ್ರಗಳಲ್ಲಿನ ಗೆಲುವು 50ರಿಂದ 36ಕ್ಕೆ ಕುಸಿದಿದೆ. ಸಾಮಾನ್ಯ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ 8 ದಲಿತ ಅಭ್ಯರ್ಥಿಗಳು ಗೆದ್ದು ಟಿಎಂಸಿ ಹೆಮ್ಮೆಪಡುವಂತೆ ಮಾಡಿದ್ದಾರೆ. ಎಸ್‌ಸಿ ಮೀಸಲು ಕ್ಷೇತ್ರಗಳಲ್ಲಿ ಬಿಜೆಪಿಯಿಂದ 32 ಅಭ್ಯರ್ಥಿಗಳು ಗೆದ್ದರೆ, 'ಹೊಸ ಪ್ರಯೋಗ'ದಿಂದ ಬಿಜೆಪಿಗೆ ಮೂವರು ಹೆಚ್ಚುವರಿ ದಲಿತ ಶಾಸಕರು ಸಿಕ್ಕಿದ್ದಾರೆ.

ಎಸ್‌ಟಿ ಸಮುದಾಯದಿಂದ ಟಿಎಂಸಿಯಿಂದ 10, ಬಿಜೆಪಿಯಿಂದ 9 ಅಭ್ಯರ್ಥಿಗಳು ಗೆದ್ದಿದ್ದಾರೆ. ಇವರಲ್ಲಿ ಟಿಎಂಸಿಯ ಒಬ್ಬರು, ಬಿಜೆಪಿಯ ಇಬ್ಬರು ಸಾಮಾನ್ಯ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಗೆದ್ದವರು. ರಾಜ್ಯದಲ್ಲಿ ಶೇ 27ರಷ್ಟಿರುವ ಮುಸ್ಲಿಮರ ಸಗಟು ಮತಗಳು ಟಿಎಂಸಿಗೆ ಒಲಿದಿದ್ದು ಮೀಸಲು ಕ್ಷೇತ್ರಗಳ ಮೇಲೂ ಪ್ರಭಾವ ಬೀರಿದೆ. ಒಟ್ಟಾರೆ ಬಿಜೆಪಿಯಿಂದ ಗೆದ್ದ 77 ಶಾಸಕರಲ್ಲಿ 44, ಅಂದರೆ ಶೇ 57ರಷ್ಟು ಮಂದಿ ಪರಿಶಿಷ್ಟ ಜಾತಿ, ಪಂಗಡದವರಾಗಿದ್ದಾರೆ. ಬ್ರಾಹ್ಮಣ, ಕ್ಷತ್ರಿಯ ಇತ್ಯಾದಿ ಪ್ರಬಲ ಜಾತಿಗಳಿಂದ ಟಿಎಂಸಿಗೆ 102 ಶಾಸಕರು ದಕ್ಕಿದರೆ ಬಿಜೆಪಿಯಿಂದ ಗೆದ್ದವರು 25. ಪಶ್ಚಿಮ ಬಂಗಾಳದಲ್ಲಿ ಹಿಂದುಳಿದ ವರ್ಗಗಳ ರಾಜಕೀಯ ಪ್ರಾತಿನಿಧ್ಯ ಬಲು ಕಡಿಮೆ. ಈ ಸಲ ಟಿಎಂಸಿಯಿಂದ 15, ಬಿಜೆಪಿಯಿಂದ 8 ಒಬಿಸಿ ಶಾಸಕರು ಆಯ್ಕೆಯಾಗಿದ್ದಾರೆ.



ಅಬ್ಬರದ ಪ್ರಚಾರದಿಂದ ಗಮನ ಸೆಳೆದಿದ್ದ ಬಿಜೆಪಿಗಿದ್ದದ್ದು ಏರು ಹಾದಿ. ಶೇ 70.54ರಷ್ಟಿರುವ ಹಿಂದೂಗಳ ಮತಗಳಲ್ಲೇ ಅದು ಬಹುಮತ ಸಾಧಿಸಬೇಕಿತ್ತು. ಬಿಜೆಪಿ ನಾಲ್ವರು ಮುಸ್ಲಿಂ ಅಭ್ಯರ್ಥಿಗಳಿಗೆ ಟಿಕೆಟ್ ಕೊಟ್ಟಿತ್ತಾದರೂ ಹೆಚ್ಚಿನ ಮತಗಳಿಕೆ ಸಾಧ್ಯವಾಗಿಲ್ಲ. ಒಟ್ಟು ಮತದಾನದಲ್ಲಿ ಬಿಜೆಪಿ ಶೇ 38.1ರಷ್ಟು ಮತ ಗಳಿಸಿದೆಯಾದರೂ ಹಿಂದೂಗಳಲ್ಲಿ ಶೇ 54ರಷ್ಟು ಮತ ಪಡೆದಿದೆ. ಅದೇ ಟಿಎಂಸಿಗೆ ಮುಸ್ಲಿಂ ಮತಗಳು ಸಗಟಾಗಿ ಬಂದಿವೆಯಾದರೂ ಹಿಂದೂಗಳ ಮತ ಬಂದಿರುವುದು ಶೇ 31ರಷ್ಟು ಮಾತ್ರ.

ದೇಶದಲ್ಲಿ ಪರಿಶಿಷ್ಟ ಜಾತಿಯವರ ಅತಿ ಹೆಚ್ಚು ಜನಸಾಂದ್ರತೆ ಇರುವ ಕೂಚ್‌ಬಿಹಾರ್ ಜಿಲ್ಲೆಯ 9 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ 7ರಲ್ಲಿ, ಟಿಎಂಸಿ 2ರಲ್ಲಿ ಗೆದ್ದಿವೆ. ಅರವತ್ತರ ದಶಕದಲ್ಲಿ ನಕ್ಸಲ್ ಚಳವಳಿಯ ಬೀಜ ಬಿತ್ತಿದ ನಕ್ಸಲ್‌ಬಾರಿ ಮೀಸಲು ಕ್ಷೇತ್ರದಲ್ಲಿ ಬಿಜೆಪಿಯ ಆನಂದಮಯ ಬರ್ಮನ್ ಗೆದ್ದಿದ್ದಾರೆ.

ತಮ್ಮ ಆತ್ಮಕಥೆ 'ಇಂಟರಾಗೇಟಿಂಗ್ ಮೈ ಚಾಂಡಾಲ್ ಲೈಫ್' ಮೂಲಕ ದೇಶದ ಗಮನ ಸೆಳೆದಿದ್ದ, ಶಾಲೆಯ ಮುಖ ನೋಡದ ರಿಕ್ಷಾ ಚಾಲಕ, ಲೇಖಕ ಮನೋರಂಜನ್ ಬ್ಯಾಪಾರಿ ಅವರು ಬಾಲಗಡ ಮೀಸಲು ಕ್ಷೇತ್ರದಿಂದ ಟಿಎಂಸಿ ಟಿಕೆಟ್ ಪಡೆದು ವಿಧಾನಸಭೆ ಪ್ರವೇಶಿಸಿದ್ದಾರೆ. ಪುಟ್ಟ ಗುಡಿಸಲಲ್ಲಿ ವಾಸಿಸುವ ಬಿಜೆಪಿ ಕಾರ್ಯಕರ್ತೆ ಚಂದನಾ ಬೌರಿ ಸಲ್ತೋರಾ ಮೀಸಲು ಕ್ಷೇತ್ರದಿಂದ ಗೆದ್ದಿದ್ದಾರೆ.

ಚುನಾವಣಾ ಫಲಿತಾಂಶದ ನಂತರ ಬಂಗಾಳದಲ್ಲಿ ಹಿಂಸಾಚಾರ ಮುಂದುವರಿದಿದೆ. ಈಗ ಏಟು ತಿನ್ನುತ್ತಿರುವವರಲ್ಲಿ ಹೆಚ್ಚಿನವರು ಬಿಜೆಪಿಯನ್ನು ಬೆಂಬಲಿಸಿದ ದಲಿತರು. ಪಾಠ ಕಲಿತಿರುವ ಮಮತಾ ಇದೆಲ್ಲವನ್ನೂ ನಿಭಾಯಿಸಿಯಾರು. ಆದರೆ ಬಂಗಾಳದಲ್ಲಿ ಮೇಲೆದ್ದಿರುವ ದಲಿತ ರಾಜಕಾರಣ ಇಲ್ಲಿಗೇ ನಿಲ್ಲುವುದಿಲ್ಲ.

ಲೇಖಕ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತ

### ವಾಚಕರ ವಾಣಿ

#### ವಾಹನ ಬಳಕೆ: ಇರಲಿ ವಿನಾಯಿತಿ

ರಾಜ್ಯದಲ್ಲಿ ಲಾಕ್‌ಡೌನ್ ಪ್ರಯುಕ್ತ, ಬೆಳಿಗ್ಗೆ 6ರಿಂದ 10 ಗಂಟೆಯವರೆಗೂ ದೈನಂದಿನ ಬದುಕಿಗೆ ಬೇಕಾದ ವಸ್ತುಗಳನ್ನು ಖರೀದಿಸಲು ಮಾರುಕಟ್ಟೆಗೆ ಕಾಲ್ನಡಿಗೆಯಲ್ಲಿ ಹೋಗಬೇಕು, ಯಾವುದೇ ವಾಹನ ಬಳಸುವಂತಿಲ್ಲವೆಂಬ ಆದೇಶವಿದೆ. ವಯೋವೃದ್ಧರು, ಅಶಕ್ತರು ಮಾರುಕಟ್ಟೆಗೆ ಹೋಗಿ ದವಸಧಾನ್ಯಗಳಿಂದ ತುಂಬಿದ ಭಾರವಾದ ಚೀಲಗಳನ್ನು ಹೊತ್ತು ತರಲು ಸಾಧ್ಯವಿಲ್ಲ. ಹೀಗಾಗಿ ಅಂತಹವರಿಗೆ ಅವಶ್ಯಕ ವಸ್ತು ಖರೀದಿಸಲು, ಶುದ್ಧ ನೀರು ತರುವ ಸಲುವಾಗಿ ವಾಹನ ಬಳಸಲು ಅನುಮತಿ ನೀಡಬೇಕು.

**ಎ.ಎಸ್.ಮಕಾನದಾರ,** ಗದಗ

#### ಮನೋಬಲದಿಂದ ದೇಹಬಲ ಸಾಧ್ಯ

ಕೊರೊನಾ ಎರಡನೇ ಅಲೆಯ ತೀವ್ರತೆಯು ಮನುಷ್ಯರನ್ನು ಎಷ್ಟರಮಟ್ಟಿಗೆ ಬಾಧಿಸುತ್ತಿದೆ ಎಂಬುದರ ಅರಿವು ಈಗಾಗಲೇ ನಮ್ಮೆಲ್ಲರ ಅನುಭವಕ್ಕೆ ಬಂದಿದೆ. ಹಾಗಾಗಿ ಕೊರೊನಾವನ್ನು ಯಾರೂ ನಿರ್ಲಕ್ಷಿಸುವಂತಿಲ್ಲ. ಬೇರೆ ಯಾವುದೇ ಕಾಯಿಲೆ ನಿಮ್ಮನ್ನು ಆವರಿಸಿಕೊಂಡಿದ್ದರೆ ಮನೆಯವರ ಆರೈಕೆಯಿಂದಲೇ ನೀವು ಅದನ್ನು ಅರ್ಧ ಜಯಿಸಿಬಿಡಬಹುದಿತ್ತು. ಆದರೆ ಇದು ಹಾಗಲ್ಲ. ನಿಮಗೆ ಕೋವಿಡ್ ಇರುವುದು ದೃಢಪಡುತ್ತಿದ್ದಂತೆಯೇ ಎಲ್ಲರೂ ನಿಮ್ಮಿಂದ ಅನಿವಾರ್ಯವಾಗಿ ಅಂತರ ಕಾಪಾಡಿಕೊಳ್ಳಲೇ ಬೇಕಾಗುತ್ತದೆ. ಮನೆಯವರನ್ನೂ ಒಳಗೊಂಡಂತೆ ಯಾರೂ ನಿಮ್ಮ ಬಳಿ ಬರುವ ಹಾಗಿಲ್ಲ, ನಿಮ್ಮನ್ನ ತುಂಬಾ ಹತ್ತಿರದಿಂದ ನೋಡುವ ಹಾಗಿಲ್ಲ. ಜೊತೆಗಿದ್ದು ಕಷ್ಟ ಸುಖವನ್ನು ವಿಚಾರಿಸಿ ಹತ್ತಿರದಿಂದ ಆರೈಕೆ ಮಾಡುವಂತಿಲ್ಲ.

ಇದರಿಂದಾಗಿಯೇ ನಿಮಗೆ ಕೆಲವೊಮ್ಮೆ ಏಕಾಂಗಿತನ ಕಾಡಿಬಿಡಬಹುದು, ನೀವು ಅರ್ಧ ಕುಗ್ಗಿ ಹೋಗಬಹುದು, ನಿಮ್ಮಲ್ಲಿ ಆತ್ಮವಿಶ್ವಾಸ ಕಳೆದುಹೋಗಬಹುದು. ಹಾಗಾಗಿ ಇಂತಹ ಸಂದರ್ಭಗಳಲ್ಲಿ ನೀವು ಆದಷ್ಟು ನಿಮ್ಮ ಮನಸ್ಸನ್ನು ಸದೃಢವಾಗಿ ಇಟ್ಟುಕೊಳ್ಳಬೇಕು. ಮನೋಬಲ ಹೆಚ್ಚಿಸಿಕೊಳ್ಳಬೇಕು. ಮನೋಬಲ ಹೆಚ್ಚಾದಂತೆ, ದೇಹ ಬಲವೂ ಹೆಚ್ಚಾಗುತ್ತದೆ. ಆಗ ನೀವು ಖಂಡಿತಾ ಗುಣಮುಖರಾಗಿ ಹೊರ ಬರಬಹುದು.

**ರಾಘವೇಂದ್ರ ಅಪುರಾ,** ಅಗತಗೌಡನಹಳ್ಳಿ, ಗುಂಡ್ಲುಪೇಟೆ

#### ಚಿಕಿತ್ಸೆಗೆ ವಯಸ್ಸಿನ ಮಿತಿ ಇದೆಯೇ?

ಸ್ವಲ್ಪ ಅಸ್ವಸ್ಥತೆಯ ಕಾರಣದಿಂದ, ನಮ್ಮ ಮನೆಯ ಬಳಿಯೇ ಇರುವ ಚೋಳನಾಯಕನಹಳ್ಳಿಯ ಕ್ಲಿನಿಕ್ ಒಂದಕ್ಕೆ ಹೋದೆ. ಆಗ ಸಂಜೆ 7 ಗಂಟೆ. ಕ್ಲಿನಿಕ್‌ಗೆ ಹೊಂದಿಕೊಂಡಂತೆ ಅಲ್ಲೊಂದು ಮೆಡಿಕಲ್ ಸ್ಟೋರ್ ಇದ್ದು, ಅಲ್ಲಿನ ವೈದ್ಯೆಯ ಪತಿಯೇ ಅದರ ಮೇಲ್ವಿಚಾರಕರು. ಆತ ನನ್ನ ಕೈಗಳಿಗೆ ಸ್ಯಾನಿಟೈಸರ್ ಹಾಕಿ, ಆಕ್ಸಿಜನ್ ಪ್ರಮಾಣ ಹಾಗೂ ಜ್ವರದ ಪ್ರಮಾಣವನ್ನು ಪರೀಕ್ಷಿಸಿ, 'ಏನು ತೊಂದರೆ' ಎಂದು ಕೇಳಿದರು. 'ಎರಡು-ಮೂರು ದಿನಗಳಿಂದ ಹಸಿವಾಗುತ್ತಿಲ್ಲ, ನಿದ್ರೆ ಸರಿಯಾಗಿ ಬರುತ್ತಿಲ್ಲ, ಡಾಕ್ಟರನ್ನು ಕಾಣಬೇಕಿತ್ತು' ಎಂದೆ. 'ವಯಸ್ಸೆಷ್ಟು' ಎಂದು ಕೇಳಿದರು. 'ನನಗೆ 74' ಎಂದೆ. '60 ವರ್ಷ ಮೇಲ್ಪಟ್ಟವರನ್ನು ನಾವು ನೋಡುವುದಿಲ್ಲ' ಎಂದು ವಾಪಸ್ ಕಳುಹಿಸಿಬಿಟ್ಟರು.

ಈ ಕೋವಿಡ್ ಸಂದಿಗ್ಧದ ಕಾಲದಲ್ಲಿ ಡಾಕ್ಟರ್‌ಗಳ ಕರ್ತವ್ಯ ಬಲು ದೊಡ್ಡದೇ ಇದೆ. ಎಲ್ಲಾ ವಯೋಮಾನದ ಅಸ್ವಸ್ಥರನ್ನು ಮಾನವೀಯ ದೃಷ್ಟಿಯಿಂದ ಕಂಡು ಚಿಕಿತ್ಸೆ ನೀಡಬೇಕಾದುದು ತಮ್ಮ ವೃತ್ತಿಧರ್ಮ ಎಂಬುದನ್ನು ಅವರು ಮೊದಲು ಮನಗಾಣಬೇಕು. ಇಂತಿಷ್ಟು ವಯಸ್ಸಾದ ರೋಗಿಗಳಿಗೆ ಚಿಕಿತ್ಸೆ ನೀಡಕೂಡದು ಎಂಬ ನಿಯಮವೇನಾದರೂ ಇದೆಯೇ?

**ಎಲ್.ಚಿನ್ನಪ್ಪ,** ಬೆಂಗಳೂರು

#### ಹಳ್ಳಿಗರಿಂದ ಸವಾಲು: ಜಾಗೃತಿಯೇ ಅಸ್ತ್ರ

ಸರ್ಕಾರಗಳು ಕೊರೊನಾ ವೈರಸ್ ಅನ್ನು ನಗರ ಪ್ರದೇಶಗಳಲ್ಲಿಯೇ ನಿಯಂತ್ರಿಸಲು ಹೆಣಗಾಡುತ್ತಿರುವ ಈ ಸಂದರ್ಭದಲ್ಲಿ, ಗ್ರಾಮೀಣ ಪ್ರದೇಶದಲ್ಲಿ ವೈರಸ್ ಹರಡುವ ಅಪಾಯ ಹೆಚ್ಚಾಗಿದೆ. ಸೋಂಕಿತರು ಮತ್ತು ಸಾವಿನ ಸಂಖ್ಯೆಯು ಹೆಚ್ಚುತ್ತಿದೆ. ಹಳ್ಳಿಗರಲ್ಲಿ ವೈರಸ್ ಬಗ್ಗೆ ಜಾಗೃತಿಯ ಕೊರತೆ ಇರುವುದು ಮತ್ತು ರೋಗಲಕ್ಷಣಗಳ ಬಗ್ಗೆ ಅರಿವಿಲ್ಲದಿರುವುದು ಕೂಡ ರೋಗ ನಿಯಂತ್ರಣಕ್ಕೆ ದೊಡ್ಡ ಸವಾಲು ಆಗಬಹುದು.

ನಮ್ಮ ಆರೋಗ್ಯ ವ್ಯವಸ್ಥೆಯು ಗ್ರಾಮೀಣ ಭಾಗದಲ್ಲಿ ಹೆಚ್ಚು ದುರ್ಬಲವಾಗಿದೆ. ಹೀಗಾಗಿ, ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ಗ್ರಾಮಸ್ಥರಿಗೆ ಲಸಿಕೆ ಬಗ್ಗೆ ಹೆಚ್ಚು ಜ್ಞಾನ ಮತ್ತು ಲಸಿಕೆ ಪಡೆಯಬೇಕಾದ ಅನಿವಾರ್ಯವನ್ನು ಅರ್ಥೈಸಿ, ಸೋಂಕು ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅವರಲ್ಲಿ ನಿರಂತರ ಜಾಗೃತಿ ಮೂಡಿಸಬೇಕಾಗಿದೆ.

**ಪ್ರವೀಣ ನಾಗಪ್ಪ ಯಲವಿಗಿ,** ಹಾವೇರಿ

#### ಲಾಠಿಗೆ ನೀಡಲಿ ವಿರಾಮ

ಕಾನೂನು, ಕಟ್ಟಲೆ ಪಾಲಿಸದವರು, ಸಾರ್ವಜನಿಕವಾಗಿ ಅಶಿಸ್ತು, ದುರ್ವರ್ತನೆಯಿಂದ ನಡೆದುಕೊಳ್ಳುವವರ ಮೇಲೆ ಪೊಲೀಸರು ಲಾಠಿ ಪ್ರಯೋಗಿಸುವುದಿದೆ. ಪೊಲೀಸರ 'ಕಿಟ್'ನಲ್ಲಿ ಲಾಠಿಗೆ ಮಹತ್ವದ ಸ್ಥಾನವೇ ಇದೆ. ನಾವಿಂದು ಅಂತರಿಕ್ಷ ಯುಗದಲ್ಲಿದ್ದೇವೆ. ವಿಜ್ಞಾನ ನಮ್ಮ ಮನೋಭೂಮಿಕೆಯನ್ನು ಇನ್ನೂ ಸುಧಾರಿಸಬೇಕಾದ ಹಲವು ಆಯಾಮಗಳಿವೆ. ಆಗಸದ ಆಳ ಅವಲೋಕಿಸುವ ಭರದಲ್ಲಿ ಮನುಷ್ಯನ ಮನಸ್ಸಿನ ಆಳವನ್ನು ಕಡೆಗಣಿಸಿದ್ದೇವೆ. ಲಾಠಿಯೇಟಿನ ದುಷ್ಪರಿಣಾಮಗಳನ್ನು ಅವಲೋಕಿಸಲು ನಮ್ಮ ಪ್ರಭುತ್ವಕ್ಕೆ ವ್ಯವಧಾನ ಇದ್ದಂತಿಲ್ಲ.

ಲಾಠಿ 5-6 ಅಡಿಗಳ ಬೆತ್ತ. ಅದಕ್ಕೆ ಲೋಹದ ಕಟ್ಟನ್ನೂ ಹೊಂದಿಸುವುದಿದೆ. ಬಗೆ ಬಗೆ ಕಾರಣಗಳಿಗೆ ಲಾಠಿ ಏಟಿಗೆ ಗುರಿಯಾಗುವವರಿಗೆ ಮೂಳೆ ಮುರಿತ, ಮರಗಟ್ಟುವಿಕೆ, ರಕ್ತಸ್ರಾವ ಸಂಭಾವ್ಯ. ಬೆನ್ನುಹುರಿಗೆ ಗಾಸಿಯಾದರೆ ಜೀವನಪರ್ಯಂತ ನರಳಾಟವೆ ಎನ್ನುತ್ತದೆ ವೈದ್ಯವಿಜ್ಞಾನ. ವಿಶೇಷವಾಗಿ ದ್ವಿಚಕ್ರವಾಹನ ಸವಾರರು ಪಾರಾಗಲು ಪ್ರಯತ್ನಿಸಿಯೇ ಹೆಚ್ಚಿನ ಯಾತನೆಗೊಳಗಾದಾರು. ಮಾನಸಿಕ ಆಘಾತದಿಂದ ಹೊರಬರಲು ವಾರಗಳೇ ಬೇಕು. ಹಾಗಾಗಿ ನಮ್ಮ ಪೊಲೀಸ್ ವ್ಯವಸ್ಥೆ ಈ ಓಬಿರಾಯನ ಕಾಲದ ಲಾಠಿ ಎಂಬ ಅಸ್ತ್ರಕ್ಕೆ ಕೋವಿಡ್ ವ್ಯಾಧಿ ಹತೋಟಿ ನಿಮಿತ್ತ ಲಾಕ್‌ಡೌನ್ ಸಂದರ್ಭದಲ್ಲಾದರೂ ವಿರಾಮ ಹೇಳಬೇಕು. ಅದಕ್ಕೆ ಅಹಿಂಸಾತ್ಮಕವೂ ಪರಿಣಾಮಕಾರಿಯೂ ಆದ ಪರ್ಯಾಯ ಕಂಡುಕೊಳ್ಳಬೇಕಿದೆ.

ನಿಯಮ ಪಾಲಿಸದವರನ್ನು ಒಂದು ತಕ್ಕಷ್ಟು ವಿಶಾಲ ಸ್ಥಳದಲ್ಲಿ ಕೂರಿಸಿ ಧ್ಯಾನ, ಯೋಗ, ಆರೋಗ್ಯ, ನೈರ್ಮಲ್ಯ, ಪರಿಸರ, ಸಾಮಾಜಿಕ ಹೊಣೆಗಾರಿಕೆ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ತಿಳಿವು ಮೂಡಿಸುವುದು ಯುಕ್ತ. ಬೊಬ್ಬೆಯೆಬ್ಬಿಸುವ ಲಾಠಿಗಿಂತ ಜಾಗೃತಿಯ ಪಾಠ ಮೇಲು.

**ಬಿಂಡಿಗನವಿಲೆ ಭಗವಾನ್,** ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪೋಸ್ಟ್, ಖಾತೆ ಸ್ಥಗಿತ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವೇ?

# ಸಾಮಾಜಿಕ ಮಾಧ್ಯಮದ ಕಣ್ಣಾಮುಚ್ಚಾಲೆ




**ಈ ವರ್ಷದ** ಫೆಬ್ರುವರಿ ತಿಂಗಳ ಮೊದಲ ದಿನ, ಟ್ವಿಟರ್ ಸಂಸ್ಥೆಯು ಸುಮಾರು 250 ಖಾತೆಗಳನ್ನು ದಿಢೀರ್ ಸ್ಥಗಿತಗೊಳಿಸಿತು. ಈ ಖಾತೆಗಳೆಲ್ಲವೂ ರೈತ ಹೋರಾಟದಲ್ಲಿ ತೊಡಗಿದ್ದವರು ಮತ್ತು ಹೋರಾಟಕ್ಕೆ ಬೆಂಬಲ ನೀಡಿದ ಸಂಸ್ಥೆಗಳದ್ದಾಗಿದ್ದವು. ಸರ್ಕಾರದ ಸೂಚನೆಯ ಮೇರೆಗೆ ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ ಎಂಬ ಪುಕಾರು ಎದ್ದಿತು. ಒಂದೆರಡು ಗಂಟೆಗಳಲ್ಲಿ ಎಲ್ಲಾ ಖಾತೆಗಳು ಪುನಃ ತೆರೆದುಕೊಂಡವು.

ಈ ಘಟನೆ ಜಾಗತಿಕ ಮಟ್ಟದಲ್ಲಿ ಗಮನಸೆಳೆಯಿತು. 'ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವಾಗಿದೆ' ಎಂಬ ಆರೋಪಗಳೆದ್ದವು. ಆದರೆ, ಇದು ಅಂಥ ಮೊದಲ ಅಥವಾ ಕೊನೆಯ ಘಟನೆಯೇನಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರವಾಗುತ್ತಿರುವ ವಿಷಯಗಳ ಬಗ್ಗೆ ಸರ್ಕಾರ ಹಾಗೂ ಫೇಸ್‌ಬುಕ್, ಟ್ವಿಟರ್‌ನಂಥ ಸೇವಾ ಸಂಸ್ಥೆಗಳ ನಡುವೆ ತೀವ್ರ ಜಟಾಪಟಿ ನಡೆದ ಉದಾಹರಣೆಗಳಿವೆ. ಇಂಥ ಜಟಾಪಟಿ ಭಾರತಕ್ಕೆ ಮಾತ್ರ ಸೀಮಿತವಲ್ಲ ಎಂಬುದೂ ಅಷ್ಟೇ ಸತ್ಯ.

ಫೆಬ್ರುವರಿಯಲ್ಲಿ ಸ್ಥಗಿತಗೊಂಡವುಗಳಲ್ಲಿ ಹೋರಾಟಗಾರ್ತಿ ಹಂಸರಾಜ್ ಮೀನಾ, ರಾಜಕೀಯ ಟೀಕಾಕಾರ ಸಂಜುಕ್ತಾ ಬಸು, ಸಿಪಿಎಂ ನಾಯಕ ಮಹಮ್ಮದ್ ಸಲೀಂ, ಹೋರಾಟಕ್ಕೆ ಬೆಂಬಲ ನೀಡುವ ಕಿಸಾನ್ ಏಕತಾ ಮೋರ್ಚಾ, ಟ್ರ್ಯಾಕ್ಟರ್2ಟ್ವಿಟರ್ ಸಂಸ್ಥೆಗಳ ಖಾತೆಗಳೂ ಸೇರಿದ್ದವು. 'ಆಕ್ಷೇಪಾರ್ಹ ಟ್ವೀಟ್ ಅನ್ನು ಮಾತ್ರ ತೆಗೆಯುವ ಬದಲು ಖಾತೆಯನ್ನೇ ಸ್ಥಗಿತಗೊಳಿಸಿದ್ದು ಆತಂಕದ ವಿಚಾರ' ಎಂದು ಹೋರಾಟಗಾರರು ಹೇಳಿದ್ದರು.

ದ್ವೇಷ ಸಂದೇಶ ಪ್ರಸರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಮತ್ತು ಫೇಸ್‌ಬುಕ್ ಸಂಸ್ಥೆಯ ಮಧ್ಯೆ ಇತ್ತೀಚೆಗೆ ಜಟಾಪಟಿ ನಡೆದಿತ್ತು. ಈ ವಿಚಾರವಾಗಿ ಭಾರತದಲ್ಲಿ ಫೇಸ್‌ಬುಕ್ ಭಾರಿ ಟೀಕೆಗೂ ಒಳಗಾಗಿದೆ. ಮ್ಯಾನ್ಮಾರ್‌ನಲ್ಲಿ ದ್ವೇಷ ಸಂದೇಶಗಳ ವಿರುದ್ಧ ಸಂಸ್ಥೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಹಿಂದೆ ಆರೋಪಿಸಲಾಗಿತ್ತು. ಸಿಎಎ ವಿರೋಧಿ ಪ್ರತಿಭಟನೆಯ ಸಂದರ್ಭದಲ್ಲಿ ದೆಹಲಿಯಲ್ಲಿ ನಡೆದ ಗಲಭೆಯ ಸಂದರ್ಭದಲ್ಲೂ ಈ ಸಂಸ್ಥೆಯು ದ್ವೇಷ ಸಂದೇಶಗಳ ಬಗ್ಗೆ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಲಾಗಿದೆ.

ಈಚೆಗೆ ಅಂಥದ್ದೇ ಇನ್ನೊಂದು ಘಟನೆ ನಡೆದಿದೆ. ಕೋವಿಡ್–19 ಪಿಡುಗು ನಿರ್ವಹಣೆಯ ವಿಚಾರದಲ್ಲಿ ಸರ್ಕಾರವನ್ನು ಟೀಕಿಸಿದ್ದ 100ಕ್ಕೂ ಹೆಚ್ಚು ಖಾತೆಗಳನ್ನು ಸ್ಥಗಿತಗೊಳಿಸುವಂತೆ ಸರ್ಕಾರ ಟ್ವಿಟರ್, ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಸಂಸ್ಥೆಗೆ ಸೂಚನೆ ನೀಡಿದೆ. ಇದರ ವಿರುದ್ಧವೂ ವ್ಯಾಪಕ ಟೀಕೆಗಳು ಎದ್ದಿವೆ.

'ಕೊರೊನಾಗೆ ಸಂಬಂಧಿಸಿದಂತೆ ತಪ್ಪು ಮಾಹಿತಿಯನ್ನು ಪ್ರಸಾರ ಮಾಡುವ, ಶವಗಳ ಚಿತ್ರಗಳನ್ನು ಹಾಕಿ ಜನರಲ್ಲಿ ಆತಂಕ ಹೆಚ್ಚಿಸಲು ಪ್ರಯತ್ನಿಸುತ್ತಿರುವ ಖಾತೆಗಳನ್ನು ಮುಚ್ಚಲು ಸೂಚಿಸಲಾಗಿದೆ. ಈ ಖಾತೆಗಳು ಭಾರತದಲ್ಲಷ್ಟೇ ಸ್ಥಗಿತಗೊಂಡಿವೆ' ಎಂದು ಟ್ವಿಟರ್ ಸಂಸ್ಥೆ ಹೇಳಿದೆ.

'ಟೀಕೆಗಳನ್ನು ನಾವು ಗೌರವಿಸುತ್ತೇವೆ. ಪ್ರಧಾನಿಯನ್ನು ಬೇಕಿದ್ದರೂ ನೀವು ಟೀಕಿಸಬಹುದು. ಆದರೆ ದ್ವೇಷ ಹಬ್ಬಿಸಲು ಸಾಮಾಜಿಕ ಮಾಧ್ಯಮವನ್ನು ಬಳಸಿದರೆ ಅದರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ ಪ್ರಸಾದ್ ಈಚೆಗೆ ಸಂಸತ್ತಿನಲ್ಲಿ ಹೇಳಿದ್ದರು. 'ಅಮೆರಿಕದ ಕ್ಯಾಪಿಟಲ್ ಹಿಲ್ ಮೇಲೆ ದಾಳಿ ನಡೆಸಿದವರ ವಿರುದ್ಧ ಪೊಲೀಸರು ಕ್ರಮ ಕೈಗೊಂಡಾಗ ಸರ್ಕಾರದ ಬೆಂಬಲಕ್ಕೆ ನಿಂತಿದ್ದ ಟ್ವಿಟರ್ ಸಂಸ್ಥೆಯು ಭಾರತದ ಕೆಂಪುಕೋಟೆಯಲ್ಲಿ ರೈತ ಹೋರಾಟಗಾರರು ದಾಂದಲೆ ನಡೆಸಿದಾಗ ಸರ್ಕಾರದ ವಿರುದ್ಧ ನಿಂತಿದ್ದೇಕೆ' ಎಂದು ಅವರು ಪ್ರಶ್ನಿಸಿದ್ದರು.

## ಸರ್ಕಾರದ ಕೈಯಲ್ಲಿ ಮೂಗುದಾರ

17ಕ್ಕೂ ಹೆಚ್ಚು ಟ್ವೀಟ್‌ಗಳನ್ನು ಅಳಿಸಿ ಹಾಕುವಂತೆ ಕೇಂದ್ರ ಸರ್ಕಾರವು ಟ್ವಿಟರ್‌ಗೆ ಏಪ್ರಿಲ್ ಕೊನೆಯ ವಾರದಲ್ಲಿ ಸೂಚನೆ ನೀಡಿತ್ತು. ಈ ಪ್ರಕಾರ ಆ ಟ್ವೀಟ್‌ಗಳನ್ನು ಟ್ವಿಟರ್ ಅಳಿಸಿತ್ತು. 'ಸುಳ್ಳು ಸುದ್ದಿಗಳನ್ನು ಹಂಚಿಕೊಂಡ ಕಾರಣಕ್ಕೆ ಈ ಟ್ವೀಟ್‌ಗಳನ್ನು ಅಳಿಸಲು ಸೂಚನೆ ನೀಡಿದ್ದೆವು' ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯ ವಿವರಣೆ ನೀಡಿತ್ತು. ಟ್ವಿಟರ್ ಸಹ ಇದನ್ನು ದೃಢಪಡಿಸಿತ್ತು.

ದೇಶದಲ್ಲಿ ಕೋವಿಡ್-19 ಪ್ರಕರಣಗಳು ತೀವ್ರಗತಿಯಲ್ಲಿ ಏರಿಕೆಯಾಗುತ್ತಿದ್ದರೂ, ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಪ್ರಚಾರ ಮುಂದುವರಿಸಿದ್ದ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರವನ್ನು ಟೀಕಿಸಿ #resignpm ಹ್ಯಾಷ್‌ಟ್ಯಾಗ್‌ನಲ್ಲಿ ಮಾಡಲಾಗಿದ್ದ ಟ್ವೀಟ್‌ಗಳು ಸ್ಥಗಿತವಾಗಿದ್ದವು. ಈ ಹ್ಯಾಷ್‌ಟ್ಯಾಗ್‌ನಲ್ಲಿದ್ದ ಟ್ವೀಟ್‌ಗಳನ್ನು ಸ್ಥಗಿತಗೊಳಿಸಲು ಸಚಿವಾಲಯವು ಸೂಚನೆ ನೀಡಿತ್ತು ಎಂದು ಮಾಧ್ಯಮಗಳು ವರದಿ ಮಾಡಿದ್ದವು. ಈ ಟ್ವೀಟ್‌ಗಳನ್ನು ಮಾಡಿದ್ದವರು ಸಹ ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದರು.

ಟ್ವೀಟ್‌ಗಳು ಮತ್ತು ಫೇಸ್‌ಬುಕ್ ಪೋಸ್ಟ್‌ಗಳನ್ನು ಸ್ಥಗಿತಗೊಳಿಸುವಂತೆ ಸಾಮಾಜಿಕ ಜಾಲತಾಣಗಳಿಗೆ ಸೂಚನೆ ನೀಡುವ ಅಧಿಕಾರ ಭಾರತ ಸರ್ಕಾರಕ್ಕೆ ಇದೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯ 69 ಎ ಸೆಕ್ಷನ್, ಕೇಂದ್ರ ಸರ್ಕಾರಕ್ಕೆ ಈ ಅಧಿಕಾರವನ್ನು ಕೊಡುತ್ತದೆ. ಈ ಸೆಕ್ಷನ್ ಅಡಿ ಕೇಂದ್ರ ಸರ್ಕಾರ ನೀಡುವ ಸೂಚನೆಯನ್ನು ಸಾಮಾಜಿಕ ಜಾಲತಾಣಗಳು ಕಡ್ಡಾಯವಾಗಿ ಪಾಲಿಸಲೇಬೇಕು. ಕೇಂದ್ರ ಸರ್ಕಾರದ ಕೃಷಿ ಸುಧಾರಣಾ ಕಾಯ್ದೆಗಳ ವಿರುದ್ಧ ಹೋರಾಡುತ್ತಿದ್ದ ರೈತರ ಟ್ವೀಟ್‌ಗಳು ಮತ್ತು ಫೇಸ್‌ಬುಕ್ ಪೋಸ್ಟ್‌ಗಳನ್ನು ಸ್ಥಗಿತಗೊಳಿಸಲು ಕೇಂದ್ರ ಸರ್ಕಾರವು ಇದೇ ಸೆಕ್ಷನ್ ಅಡಿ ಸೂಚನೆ ನೀಡಿತ್ತು

## ದುರ್ಬಳಕೆ ಸಾಧ್ಯವಿರುವ 'ರಿಪೋರ್ಟ್' ಅವಕಾಶ

ಏಪ್ರಿಲ್ ಕೊನೆಯ ವಾರದಲ್ಲಿ #resignpm ಹ್ಯಾಷ್‌ಟ್ಯಾಗ್‌ನಲ್ಲಿ ಪೋಸ್ಟ್ ಮಾಡಿದ್ದ ಹಲವರ ಫೇಸ್‌ಬುಕ್ ಪೋಸ್ಟ್‌ಗಳು ಸ್ಥಗಿತವಾಗಿದ್ದವು. ದೇಶದಾದ್ಯಂತ ಇದರ ವಿರುದ್ಧ ಭಾರಿ ಆಕ್ರೋಶ ವ್ಯಕ್ತವಾಗಿತ್ತು. ಇದರ ಬೆನ್ನಲ್ಲೇ ಸರ್ಕಾರವು, 'ಈ ಪೋಸ್ಟ್‌ಗಳನ್ನು ಸ್ಥಗಿತಗೊಳಿಸಲು ಸರ್ಕಾರ ಆದೇಶ ನೀಡಿಲ್ಲ' ಎಂದು ಸ್ಪಷ್ಟನೆ ನೀಡಿತ್ತು. 'ಈ ಸಂಬಂಧ ಭಾರತ ಸರ್ಕಾರದಿಂದ ಯಾವುದೇ ಸೂಚನೆ ಅಥವಾ ಆದೇಶ ಬಂದಿಲ್ಲ. ನಮ್ಮದೇ ಸ್ವಯಂಚಾಲಿತ ವ್ಯವಸ್ಥೆ ಈ ಪೋಸ್ಟ್‌ಗಳನ್ನು ಸ್ಥಗಿತಗೊಳಿಸಿದೆ. ತಾಂತ್ರಿಕ ಕಾರಣದಿಂದ ಮತ್ತು ತಪ್ಪಿನಿಂದ ಹೀಗಾಗಿದೆ. ಇದನ್ನು ಸರಿಪಡಿಸಿದ್ದೇವೆ' ಎಂದು ಫೇಸ್‌ಬುಕ್ ಸಹ ಸ್ಪಷ್ಟನೆ ನೀಡಿತ್ತು. ಈ ಪೋಸ್ಟ್‌ಗಳ ಸ್ಥಗಿತವನ್ನು ರದ್ದು ಮಾಡಿತ್ತು.

ಒಬ್ಬರು ಮಾಡಿದ ಟ್ವೀಟ್ ಮತ್ತು ಫೇಸ್‌ಬುಕ್ ಪೋಸ್ಟ್ ಬಗ್ಗೆ ಬೇರೊಬ್ಬ ಬಳಕೆದಾರರು 'ಅದು ಆಕ್ಷೇಪಾರ್ಹ' ಎಂದು ಪ್ರತಿಕ್ರಿಯೆ ನೀಡುವ (ರಿಪೋರ್ಟ್) ವ್ಯವಸ್ಥೆ ಇದೆ. ಈ ಟ್ವೀಟ್ ಅಥವಾ ಪೋಸ್ಟ್ ಸರಿ ಇಲ್ಲ, ಇದರಲ್ಲಿರುವ ಮಾಹಿತಿ ಸರಿ ಇಲ್ಲ ಅಥವಾ ಸುಳ್ಳು ಸುದ್ದಿ ಅಥವಾ ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆ ತರುತ್ತದೆ ಅಥವಾ ದ್ವೇಷವನ್ನು ಹರಡುತ್ತದೆ ಎಂದು ರಿಪೋರ್ಟ್ ಕೊಡಬಹುದು.

ಇಂತಹ ರಿಪೋರ್ಟ್‌ಗಳನ್ನು ಟ್ವಿಟರ್ ಮತ್ತು ಫೇಸ್‌ಬುಕ್‌ನ ತಂಡಗಳು ಪರಿಶೀಲಿಸುತ್ತವೆ. ಬಹುತೇಕ ಸಂದರ್ಭದಲ್ಲಿ ಸ್ವಯಂಚಾಲಿತ ತಂತ್ರಾಂಶವು ಈ ಪರಿಶೀಲನಾ ಕಾರ್ಯ ನಡೆಸುತ್ತದೆ. ಹೀಗೆ ಒಂದೇ ಟ್ವೀಟ್ ಅಥವಾ ಪೋಸ್ಟ್‌ಗೆ ಸಂಬಂಧಿಸಿ ಹಲವು ರಿಪೋರ್ಟ್‌ಗಳು ಸಲ್ಲಿಕೆಯಾದರೆ, ಆ ಟ್ವೀಟ್ ಅಥವಾ ಪೋಸ್ಟ್ ಸ್ವಯಂಚಾಲಿತವಾಗಿ ಸ್ಥಗಿತವಾಗುತ್ತದೆ. ಪೋಸ್ಟ್ ಅಥವಾ ಖಾತೆಗಳನ್ನು ಸ್ಥಗಿತಗೊಳಿಸಲು ಸಾವಿರಾರು ಬಾರಿ ರಿಪೋರ್ಟ್ ಸಲ್ಲಿಸಬೇಕಿಲ್ಲ. ಏಕಕಾಲದಲ್ಲಿ ಐದಾರು ಜನ ರಿಪೋರ್ಟ್ ಸಲ್ಲಿಸಿದರೂ ಸಾಮಾಜಿಕ ಜಾಲತಾಣಗಳು ಈ ಕ್ರಮ ತೆಗೆದುಕೊಳ್ಳುತ್ತವೆ.


ಗಣ್ಯರು ಮತ್ತು ಪರಿಶೀಲಿಸಿದ ಖಾತೆ (ವೆರಿಫೈಡ್ ಅಕೌಂಟ್) ಹೊಂದಿರುವವರು ಒಮ್ಮೆ ಮಾತ್ರ ಹೀಗೆ ರಿಪೋರ್ಟ್ ನೀಡಿದರೂ, ಸಂಬಂಧಿತ ಪೋಸ್ಟ್/ಟ್ವೀಟ್ ಅಥವಾ ಖಾತೆಗಳು ಸ್ಥಗಿತವಾಗುತ್ತವೆ. ಹೀಗೆ ರಿಪೋರ್ಟ್ ಮಾಡುವವರು ಯಾರು ಎಂಬುದನ್ನು ಟ್ವಿಟರ್ ಆಗಲಿ, ಫೇಸ್‌ಬುಕ್ ಆಗಲೀ ಬಹಿರಂಗಪಡಿಸುವುದಿಲ್ಲ. ಹೀಗಾಗಿ ರಿಪೋರ್ಟ್ ಸಲ್ಲಿಸಿದವರು ಯಾರು ಎಂಬುದು ಗೊತ್ತಾಗುವುದಿಲ್ಲ. 'ಆಕ್ಷೇಪಾರ್ಹ' ಎನ್ನಲಾದ ಟ್ವೀಟ್/ಪೋಸ್ಟ್/ಖಾತೆಗಳು ಸ್ಥಗಿತವಾಗುತ್ತವೆ. ಬಿಜೆಪಿ, ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರವನ್ನು ಟೀಕಿಸಿದ ಟ್ವೀಟ್ ಅಥವಾ ಪೋಸ್ಟ್ ಅಥವಾ ಖಾತೆಗಳೇ ಭಾರತದಲ್ಲಿ ಇಂತಹ ರಿಪೋರ್ಟ್ ಕಾರಣಕ್ಕೆ ಹೆಚ್ಚು ಸ್ಥಗಿತವಾಗಿವೆ ಎಂದು ಹೇಳಲಾಗುತ್ತಿದೆ.

| How is this Tweet abusive or harmful? |
| --- |
| It's disrespectful or offensive |
| Includes private information |
| Includes targeted harassment |
| It directs hate against a protected category (e.g., race, religion, gender, orientation, disability) |
| Threatening violence or physical harm |

ಟ್ವೀಟ್ ಅನ್ನು ರಿಪೋರ್ಟ್ ಮಾಡುವ ವೇಳೆ ಈ ಮೇಲಿನ ಕಾರಣಗಳನ್ನು ಆಯ್ಕೆ ಮಾಡಿದರೆ, ಆ ಟ್ವೀಟ್ ತ್ವರಿತವಾಗಿ ಸ್ಥಗಿತವಾಗುತ್ತದೆ. ಫೇಸ್‌ಬುಕ್‌ನಲ್ಲಿ ಕೂಡ ಪೋಸ್ಟ್‌ಗಳನ್ನು ರಿಪೋರ್ಟ್ ಮಾಡುವಾಗ ಇಂತಹದ್ದೇ ಆಯ್ಕೆಗಳು ದೊರೆಯುತ್ತವೆ

ಮಲಯಾಳ ಕವಿ ಸಚ್ಚಿದಾನಂದನ್ ಅವರು ಕೇಂದ್ರ ಸರ್ಕಾರ ಮತ್ತು ಬಿಜೆಪಿಯನ್ನು ವಿರೋಧಿಸಿ ಪೋಸ್ಟ್ ಮಾಡಿದ್ದ ವಿಡಿಯೊವನ್ನು ಫೇಸ್‌ಬುಕ್ ಭಾನುವಾರ ಸ್ಥಗಿತಗೊಳಿಸಿತ್ತು. ಈ ಬಗ್ಗೆ ಸಚ್ಚಿದಾನಂದನ್ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಆದರೆ ಸರ್ಕಾರವು, 'ಸಚ್ಚಿದಾನಂದನ್ ಅವರ ಪೋಸ್ಟ್ ಅನ್ನು ಸ್ಥಗಿತಗೊಳಿಸುವಂತೆ ನಾವು ಸೂಚನೆ ನೀಡಿಲ್ಲ' ಎಂದು ಸ್ಪಷ್ಟನೆ ನೀಡಿತ್ತು.

'ಸಚ್ಚಿದಾನಂದನ್ ಅವರ ಪೋಸ್ಟ್ ಅಪಾಯಕಾರಿ ಎಂದು ಯಾರೋ ರಿಪೋರ್ಟ್ ಸಲ್ಲಿಸಿದ್ದಾರೆ. ಹೀಗಾಗಿ ಅವರ ಪೋಸ್ಟ್ ಸ್ಥಗಿತವಾಗಿದೆ' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ. ಬಿಜೆಪಿ ಐಟಿ ವಿಭಾಗವೇ ಈ ಕೆಲಸ ಮಾಡುತ್ತಿದೆ ಎಂದು ಹಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.




## ಸ್ವಯಂ ಪ್ರೇರಿತ ಸ್ಥಗಿತ

ಸರ್ಕಾರದ ಆದೇಶ ಇಲ್ಲದೇ ಇದ್ದರೂ ಟ್ವೀಟ್‌ಗಳು, ಪೋಸ್ಟ್‌ಗಳು ಮತ್ತು ಖಾತೆಗಳನ್ನು ಸ್ಥಗಿತಗೊಳಿಸಲು ಟ್ವಿಟರ್ ಮತ್ತು ಫೇಸ್‌ಬುಕ್‌ಗಳು ತಮ್ಮದೇ ವ್ಯವಸ್ಥೆಯನ್ನು ಹೊಂದಿವೆ. ದ್ವೇಷವನ್ನು ಹರಡುವ, ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆ ತರುವಂತಹ ಪೋಸ್ಟ್‌ಗಳನ್ನು ಸ್ವಯಂಪ್ರೇರಿತವಾಗಿ ಸ್ಥಗಿತಗೊಳಿಸಲಾಗುವುದು ಎಂದು ಟ್ವಿಟರ್ ಮತ್ತು ಫೇಸ್‌ಬುಕ್ ಘೋಷಿಸಿಕೊಂಡಿವೆ.

ಪಶ್ಚಿಮ ಬಂಗಾಳದಲ್ಲಿ ಹಿಂಸಾಚಾರ ನಡೆಸಿದವರ ಮೇಲೆ ಗೋದ್ರಾ ದಾಳಿಯಂತಹ ದಾಳಿ ನಡೆಸಬೇಕು ಎಂದು ಟ್ವೀಟ್ ಮಾಡಿದ್ದ ಬಾಲಿವುಡ್ ನಟಿ ಕಂಗನಾ ರನೌತ್ ಅವರ ಖಾತೆಯನ್ನು ಟ್ವಿಟರ್ ಶಾಶ್ವತವಾಗಿ ಸ್ಥಗಿತಗೊಳಿಸಿದೆ. 'ಕೋವಿಡ್ ಒಂದು ಸಣ್ಣ ಜ್ವರವಷ್ಟೆ' ಎಂದು ಕಂಗನಾ ಅವರು ಸೋಮವಾರ ಇನ್‌ಸ್ಟಾಗ್ರಾಂನಲ್ಲಿ ವಿಡಿಯೊ ಪೋಸ್ಟ್ ಮಾಡಿದ್ದರು. ಈ ವಿಡಿಯೊವನ್ನು ಇನ್‌ಸ್ಟಾಗ್ರಾಂ ಸ್ಥಗಿತಗೊಳಿಸಿದೆ.

ಆಧಾರ: ಪಿಟಿಐ, ಫೇಸ್‌ಬುಕ್ ಸಮುದಾಯ ಮಾನದಂಡಗಳು, ಟ್ವಿಟರ್ ಸೇಫ್ಟಿ

---

ಪ್ರತಿಭಟನೆ ಸ್ಥಳದಲ್ಲಿ ಅತ್ಯಾಚಾರ ಆರೋಪ

# ಯುವತಿ ಸಾವು ಪ್ರಕರಣಕ್ಕೆ ತಿರುವು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೇಂದ್ರ ಸರ್ಕಾರದ ನೂತನ ಕೃಷಿ ಕಾಯ್ದೆಗಳ ವಿರುದ್ಧ ರೈತರು ಪ್ರತಿಭಟನೆ ನಡೆಸುತ್ತಿರುವ ಸ್ಥಳದಲ್ಲಿ ಯುವತಿಯೊಬ್ಬರ ಸಾವಿನ ಪ್ರಕರಣ ಹೊಸ ತಿರುವು ಪಡೆದುಕೊಂಡಿದೆ. ದೆಹಲಿ-ಹರಿಯಾಣದ ಟಿಕ್ರಿ ಗಡಿಯಲ್ಲಿ ನಡೆಯುತ್ತಿದ್ದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಯುವತಿ ಏಪ್ರಿಲ್ 30ರಂದು ಮೃತಪಟ್ಟಿದ್ದರು.

ಯುವತಿ ಮೇಲೆ ಅತ್ಯಾಚಾರ ನಡೆದಿದ್ದು ತಿಳಿದ ತಕ್ಷಣವೇ ಸಂಬಂಧಿತರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿತ್ತು ಎಂದು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಹೇಳಿದೆ ಎಂಬುದು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆಯಾಗುತ್ತಿದೆ.

ಏಪ್ರಿಲ್ 15ರಂದು ಪಶ್ಚಿಮ ಬಂಗಾಳದಿಂದ ಹೊರಟಿದ್ದ ರೈತರ 'ಕಿಸಾನ್ ಸೋಷಿಯಲ್ ಆರ್ಮಿ'ಯ ತಂಡದಲ್ಲಿ ಒಬ್ಬ ಯುವತಿ ಸಹ ಇದ್ದರು. ದಾರಿ ಮಧ್ಯದಲ್ಲೇ ಆಕೆಯ ಮೇಲೆ ಅತ್ಯಾಚಾರ ನಡೆದಿತ್ತು. ಆದರೂ ಆ ಮಹಿಳೆ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಅವರಿಗೆ ಜ್ವರ ಕಾಣಿಸಿಕೊಂಡಿತ್ತು. ನಂತರ ಕೋವಿಡ್ ತಗುಲಿದ ಕಾರಣ ಆಕೆ ಏಪ್ರಿಲ್ 30ರಂದು ಮೃತಪಟ್ಟಿದ್ದರು ಎಂದು ಕಿಸಾನ್ ಸಂಯುಕ್ತ ಮೋರ್ಚಾ ಹೇಳಿದೆ. ಈ ಸಂಬಂಧ ಭಾನುವಾರ ಬೆಳಿಗ್ಗೆ ಹರಿಯಾಣ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

'ಅತ್ಯಾಚಾರ ನಡೆದಿರುವ ವಿಷಯ ಗೊತ್ತಾದ ನಂತರ ಆ ಸಂಘಟನೆ ವಿರುದ್ಧ ಕ್ರಮ ತೆಗದುಕೊಂಡಿದ್ದೆವು. ಟಿಕ್ರಿ ಮತ್ತು ಸಿಂಘು ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಆ ಸಂಘಟನೆಯ ಸದಸ್ಯರನ್ನು ತೆರವು ಮಾಡಲಾಗಿತ್ತು. ಅವರ ಬ್ಯಾನರ್‌ಗಳನ್ನು ತೆಗೆಯಲಾಗಿತ್ತು. ರೈತ ಪ್ರತಿಭಟನೆಯಲ್ಲಿ ಎಲ್ಲಿಯೂ ಅವರು ಭಾಗವಹಿಸದಂತೆ ಎಚ್ಚರವಹಿಸಿದ್ದೇವೆ. ಸಾಮಾಜಿಕ ಜಾಲತಾಣಗಳಲ್ಲೂ ಅವರು ರೈತರ ಪರ ಹೋರಾಟ ನಡೆಸದಂತೆ ನೋಡಿಕೊಂಡಿದ್ದೇವೆ' ಎಂದು ಎಸ್‌ಕೆಎಂ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

**ಹೋರಾಟಗಾರರ ವಿರುದ್ಧ ಆಕ್ರೋಶ:** 'ಅತ್ಯಾಚಾರ ನಡೆದಿದ್ದು ರೈತ ಹೋರಾಟದ ಎಲ್ಲಾ ನಾಯಕರಿಗೂ ಗೊತ್ತಿತ್ತು. ಆರೋಪಿಗಳ ಬಗ್ಗೆ ಅವರಿಗೆ ಮಾಹಿತಿ ಇತ್ತು. ಆದರೆ ಅದನ್ನು ಮುಚ್ಚಿಟ್ಟಿದ್ದಾರೆ' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ಕಾರ್ಯಕರ್ತ ಯೋಗೇಂದ್ರ ಯಾದವ್ ಅವರಿಗೆ ಮಾಹಿತಿ ಇತ್ತು. ಆದರೂ ಅವರು ಅದನ್ನು ಮುಚ್ಚಿಟ್ಟಿದ್ದಾರೆ ಎಂದು ಉತ್ತರ ಪ್ರದೇಶದ ಜನಸತ್ತಾ ಆನ್‌ಲೈನ್ ವರದಿ ಮಾಡಿದೆ. ಇದನ್ನು ಟ್ವಿಟರ್‌ನಲ್ಲಿ ಸಾವಿರಾರು ಮಂದಿ ಹಂಚಿಕೊಂಡಿದ್ದಾರೆ. ಈ ಎಲ್ಲಾ ನಾಯಕರನ್ನು ಈ ಪ್ರಕರಣದಲ್ಲಿ ಆರೋಪಿಗಳನ್ನಾಗಿಸಿ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಆಗ್ರಹಿಸಲಾಗಿದೆ.

## 'ನಾನೂ ರೈತ' ಅಭಿಯಾನ

'ಅತ್ಯಾಚಾರಕ್ಕೆ ಸಂಬಂಧಿಸಿ ದೂರು ದಾಖಲಾಗಿಲ್ಲ. ಯುವತಿ ಮೃತಪಟ್ಟ ನಂತರವೇ ಅತ್ಯಾಚಾರದ ಬಗ್ಗೆ ಮಾಹಿತಿ ಬಹಿರಂಗವಾಗಿದೆ. ಪೊಲೀಸರು ಈಗ ಎಫ್‌ಐಆರ್ ದಾಖಲಿಸಿದ್ದಾರೆ. ರೈತ ಹೋರಾಟವನ್ನು ಹತ್ತಿಕ್ಕುವ ಉದ್ದೇಶದಿಂದಲೇ ಇದನ್ನು ಸೃಷ್ಟಿಸಲಾಗಿದೆ' ಎಂದು ಪ್ರತಿಭಟನೆನಿರತ ರೈತರು ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ದಬ್ಬಾಳಿಕೆಯನ್ನು ಮೀರಿ ಹೋರಾಡಬೇಕು ಎಂದು ರೈತ ನಾಯಕ ರಾಕೇಶ್ ಟಿಕಾಯತ್ ಅವರು ಟ್ವಿಟರ್‌ನಲ್ಲಿ ಸೋಮವಾರ ಕರೆ ನೀಡಿದ್ದಾರೆ. ಮೈ_ಭೀ_ಕಿಸಾನ (ನಾನೂ ರೈತ) ಹ್ಯಾಷ್‌ಟ್ಯಾಗ್‌ನಲ್ಲಿ ಅವರು ಟ್ವೀಟ್ ಮಾಡಿದ್ದಾರೆ. ಅವರು ಟ್ವೀಟ್ ಮಾಡಿದ ಕೆಲವೇ ಗಂಟೆಗಳಲ್ಲಿ ಈ ಹ್ಯಾಷ್‌ಟ್ಯಾಗ್ ಟ್ವಿಟರ್‌ನಲ್ಲಿ ಟ್ರೆಂಡ್ ಆಗಿದೆ. ರಾತ್ರಿ 9ರ ವೇಳೆಗೆ 1.7 ಲಕ್ಷಕ್ಕೂ ಹೆಚ್ಚು ಬಾರಿ ಈ ಹ್ಯಾಷ್‌ಟ್ಯಾಗ್‌ನಲ್ಲಿ ಟ್ವೀಟ್ ಮಾಡಲಾಗಿದೆ.

ದೇಶದ ಎಲ್ಲೆಡೆಯಿಂದ ರೈತರು ಹೊಲದಲ್ಲಿ ದುಡಿಯುತ್ತಿರುವುದರ ಸೆಲ್ಫಿ ಚಿತ್ರಗಳನ್ನು ಮೈ_ಭೀ_ಕಿಸಾನ ಹ್ಯಾಷ್‌ಟ್ಯಾಗ್‌ನಲ್ಲಿ ಟ್ವೀಟ್ ಮಾಡುತ್ತಿದ್ದಾರೆ.

## ತಿದ್ದುಪಡಿ

ಕೋವಿಡ್–19ರ ಎರಡನೇ ಅಲೆಯನ್ನು ಮುಂಬೈ ನಗರವು ನಿರ್ವಹಿಸಿದ ರೀತಿಯನ್ನು ಸುಪ್ರೀಂ ಕೋರ್ಟ್ ಮತ್ತು ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠವು ಶ್ಲಾಘಿಸಿದೆ. ಸೋಮವಾರದ ಸಂಚಿಕೆಯಲ್ಲಿ ಈ ಮಾಹಿತಿ ತಪ್ಪಾಗಿತ್ತು.

---

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256


'ಬೆಂಗಳೂರಿನಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಅಂತಿಮ ಸಂಸ್ಕಾರಕ್ಕೆ 35 ಸಾವಿರ ರೂಪಾಯಿಗೆ ಡೀಲ್ ಕುದುರಿಸಿಕೊಳ್ಳಲಾಗುತ್ತದೆ. ಡೀಲ್ ಕುದುರಿಸಿಕೊಂಡ ಏಜೆನ್ಸಿ 5-8 ಜನ ಮುಸ್ಲಿಮರಿಗೆ 7-8 ಸಾವಿರ ರೂಪಾಯಿ ನೀಡಿ ಮೃತ ದೇಹವನ್ನು ದಹನಕ್ಕೆ ನೀಡುತ್ತದೆ. ದಹನದ ವೇಳೆ ಟೋಪಿ ಹಾಕಿಕೊಂಡು ಮುಸ್ಲಿಮರು ದೊಡ್ಡ ಸಮಾಜ ಸೇವೆ ಮಾಡಿದಂತೆ ಪೋಸ್ ಕೊಡುತ್ತಾರೆ' ಎಂಬ ಪೋಸ್ಟರ್ ಅನ್ನು ಪೋಸ್ಟ್‌ಕಾರ್ಡ್ ಕನ್ನಡ ತನ್ನ ಫೇಸ್‌ಬುಕ್ ಪುಟದಲ್ಲಿ ಹಂಚಿಕೊಂಡಿದೆ. ಮುಸ್ಲಿಮರು, ಹಿಂದೂಗಳ ಅಂತ್ಯಸಂಸ್ಕಾರ ನಡೆಸುತ್ತಿರುವ ಎರಡು ಚಿತ್ರಗಳ ಕೊಲಾಜ್ ಅನ್ನು ಹಂಚಿಕೊಳ್ಳಲಾಗಿದೆ.




ಇದು ಸುಳ್ಳುಸುದ್ದಿ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಈ ಪೋಸ್ಟರ್‌ನಲ್ಲಿ ಬಳಸಿಕೊಂಡಿರುವ ಒಂದು ಚಿತ್ರವು ದೆಹಲಿಯದ್ದು. ಆ ಫೋಟೊವನ್ನು ಪಿಟಿಐ ಛಾಯಾಗ್ರಾಹಕ ಮನ್ವಿಂದರ್ ವಸಿಷ್ಠ ಲವ ಟ್ವೀಟ್ ಮಾಡಿದ್ದರು. ಎರಡನೇ ಚಿತ್ರವು ಬೆಂಗಳೂರಿನದ್ದು. ಅದರಲ್ಲಿ ಪಿಎಫ್‌ಐ ಸದಸ್ಯರು ಹಿಂದೂವೊಬ್ಬರ ಅಂತ್ಯಸಂಸ್ಕಾರಕ್ಕೆ ನೆರವು ನೀಡುವ ದೃಶ್ಯವಿದೆ. ಆ ಚಿತ್ರವನ್ನು ಬೆಂಗಳೂರಿನ ಲೋಕೇಶ್ ಎಂಬುವವರು ಪೋಸ್ಟ್ ಮಾಡಿದ್ದರು. ಅವರು ಈಗ ಸ್ಪಷ್ಟನೆ ನೀಡಿದ್ದಾರೆ. 'ಪಿಎಫ್‌ಐ ಸಂಘಟನೆಯವರು ಉಚಿತವಾಗಿ ಈ ಸೇವೆ ನೀಡಿದ್ದಾರೆ. ಪೋಸ್ಟ್‌ಕಾರ್ಡ್ ವೈರಲ್ ಮಾಡಿರುವ ಸುದ್ದಿ ಸುಳ್ಳು' ಎಂದು ಅವರು ಹೇಳಿದ್ದಾರೆ.

---

## ಗುಂಡಣ್ಣ




---

## ಬೆರಗಿನ ಬೆಳಕು

ಗುರುರಾಜ ಕರಜಗಿ



### ಪಾರಾದ ರಾಜ ಪರಿವಾರ

ವಿದೇಹಿ ರಾಜನನ್ನು ಸುರಂಗದ ಮೂಲಕ ಪಾರು ಮಾಡಿದ ಬೋಧಿಸತ್ವನಾದ ಮಹೋಷಧಕುಮಾರ, ನೌಕೆಯಲ್ಲಿ ರಾಜನನ್ನು ಕೂರಿಸಿ ಅವನೊಂದಿಗೆ ತೂಳನಿ ರಾಜ ಬ್ರಹ್ಮದತ್ತನ ತಾಯಿ ತಲತಲಾದೇವಿ, ಪಟ್ಟದರಾಣಿ ನಂದಾದೇವಿ, ಮಗಳು ಪಂಚಾಲಚಂಡಿ ಮತ್ತು ರಾಜಕುಮಾರ ಪಂಚಾಲಚಂಡರನ್ನು ಕೂರಿಸಿದ. ರಾಜನಿಗೆ ಹೇಳಿದ, 'ನೀವು ಇಲ್ಲಿಂದ ಹೊರಟು, ಬೇಗ ಮಿಥಿಲೆಯನ್ನು ಸೇರಿಬಿಡಿ. ಆದರೆ ರಾಜಮಾತೆ ತಲತಲಾದೇವಿಯನ್ನು, ಪಟ್ಟದರಾಣಿ ನಂದಾದೇವಿಯವರನ್ನು ನಿಮ್ಮ ತಾಯಿಯಂತೆಯೇ ನೋಡಿಕೊಳ್ಳಿ. ರಾಜಕುಮಾರನನ್ನು ನಿಮ್ಮ ಮಗನಂತೆಯೇ ಕಾಣಿ. ಈ ಸುರಸುಂದರಿ ಪಂಚಾಲಚಂಡಿ, ನಿಮ್ಮ ರಾಣಿ. ಆಕೆಯನ್ನು ಮದುವೆಯಾಗಿ ಸಂತೋಷಪಡಿ'. ವಿದೇಹನಿಗೆ ಗಾಬರಿಯಾಯಿತು. 'ಯಾಕೆ ನೀನು ಹೀಗೆ ಹೇಳುತ್ತಿದ್ದೀಯೆ? ನೀನು ನಮ್ಮೊಂದಿಗೆ ಬರುವುದಿಲ್ಲವೆ? ನೀನಿಲ್ಲದೆ ನಾನು ಇರಲಾರೆ. ಬೇಗನೇ ನೌಕೆಯನ್ನೇರು' ಎಂದ ರಾಜ. ಮಹೋಷಧಕುಮಾರ, 'ಪ್ರಭೂ, ನಾನು ನಿಮ್ಮೊಂದಿಗೆ ಬರುವುದು ಸರಿಯಲ್ಲ. ನನ್ನ ಸೈನಿಕರೆಲ್ಲ ಇಲ್ಲಿದ್ದಾರೆ. ಅವರ ಪ್ರಾಣವನ್ನು ಕಾಪಾಡುವುದು ನನ್ನ ಜವಾಬ್ದಾರಿ. ನನ್ನೊಂದಿಗೆ ಅನೇಕ ಕುಶಲಕರ್ಮಿಗಳು, ಶಿಲ್ಪಿಗಳು, ವೈದ್ಯರು ಬಂದು, ಹಗಲು ರಾತ್ರಿ ದುಡಿದಿದ್ದಾರೆ. ನಾನು ಅವರಿಗೆ ಅಭಾರಿಯಾಗಿದ್ದೇನೆ. ಅವರಿಗೆ ಯಾವ ತೊಂದರೆಯೂ ಆಗದಂತೆ ಕರೆದುಕೊಂಡು ಬರಬೇಕಾಗಿದೆ. ನೀವು ಹೊರಡಿ. ದಾರಿಯಲ್ಲಿ ನಿಮ್ಮ ಸೌಕರ್ಯಕ್ಕಾಗಿ ಎಲ್ಲ ವ್ಯವಸ್ಥೆಗಳನ್ನು ಮಾಡಿದ್ದೇನೆ' ಎಂದ. ವಿದೇಹ ರಾಜ, 'ಅಲ್ಲಪ್ಪ, ಬ್ರಹ್ಮದತ್ತನ ದೊಡ್ಡ ಸೈನ್ಯದ ಮುಂದೆ ನೀವು ಕೆಲವೇ ಜನ ಹೇಗೆ ಹೋರಾಡಿ ಪಾರಾಗುತ್ತೀರಿ?' ಎಂದು ಕೇಳಿದ. ಮಹೋಷಧಕುಮಾರ ಮುಗುಳ್ನಕ್ಕು 'ಸ್ವಾಮಿ, ಬುದ್ಧಿವಂತನ ಕಡೆಗೆ ಅಲ್ಪಸೇನೆ ಇದ್ದರೂ ಮೂರ್ಖರ ಮಹಾಸೇನೆಯನ್ನು ಗೆದ್ದು ಬಿಡುತ್ತಾನೆ. ನಾನು ನಿಮ್ಮನ್ನು ಮಿಥಿಲೆಯಲ್ಲಿ ಕಾಣುತ್ತೇನೆ' ಎಂದು ಕೈ ಬೀಸಿ ಹೊರಟ.

ವಿದೇಹ ರಾಜನಿಗೆ ಅತ್ಯಂತ ಸಂತೋಷವಾಗಿತ್ತು. ಬ್ರಹ್ಮದತ್ತನ ರಾಜ್ಯದಿಂದ ಪಾರಾದದ್ದು ಮತ್ತು ಪಂಚಾಲಚಂಡಿಯಂಥ ಅಪ್ಸರೆ ಅವನೊಂದಿಗಿದ್ದದ್ದು ಅವನ ಮನೋರಥವನ್ನು ಪೂರೈಸಿತ್ತು. ವಿದೇಹರಾಜ ನದಿಯಲ್ಲಿ ಯೋಜನ ದೂರ ದಾಟಿದ ಮೇಲೆ ಮಹೋಷಧಕುಮಾರ ಮರಳಿ ತನ್ನ ಮನೆಗೆ ಬಂದು ಶ್ರೇಷ್ಠ ಭೋಜನ ಮಾಡಿ ಮಲಗಿದ. ಅತ್ತ ಕಡೆಗೆ ಬ್ರಹ್ಮದತ್ತನಿಗೆ ಇದಾವುದೂ ತಿಳಿದೇ ಇರಲಿಲ್ಲ. ಆತ ಹೇಗಿದ್ದರೂ, ವಿದೇಹ ರಾಜ ಹಾಗೂ ಮಹೋಷಧಕುಮಾರ ತನ್ನ ನಗರದಲ್ಲೇ ಹೊಸದಾಗಿ ಕಟ್ಟಿಸಿಕೊಂಡ ಅರಮನೆಯಲ್ಲಿರುವುದರಿಂದ ಅವರನ್ನು ಇಂದೇ ಕೊಂದುಬಿಡಬೇಕೆಂದು ತೀರ್ಮಾನಿಸಿದ. ತಾನು ಬಲಶಾಲಿಗಳಾಗಿದ್ದ ಸಾವಿರ ಸೈನಿಕರು, ಕುದುರೆ ಸವಾರರು, ಆನೆದಳವನ್ನು ತೆಗೆದುಕೊಂಡು ಮಹೋಷಧಕುಮಾರನಿದ್ದ ಅರಮನೆಗೆ ಹೋದ. ಅದನ್ನು ತಿಳಿದ ಕುಮಾರ ಲಕ್ಷ ಕಹಾಪಣದ ಕಾಶಿವಸ್ತ್ರವನ್ನು ಉಟ್ಟುಕೊಂಡು, ಬಂಗಾರದ ಪಾದುಕೆಗಳನ್ನು ಧರಿಸಿ, ಅಪ್ಸರೆಯಂತಿದ್ದ ಸುಂದರಿಯರಿಂದ ಗಾಳಿ ಹಾಕಿಸಿಕೊಳ್ಳುತ್ತ ಕುಳಿತಿದ್ದ. ರಾಜ ಅವನ ಮೇಲೆ ಆಕ್ರಮಣ ಮಾಡಲು ಬಂದಾಗ ಹೇಳಿದ, 'ರಾಜಾ, ನಿನ್ನ ತಾಯಿ, ಹೆಂಡತಿ, ಮಗಳು, ಮಗ ಎಲ್ಲರೂ ನಮ್ಮ ರಾಜ ವಿದೇಹನೊಡನೆ ಮಿಥಿಲೆಯನ್ನು ಸೇರಿದ್ದಾರೆ. ನನಗೆ ಒಂದು ಪೆಟ್ಟು ಬಿದ್ದರೆ ಅಲ್ಲಿ ಪ್ರತಿಯೊಬ್ಬರಿಗೂ ಹತ್ತು ಪೆಟ್ಟು ಬೀಳುತ್ತದೆ, ಹುಷಾರ್'. ಅಷ್ಟರಲ್ಲಿ ರಾಜನ ಸೇನಾಪತಿ ಬಂದು ಅರಮನೆಯಲ್ಲಿ ಇವರಾರೂ ಇಲ್ಲ. ವಿದೇಹ ರಾಜನೊಡನೆ ಹೋಗಿದ್ದಾರೆ ಎಂದು ಹೇಳಿದಾಗ, ಮತ್ತೊಮ್ಮೆ ಸೋಲನ್ನು ಅನುಭವಿಸಿ ಬ್ರಹ್ಮದತ್ತ ಸುಮ್ಮನಾದ.

---

## ದಿನ ಭವಿಷ್ಯ

ಮಂಗಳವಾರ ಮೇ 11, 2021

**ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಕೃತ್ತಿಕಾ ಅಮಾವಾಸ್ಯೆ ಗಂ. 42-25 (ರಾ. 11-00) ಮಂಗಳವಾರ ನಿತ್ಯ ನಕ್ಷತ್ರ ಭರಣಿ ಗಂ. 40-57 (ರಾ. 10-26) ಸೌಭಾಗ್ಯ ನಾಮ ಯೋಗ ಗಂ 39-43 ಚತುಷ್ಕರಣ ಕರಣ ಗಂ. 10-0 ವಿಷ ಗಂ. 1-17 ಅಮೃತ ಗಂ. 27-53 :** ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 5-59 ಸೂರ್ಯಾಸ್ತ: 6-33 ಅದೃಷ್ಟ ಸಂಖ್ಯೆ 1, 6

**ಮೇಷ:** ಮನೆಯಲ್ಲಿನ ರಂಪಾಟಗಳು ಜಾಸ್ತಿಯಾಗುವ ಸಾಧ್ಯತೆ. ಅನಿರೀಕ್ಷಿತ ಬೆಳವಣಿಗೆಯಿಂದ ಮಾನಸಿಕ ನೆಮ್ಮದಿ. ಸರ್ಕಾರಿ ನೌಕರರಿಗೆ ಪ್ರಶಂಸೆಯ ದಿನ. ಚಿಲ್ಲರೆ ವ್ಯಾಪಾರಿಗಳಿಗೆ ಲಾಭದ ದಿನ.

**ವೃಷಭ:** ಯಂತ್ರಾಗಾರಗಳಲ್ಲಿ ಅಗ್ನಿಯಿಂದ ಎಚ್ಚರ ಅಗತ್ಯ. ಅನಿರೀಕ್ಷಿತವಾದ ತಲೆನೋವಿಗೆ ಧೃತಿಗೆಡಬೇಕಾಗಿಲ್ಲ. ವೈದ್ಯರಿಗೆ ಕಾಲುನೋವಿನ ಸಾಧ್ಯತೆ. ಮಹಿಳಾ ಉದ್ಯಮಿಗಳಿಗೆ ಸಂತೃಪ್ತಿ.

**ಮಿಥುನ:** ಅದೃಷ್ಟದ ದಿನಕ್ಕಾಗಿ ಕಾಯುತ್ತಿರುವ ನಿಮಗೆ ಭಗವಂತನ ದಯೆ ಇದೆ. ನಿರೀಕ್ಷಿತ ಮಟ್ಟಕ್ಕೆ ನಿಮಗೆ ಗೆಲುವು ಕಟ್ಟಿಟ್ಟ ಬುತ್ತಿ. ಹಣಕಾಸಿನ ವ್ಯವಹಾರದಲ್ಲಿ ತೃಪ್ತಿದಾಯಕ ಬದುಕು. ಬಂಗಾರ ಖರೀದಿ ಮಾಡಲಿದ್ದೀರಿ.

**ಕರ್ಕಾಟಕ:** ದೂರದ ಬಂಧುಗಳ ಆಗಮನದಿಂದ ತೀರ್ಥಯಾತ್ರೆ ಬಗ್ಗೆ ನಿಷ್ಕರ್ಷೆ. ರತ್ನ ವ್ಯಾಪಾರಿಗಳಿಗೆ ಅನುಕೂಲ. ಗುಡಿ ಕೈಗಾರಿಕೆ ನಡೆಸುವವರಿಗೆ ಪ್ರಗತಿ. ಮನಸ್ಸಿಗೆ ಸಂತೋಷದಾಯಕ ದಿನ.

**ಸಿಂಹ:** ಅಧಿಕಾರಿಗಳ ಸಹಕಾರದಿಂದ ಕಾರ್ಯದಲ್ಲಿ ಪ್ರಗತಿ. ಮನಸ್ಸಿಗೆ ಸಂಬಂಧಪಟ್ಟ ವ್ಯವಹಾರ ನಡೆಸುವುದು ಉಚಿತವಲ್ಲ. ಹಿರಿಯರ ಆಶೀರ್ವಾದ ದೊರೆಯಲಿದೆ. ಕೃಷಿ ಕ್ಷೇತ್ರದಲ್ಲಿ ಸಾಧಾರಣ ಪ್ರಗತಿ.

**ಕನ್ಯಾ:** ಮನಸ್ಸಿಗೆ ಸಂಬಂಧಪಟ್ಟರೂ ದೇಹಾರೋಗ್ಯದ ಬಗ್ಗೆ ಆಲಸ್ಯ ಬೇಡ. ವಾಹನ ವ್ಯಾಪಾರದಲ್ಲಿ ಪ್ರಗತಿ. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಅನಿರೀಕ್ಷಿತ ಲಾಭ. ವನ್ಯ ಸಂಪತ್ತಿಗೆ ಅಧಿಕವಾದ ಪರಿಶ್ರಮ ಅಗತ್ಯ.

**ತುಲಾ:** ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಆಸಕ್ತಿ ತೋರಲಿದ್ದೀರಿ. ಹಣಕಾಸಿನ ಬಗ್ಗೆ ಚಿಂತಿಸುವುದು ಬೇಡ. ಸ್ತ್ರೀಯರಿಗೆ ಮನಸ್ಸಿನ ಮೇಲೆ ನಿಯಂತ್ರಣವಿರಲಿ. ಗೊಂದಲಮಯ ಬದುಕಿನಿಂದ ಮುಕ್ತಿ.

**ವೃಶ್ಚಿಕ:** ಹಣ ಹೊಂದಿಸಲು ಬೇರೆಯವರ ಸಹಾಯವನ್ನು ಯಾಚಿಸಲಿದ್ದೀರಿ. ಔಷಧ ಸೇವನೆಯಲ್ಲಿ ಮುಂಜಾಗ್ರತೆ ಅಗತ್ಯ. ಮನಸ್ಸಿಗೆ ಸಂಬಂಧಿಸಿದ ವಿಷಯವನ್ನು ಬೇರೆಯವರಲ್ಲಿ ನಿವೇದಿಸಿಕೊಳ್ಳಿ.

**ಧನು:** ಹಿರಿಯ ಅಧಿಕಾರಿಗಳ ಭೇಟಿಯಿಂದ ಮುಂದೂಡಲ್ಪಡುತ್ತಿರುವ ಕಾರ್ಯಗಳು ಶೀಘ್ರದಲ್ಲಿ ನೆರವೇರಲಿವೆ. ಕುಶಲಕರ್ಮಿಗಳಿಗೆ ಅನುಕೂಲ. ಬಂಧುಗಳ ಆರ್ಥಿಕ ಸಹಾಯದಿಂದ ದೃಢತೆ.

**ಮಕರ:** ಸತ್ಕಾರ್ಯದಲ್ಲಿ ಪಾಲ್ಗೊಳ್ಳುವಿಕೆ. ಹಳೆಯ ವೈಷಮ್ಯ ಗರಿಗೆದರುವ ಸಾಧ್ಯತೆ. ವಿದ್ಯಾರ್ಥಿಗಳು ಸಮಾಧಾನ ಚಿತ್ತದಿಂದ ವ್ಯವಹರಿಸುವುದು ಉತ್ತಮ. ವಿಪರೀತವಾದ ಖರ್ಚು. ರಕ್ಷಣಾಧಿಕಾರಿಗಳಿಗೆ ಎಚ್ಚರಿಕೆಯ ಕಾಲ.

**ಕುಂಭ:** ಮಾನಸಿಕ ಸ್ಥೈರ್ಯ ಸದೃಢವಾಗಿ ಲಾಭದಾಯಕವಾದ ಬದುಕು. ಕೌಟುಂಬಿಕ ಬಿಕ್ಕಟ್ಟಿನ ಕುರಿತು ಚರ್ಚೆ, ಸಂಗಾತಿಯಿಂದ ಸಮಾಧಾನದ ಜೊತೆಗೆ ನೆರವು ದೊರೆಯಲಿದೆ.

**ಮೀನ:** ಮನಸ್ಸಿಗೆ ಅನುಕೂಲವಾದ ಅನೇಕ ವಿಷಯಗಳಲ್ಲಿ ಸಾಫಲ್ಯತೆ ಪಡೆಯಲಿದ್ದೀರಿ. ವ್ಯತಿರಿಕ್ತವಾದ ವ್ಯವಹಾರದಲ್ಲಿ ತೊಡಗುವುದು ಬೇಡ. ಸಹೋದರರಿಂದ ಕಾರ್ಯಕ್ಕೆ ಅನುವು.


**ನಿಮ್ಮ ಜನ್ಮದಿನ 11-ಮೇ** ಈ ದಿನ ಅತ್ಯಂತ ಶುಭಕರ. ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸಲಿದ್ದೀರಿ. ಹೊಸ ಯೋಜನೆಯ ಬಗ್ಗೆ ಚಿಂತನೆ ನಡೆಸುವಿರಿ. ನಿಮ್ಮ ಮಹತ್ತರ ಕಾರ್ಯಯೋಜನೆಗಳು ನಿರಾಯಾಸವಾಗಿ ಸಾಗಿ ನೆಮ್ಮದಿ. ದೂರ ಪ್ರಯಾಣ ಸಾಧ್ಯತೆ. ಆಗಾಗ್ಗೆ ನಿಮ್ಮ ಕಾರ್ಯಕ್ಷೇತ್ರವನ್ನು ಬದಲಾಯಿಸುವ ಸಾಧ್ಯತೆಯೂ ಕಂಡುಬರುತ್ತಿದೆ.

---

## ಪದಬಂಧ 4593 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಲೋಭನಿಗೆ ಆಸೆಯನ್ನು ಹುಟ್ಟಿಸುವುದು! (4)
2.ಸಂಪ್ರದಾಯದೊಳಗೇ ರಂಪ ಕಾಣುತ್ತಿದೆಯಲ್ಲಾ? (4)
4.ಬೆಳದಿಂಗಳನ್ನು ಸೇವಿಸುವುದೆಂದು ನಂಬಲಾದ ಹಕ್ಕಿ (4)
7.ಉಕ್ಕಡದ ಬಳಿ ಕೊಡುವ ತೆರಿಗೆ (3)
8.ಕಾಣಾಣ ಹಿಡಿದಿರುವ ಬುದ್ಧಿವಂತ! (2)
9.ಬಲ್ಲವನೊಡನಿರುವ ಪತಿ (3)
10.ವಿಷ್ಣುವಿನ ದಶಾವತಾರದಲ್ಲಿ ಕೊನೆಯದು (2)
11.ಹಸೆ ಹಾಕುವ ಜಾಗದಲ್ಲಿ ಬೆಳೆದ ಪಾಚಿ (3)
12.ಒಪ್ಪಂದದ ಪತ್ರ (4)
14.ತನಗೆ ಬೇಡವಾದವರ ಮೇಲಿನ ಶತ್ರುತ್ವ (4)
15.ಅಂಗೈಯಿಂದ ಕೆನ್ನೆಗೆ ಕೊಡುವ ಏಟು (4)

**ಮೇಲಿಂದ ಕೆಳಕ್ಕೆ**
1.ಜಗತ್ತು ಇಲ್ಲಿದೆ (3)
3.ಪತಿಯೊಂದಿಗಿರುವ ಕಾಲಾಳು (3)
5.ಹಂತ ಹಂತವಾಗಿ ಎಂದು ಹೀಗೆನ್ನಿ (3)
6.ಖಡ್ಗದಿಂದ ಮಾಡುವ ಸಾಧನೆ (5)
7.ಈತ ಬಲು ಅಲಸಿ (5)
10.ಒಡೆಯನಿಲ್ಲಿ ತಿರುಗಿದ್ದಾನಲ್ಲಾ? (3)
11.ಹಾವು ಇರುವಡೆ ಕಾಣುವ ಮರದ ಮೆಟ್ಟು (3)
13.ತಿಂದಿದ್ದನ್ನು ಪುನಃ ನುರಿಸಿ ತಿನ್ನುವಿಕೆ (3)




### 4592ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 2.ಪತ್ತಲ 3.ಭವಿಷ್ಯ5.ಕ್ಷೇತ್ರ6.ಅಧಮ 7.ಮಹಾರಾಜ8.ಸತ್ವವಾನ 10.ತವಂಬಜಾಂ 11.ಚಾಡಿಕೋರ13.ತಸ್ಕರ 14.ಸ್ಥಿರ15.ಅಗಸೆ17.ಅದಿತಿ

**ಮೇಲಿಂದ ಕೆಳಕ್ಕೆ:** 1.ಲಾಭ2.ಪತ್ರ 4.ವಿರಹಾ5.ಕ್ಷೇಮಸಮಾಚಾರ 6.ಅಜಗಜಾಂತರ7.ಮಥಿತ 9.ನಶ್ವರ12.ಕೋಡಗ14.ಸ್ಥಿತಿ16.ಸೆಲೆ

## ಸುಡೊಕು 4979

| | | | | | | | | |
| --- | --- | --- | --- | --- | --- | --- | --- | --- |
| | 5 | | 7 | | 2 | | 8 | |
| | | | | | | 3 | | 4 |
| 4 | 7 | | 3 | | 9 | | 1 | |
| 1 | | 4 | 8 | | | | 2 | 3 |
| | | | | 3 | | | | |
| 8 | | 7 | | | 1 | | 5 | 9 |
| 2 | | 3 | 9 | | 6 | 5 | | 8 |
| | | 6 | | | | | | |
| | 8 | | 5 | | 4 | | 3 | 2 |

**ಆಡುವುದು ಹೇಗೆ?** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 4978 ಸುಡೊಕು

| | | | | | | | | |
| --- | --- | --- | --- | --- | --- | --- | --- | --- |
| 5 | 6 | 3 | 9 | 2 | 7 | 8 | 1 | 4 |
| 8 | 1 | 7 | 6 | 5 | 4 | 2 | 3 | 9 |
| 4 | 2 | 9 | 3 | 8 | 1 | 7 | 5 | 6 |
| 2 | 4 | 6 | 7 | 1 | 3 | 9 | 8 | 5 |
| 3 | 9 | 1 | 8 | 4 | 5 | 6 | 7 | 2 |
| 7 | 5 | 8 | 2 | 9 | 6 | 3 | 4 | 1 |
| 6 | 8 | 5 | 1 | 7 | 9 | 4 | 2 | 3 |
| 1 | 3 | 2 | 4 | 6 | 8 | 5 | 9 | 7 |
| 9 | 7 | 4 | 5 | 3 | 2 | 1 | 6 | 8 |

## ‘ಜೈವಿಕ ಶಸ್ತ್ರಾಸ್ತ್ರ ಅಭಿವೃದ್ಧಿ ಪಡಿಸುತ್ತಿಲ್ಲ’

**ಬೀಜಿಂಗ್:** ‘ಜೈವಿಕ ಅಸ್ತ್ರವಾಗಿ ಬಳಸಲು 2015ರಲ್ಲಿಯೇ ಚೀನಾದ ಸೇನಾ ವಿಜ್ಞಾನಿಗಳು ಕೊರೊನಾ ಸೋಂಕು ಅನ್ವೇಷಿಸಿದ್ದರು’ ಎಂಬ ಮಾಧ್ಯಮ ವರದಿಗಳನ್ನು ‘ಸಾರಾಸಗಟು ಸುಳ್ಳು’ ಎಂದು ಚೀನಾ ತಳ್ಳಿಹಾಕಿದೆ. ಇದು, ದೇಶದ ಬಲ ಕುಗ್ಗಿಸುವ ಅಮೆರಿಕದ ಯತ್ನವಾಗಿದೆ ಎಂದೂ ಹೇಳಿದೆ.

ಚೀನಾದ ಸೇನಾ ವಿಜ್ಞಾನಿಗಳು ಮತ್ತು ಸಾರ್ವಜನಿಕ ಆರೋಗ್ಯ ಕ್ಷೇತ್ರದ ಹಿರಿಯ ಅಧಿಕಾರಿಗಳು 2015ರಲ್ಲಿ ಬರೆದಿದ್ದರು ಎನ್ನಲಾದ ‘ಸ್ಫೋಟಕ’ ದಾಖಲೆಗಳನ್ನು, ಕೋವಿಡ್ ತನಿಖೆಯ ಭಾಗವಾಗಿ ಅಮೆರಿಕ ವಶಪಡಿಸಿಕೊಂಡಿದೆ ಎನ್ನಲಾಗಿತ್ತು.

ಈ ದಾಖಲೆಗಳನ್ನು ಉಲ್ಲೇಖಿಸಿದ್ದ ವರದಿಗಳ ಪ್ರಕಾರ, ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿ (ಪಿಎಲ್‌ಎ) ಜೈವಿಕ ಅಸ್ತ್ರವಾಗಿ ಬಳಸಲು ಕೊರೊನಾ ವೈರಸ್ ಅನ್ನು ಐದು ವರ್ಷಗಳ ಹಿಂದೆಯೇ ಅನ್ವೇಷಿಸಿತ್ತು. ಜೈವಿಕ ಶಸ್ತ್ರಾಸ್ತ್ರ ಬಳಸಿಯೇ ಮೂರನೇ ವಿಶ್ವಯುದ್ಧ ನಡೆಯಲಿದೆ ಎಂದು ಪಿಎಲ್‌ಎ ಅಂದಾಜಿಸಿತ್ತು.



### ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿಕೆ

# ಪೋರ್ಟಲ್‌ನಲ್ಲೇ ಆಮ್ಲಜನಕ, ಲಸಿಕೆ ಮಾಹಿತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಆಮ್ಲಜನಕ, ರೆಮ್‌ಡಿಸಿವಿರ್ ಜತೆಗೆ ಖಾಸಗಿ ಆಸ್ಪತ್ರೆಗಳಲ್ಲಿರುವ ಸರ್ಕಾರಿ ಕೋಟಾದ ಹಾಸಿಗೆಗಳ ಮಾಹಿತಿ ಸುವರ್ಣ ಆರೋಗ್ಯ ಸುರಕ್ಷತಾ ಟ್ರಸ್ಟ್ (ಎಸ್‌ಎಎಸ್‌ಟಿ) ಪೋರ್ಟಲ್‌ನಲ್ಲಿ ಸಿಗುವಂತೆ ಮಾಡಲಾಗುವುದು’ ಎಂದು ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ರಾಜ್ಯ ಕೋವಿಡ್ ವಾರ್ ರೂಂಗೆ ಭೇಟಿ ನೀಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಆಮ್ಲಜನಕ ಮತ್ತು ರೆಮ್‌ಡಿಸಿವಿರ್ ಬೇಡಿಕೆ-ಪೂರೈಕೆಯಲ್ಲಿ ಪಾರದರ್ಶಕತೆ ಬಹಳ ಮುಖ್ಯ. ಈ ವ್ಯವಸ್ಥೆಯಿಂದ ಪಾರದರ್ಶಕತೆಯ ಜತೆಗೆ ಸಾರ್ವಜನಿಕರಿಗೂ ವಾಸ್ತವ ಚಿತ್ರಣ ಸಿಗಲಿದೆ’ ಎಂದರು.

ಇನ್ನು 2–3 ದಿನಗಳಲ್ಲಿ ಎಸ್‌ಎಎಸ್‌ಟಿ ಪೋರ್ಟಲ್‌ಗೆ (http://arogya.karnataka.gov.in/) ಎಲ್ಲವನ್ನೂ ಲಿಂಕ್ ಮಾಡಲಾಗುವುದು. ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ’ ಎಂದರು.

## ‘ಹಳ್ಳಿಗಳಲ್ಲಿ ಆಮ್ಲಜನಕ ಸೌಲಭ್ಯದ 8,105 ಹಾಸಿಗೆ’



ಅಶ್ವತ್ಥನಾರಾಯಣ

‘ಕೋವಿಡ್ ಮೂರನೇ ಅಲೆ ಎದುರಿಸಲು ಸಾಧ್ಯವಾಗುವಂತೆ ತಾಲ್ಲೂಕು ಆಸ್ಪತ್ರೆಗಳೂ ಸೇರಿದಂತೆ ಹಳ್ಳಿಗಳಲ್ಲಿ ಆಮ್ಲಜನಕ ಸೌಲಭ್ಯದ 8,105 ಹಾಸಿಗೆ ವ್ಯವಸ್ಥೆ ಕಲ್ಪಿಸಲು ನಿರ್ಧರಿಸಲಾಗಿದೆ’ ಎಂದು ಅಶ್ವತ್ಥನಾರಾಯಣ ತಿಳಿಸಿದರು.

‘ರಾಜ್ಯದ 146 ತಾಲ್ಲೂಕು ಆಸ್ಪತ್ರೆಗಳಲ್ಲಿ ತಲಾ 4ರಿಂದ 6 ಐಸಿಯು ಹಾಸಿಗೆಗಳಿವೆ. ಅವುಗಳನ್ನು 20ಕ್ಕೆ ಹೆಚ್ಚಿಸಲಾಗುವುದು. ಅದರಿಂದ 1,925 ಐಸಿಯು ಹಾಸಿಗೆಗಳು ಲಭ್ಯವಾಗಲಿವೆ’ ಎಂದರು.

‘ರಾಜ್ಯದ 206 ಸಮುದಾಯ ಆರೋಗ್ಯ ಕೇಂದ್ರಗಳಿರುವ ತಲಾ 30 ಸಾಮಾನ್ಯ ಹಾಸಿಗೆಗಳಿಗೆ ಆಮ್ಲಜನಕ ಸೌಲಭ್ಯ ಕಲ್ಪಿಸಲಾಗುವುದು. ಅದರಿಂದ 6,180 ಹಾಸಿಗೆಗಳು ಸಿಗುತ್ತವೆ. ಪ್ರತಿ ಸಮುದಾಯ ಕೇಂದ್ರದ 30 ಹಾಸಿಗೆಗಳ ಪೈಕಿ ಐದನ್ನು ಅಧಿಕ ಆಮ್ಲಜನಕ ಸಾಂದ್ರತೆಯ ಹಾಸಿಗೆಗಳಾಗಿ ಪರಿವರ್ತಿಸಲಾಗುವುದು. ಜಿಲ್ಲಾಸ್ಪತ್ರೆಗಳಲ್ಲಿ 50 ಐಸಿಯು ಹಾಸಿಗೆಗಳ ವ್ಯವಸ್ಥೆ ಮಾಡಲಾಗುವುದು’ ಎಂದರು.

‘ಬೆಂಗಳೂರಿನಲ್ಲಿ ಈಗ ಪ್ರತಿನಿತ್ಯ ಸರಿಸುಮಾರು 950 ಹಾಸಿಗೆ ಖಾಲಿ ಆಗುತ್ತಿವೆ. ಆದರೆ 7 ಸಾವಿರದಿಂದ 8 ಸಾವಿರ ಹಾಸಿಗೆಗಳಿಗೆ ಬೇಡಿಕೆ ಬರುತ್ತಿದೆ. ಇಷ್ಟು ಸೋಂಕಿತರಲ್ಲಿ ವೈದ್ಯರ ಪರಿಶೀಲನೆ (ಟ್ರಾಯಾಜ್) ಮೇಲೆ ಆಸ್ಪತ್ರೆಗೆ ಸೇರಬೇಕಾದವರೇ 2 ಸಾವಿರಕ್ಕೂ ಹೆಚ್ಚು ಇದ್ದಾರೆ. ಗಂಭೀರ ಸೋಂಕಿತರಿಗೆ ಬೆಡ್ ಒದಗಿಸುವ ಉದ್ದೇಶದಿಂದ ಸ್ಟೆಪ್‌ಡೌನ್ ಆಸ್ಪತ್ರೆಗಳನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದು ಮಾಹಿತಿ ನೀಡಿದರು.

## ಆಮ್ಲಜನಕ ಸಂಗ್ರಹಕ್ಕೆ 10 ಟ್ಯಾಂಕರ್: ಭರವಸೆ

**ಬೆಂಗಳೂರು:** ರಾಜ್ಯದಲ್ಲಿ ಆಮ್ಲಜನಕ ಸಂಗ್ರಹಿಸಿಡಲು ಹೆಚ್ಚಿನ ಸಂಖ್ಯೆಯಲ್ಲಿ ಟ್ಯಾಂಕರ್‌ಗಳು ಇಲ್ಲದ ಕಾರಣ, ತಕ್ಷಣವೇ 10 ಟ್ಯಾಂಕರ್‌ಗಳ ವ್ಯವಸ್ಥೆ ಮಾಡುವುದಾಗಿ ಕೇಂದ್ರ ಸರ್ಕಾರ ಭರವಸೆ ನೀಡಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಅಲ್ಲದೆ, ಬಹ್ರೈನ್ ಮತ್ತು ಇತರ ದೇಶಗಳಿಂದ ಕರ್ನಾಟಕದ ಬಂದರಿಗೆ ಬಂದಿರುವ ಟ್ಯಾಂಕರ್‌ಗಳನ್ನು ಬಳಸಿಕೊಳ್ಳಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಒಪ್ಪಿಗೆ ನೀಡಿದ್ದಾರೆ ಎಂದು ಅವರು ತಿಳಿಸಿದರು.

ದೆಹಲಿ ಭೇಟಿಯ ಬಳಿಕ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಅಮಿತ್ ಶಾ ಜತೆಗಿನ ಮಾತುಕತೆಯ ವಿವರಗಳನ್ನು ನೀಡಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ನಮ್ಮ ರಾಜ್ಯದಲ್ಲಿ ಉತ್ಪಾದನೆ ಆಗುತ್ತಿರುವ ಆಮ್ಲಜನಕವನ್ನು ಇಲ್ಲಿಯೇ ಬಳಸಿಕೊಳ್ಳಲು ಒಪ್ಪಿಗೆ ನೀಡಬೇಕು ಮತ್ತು ಆಮ್ಲಜನಕದ ಕೋಟಾವನ್ನು ಹೆಚ್ಚಿಸಬೇಕು. ದೂರದ ರಾಜ್ಯಗಳಿಂದ ಆಮ್ಲಜನಕವನ್ನು ತರಿಸುವುದು ಕಷ್ಟವಾಗುತ್ತಿದೆ ಎಂಬುದನ್ನು ಅವರ ಗಮನಕ್ಕೆ ತರಲಾಯಿತು. ಇದಕ್ಕಾಗಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು’ ಎಂದರು.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವ ಬಗ್ಗೆ ಶಾ ಅವರು ಆತಂಕ ವ್ಯಕ್ತಪಡಿಸಿದರು. ಎಲ್ಲರೂ ಒಗ್ಗಟ್ಟಿನಿಂದ ಕೋವಿಡ್ ಹಿಮ್ಮೆಟ್ಟಿಸಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ಕೇಂದ್ರದಿಂದ ಅಗತ್ಯ ನೆರವು ನೀಡಲಾಗುವುದಾಗಿ ಹೇಳಿದರು. ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ವಿವರಿಸಿದೆವು. ಶಾ ಅವರು ಸಮಾಧಾನ ವ್ಯಕ್ತಪಡಿಸಿದರು ಎಂದು ಬೊಮ್ಮಾಯಿ ಹೇಳಿದರು.



ಬೊಮ್ಮಾಯಿ

ಕೋವಿಡ್ ನಿರ್ವಹಣೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂಬುದು ಸತ್ಯಕ್ಕೆ ದೂರ ಸಂಗತಿ. ಇಡೀ ದೇಶದಲ್ಲೇ ಪ್ರಕರಣಗಳು ಹೆಚ್ಚಾಗಿವೆ. ಆದ್ದರಿಂದ ಎಲ್ಲರೂ ಕೂಡಿ ನಿಯಂತ್ರಣಕ್ಕೆ ತರಬೇಕು ಎಂದು ಸಲಹೆ ನೀಡಿದರು.

ಬೋಯಿಂಗ್ ಕಂಪನಿ ರಾಜ್ಯದಲ್ಲಿ ಎರಡು ಆಸ್ಪತ್ರೆಗಳನ್ನು ಮಾಡಲು ಪ್ರಸ್ತಾಪ ಮುಂದಿಟ್ಟಿದ್ದಾರೆ. ಯಲಹಂಕ ಮತ್ತು ಕಲಬುರ್ಗಿಯಲ್ಲಿ ಆಮ್ಲಜನಕ ಸಹಿತ 250 ಹಾಸಿಗೆಗಳ ಆಸ್ಪತ್ರೆ ಸ್ಥಾಪಿಸಲಾಗುವುದು. ಇದಕ್ಕೂ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ ಎಂದರು.

**ರಾಜಕೀಯ ಉದ್ದೇಶವಿಲ್ಲ:** ‘ಈ ಭೇಟಿಯಲ್ಲಿ ರಾಜಕೀಯ ಉದ್ದೇಶವಿರಲಿಲ್ಲ. ಕೋವಿಡ್ ಬಿಟ್ಟು ಬೇರೆ ಯಾವುದೇ ವಿಷಯಗಳು ಪ್ರಸ್ತಾಪಕ್ಕೆ ಬರಲಿಲ್ಲ’ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಬಸವರಾಜ ಬೊಮ್ಮಾಯಿ ಮುಂದಿನ ಮುಖ್ಯಮಂತ್ರಿ’ ಎಂಬ ವದಂತಿ ಹರಡಿರುವ ಕುರಿತು ಪ್ರಶ್ನಿಸಿದಾಗ, ‘ಆ ರೀತಿ ಯೋಚನೆ ಮಾಡುವುದೇ ತಪ್ಪು. ಸರ್ಕಾರದ ಮೊದಲ ಆದ್ಯತೆ ಕೋವಿಡ್ ನಿಯಂತ್ರಣಕ್ಕೆ ತರುವುದು. ಮುಖ್ಯಮಂತ್ರಿ ಬದಲಾವಣೆ ವಿಚಾರ ಹಸಿ ಸುಳ್ಳು’ ಎಂದು ಹೇಳಿದರು.

## ಸಂಪೂರ್ಣ ಲಾಕ್‌ಡೌನ್: ಸಿದ್ದರಾಮಯ್ಯ ಸಲಹೆ

**ಬೆಂಗಳೂರು:** ‘ಕೋವಿಡ್ ರೋಗಿಗಳು ಹೆಚ್ಚು ಪತ್ತೆ ಆಗಬಾರದೆಂಬ ಕಾರಣಕ್ಕೆ ಸರ್ಕಾರ ಪರೀಕ್ಷೆ ಪ್ರಮಾಣ ಕಡಿಮೆ ಮಾಡಿದೆ’ ಎಂದು ಆರೋಪಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಎರಡು ವಾರ ಸಂಪೂರ್ಣ ಲಾಕ್‌ಡೌನ್ ಮಾಡಬೇಕು’ ಎಂದು ಸಲಹೆ ನೀಡಿದರು.

ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಪ್ರತಿನಿಧಿಸುವ ಪುಲಿಕೇಶಿ ನಗರ ವಿಧಾನಸಭೆ ಕ್ಷೇತ್ರದಲ್ಲಿ ಆಹಾರ-ಧಾನ್ಯಗಳ ಕಿಟ್ ವಿತರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಹೈಕೋರ್ಟ್, ಸುಪ್ರೀಂ ಕೋರ್ಟ್ ಹೇಳಿದ ನಂತರವೂ ಕೇಂದ್ರ ಸರ್ಕಾರ ಹೆಚ್ಚುವರಿ ಆಮ್ಲಜನಕ ಕೊಡುತ್ತಿಲ್ಲ.’ ಎಂದು ಅಸಮಾಧಾನ ವ್ಯಕ್ತಪಡಿಸಿದರು. ‘ಆಸ್ಪತ್ರೆ, ಆಂಬುಲೆನ್ಸ್, ಆಮ್ಲಜನಕ ಒದಗಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿ. ಲಾಕ್‌ಡೌನ್ ಅವಧಿಯಲ್ಲಿ ದುಡಿಯುವ ಹಾಗೂ ಬಡವರ್ಗಕ್ಕೆ ವಿಶೇಷ ಪ್ಯಾಕೇಜ್ ಘೋಷಿಸುವಂತೆ ಆಗ್ರಹಿಸಿದರು.



### ಜಿಮ್ಸ್ ಬಿಟ್ಟು ಯಾವ ತಾಲ್ಲೂಕು ಆಸ್ಪತ್ರೆಗಳಲ್ಲೂ ವೆಂಟಿಲೇಟರ್ ಇಲ್ಲ

# ವೆಂಟಿಲೇಟರ್ ಸಿಗದೇ ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

**ಮುಂಡರಗಿ (ಗದಗ ಜಿಲ್ಲೆ):** ವೆಂಟಿಲೇಟರ್ ದೊರೆಯದೆ ನಾಲ್ಕು ಮಂದಿ ಕೋವಿಡ್ ಸೋಂಕಿತರು ಮೃತಪಟ್ಟಿರುವ ಘಟನೆ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಸೋಮವಾರ ನಡೆದಿದೆ.

ಮುಂಡರಗಿ ತಾಲ್ಲೂಕಿನ ಬಿದರಳ್ಳಿ ಗ್ರಾಮದ ಕಸ್ತೂರೆವ್ವ ಮತ್ತೂರು, ಬೂದಿಹಾಳ ಗ್ರಾಮದ ಕನಕಪ್ಪ ತಳವಾರ, ಮುಂಡರಗಿಯ ಮಾಬುಂಬಿ ಹಾಗೂ ಕೊಪ್ಪಳ ತಾಲ್ಲೂಕಿನ ನೀಲಮ್ಮ ಮೃತರು.

ಕೊರೊನಾ ಗಂಭೀರ ಲಕ್ಷಣಗಳು ಕಾಣಿಸಿಕೊಂಡ ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ವಿವಿಧ ಕಾಯಿಲೆಗಳಿಂದ ಬಳಲುತ್ತಿದ್ದ ರೋಗಿಗಳ ದೇಹದಲ್ಲಿ ಆಮ್ಲಜನಕದ ಪ್ರಮಾಣ 60ಕ್ಕೆ ಕುಸಿದಿತ್ತು. ಇಲ್ಲಿಯ ವೈದ್ಯರು ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ ತಕ್ಷಣ ವೆಂಟಿಲೇಟರ್ ವ್ಯವಸ್ಥೆಯುಳ್ಳ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಸೂಚಿಸಿದ್ದರು ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

‘ಮುಂಡರಗಿ ಸಾರ್ವಜನಿಕ ಆಸ್ಪತ್ರೆಯಲ್ಲಿ 50 ಆಮ್ಲಜನಕ ಸಹಿತ ಹಾಸಿಗೆಗಳಿವೆ. ಆಸ್ಪತ್ರೆಗೆ ಪ್ರತಿದಿನ 16 ಜಂಬೋ ಸಿಲಿಂಡರ್ ಆಮ್ಲಜನಕ ಬೇಕಿದ್ದು, ಜಿಮ್ಸ್‌ನಿಂದ ಪೂರೈಸುತ್ತಾರೆ. ಆದರೆ, ತಾಲ್ಲೂಕು ಆಸ್ಪತ್ರೆಯಲ್ಲಿ ವೆಂಟಿಲೇಟರ್ ಸೌಲಭ್ಯ ಇಲ್ಲ. ಚಿಕಿತ್ಸೆಗೆ ವೆಂಟಿಲೇಟರ್ ಅಗತ್ಯವಿರುವ ರೋಗಿಗಳನ್ನು ಜಿಲ್ಲಾ ಕೋವಿಡ್ ಆಸ್ಪತ್ರೆಗೆ ಕಳುಹಿಸುತ್ತೇವೆ. ಆದರೆ, ಜಿಮ್ಸ್‌ನಲ್ಲೂ ವೆಂಟಿಲೇಟರ್ ಬೆಡ್ ಖಾಲಿ ಇರಲಿಲ್ಲ. ಇವತ್ತು ಇಲ್ಲಿ ಮೃತಪಟ್ಟ ಸೋಂಕಿತರೆಲ್ಲರೂ ಅಸ್ತಮಾ, ಅಧಿಕ ರಕ್ತದೊತ್ತಡ, ಮಧುಮೇಹ ಹಾಗೂ ಥೈರಾಯ್ಡ್‌ನಂತಹ ಗಂಭೀರ ಸಮಸ್ಯೆಯಿಂದ ಬಳಲುತ್ತಿದ್ದರು’ ಎಂದು ಆಸ್ಪತ್ರೆಯ ವೈದ್ಯ ಡಾ. ಕೀರ್ತಿಶೇಷ ತಿಳಿಸಿದ್ದಾರೆ.

‘ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆ (ಜಿಮ್ಸ್) ಕೋವಿಡ್ ಆಸ್ಪತ್ರೆಯಲ್ಲಿ ಒಟ್ಟು 400 ಹಾಸಿಗೆಗಳಿದ್ದು, ಅವುಗಳಲ್ಲಿ 58 ಬೆಡ್‌ಗಳಿಗೆ ವೆಂಟಿಲೇಟರ್ ಸೌಲಭ್ಯ ಇದೆ. ಜಿಮ್ಸ್‌ನ ವೆಂಟಿಲೇಟರ್ ಬೆಡ್‌ಗಳೆಲ್ಲವೂ ಭರ್ತಿಯಾಗಿವೆ. ಮುಂಡರಗಿ ಆಸ್ಪತ್ರೆಯಲ್ಲಿ ಮೃತಪಟ್ಟ ಕೋವಿಡ್ ರೋಗಿಗಳು ವೆಂಟಿಲೇಟರ್ ಸಿಗದೇ ಸಾವನ್ನಪ್ಪಿದರು ಎಂಬುದಕ್ಕಿಂತ ಅವರು ಆಸ್ಪತ್ರೆಗೆ ಬಂದು ದಾಖಲಾಗುವ ವೇಳೆಗಾಗಲೇ ಅವರ ದೇಹದಲ್ಲಿ ಆಮ್ಲಜನಕದ ಪ್ರಮಾಣ ತೀವ್ರ ಕಡಿಮೆ ಆಗಿತ್ತು. ಅದರಿಂದಾಗಿಯೇ ರೋಗಿಗಳು ಮೃತಪಟ್ಟಿದ್ದಾರೆ’ ಎಂದು ಡಿಎಚ್‌ಒ ಡಾ. ಸತೀಶ್ ಬಸರಿಗಿಡದ ಸ್ಪಷ್ಟಪಡಿಸಿದ್ದಾರೆ.

‘ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ವೆಂಟಿಲೇಟರ್ ಸೌಲಭ್ಯ ಇಲ್ಲದ ಕಾರಣದಿಂದಾಗಿ ನಾಲ್ಕು ಮಂದಿ ಸೋಂಕಿತರು ಜೀವ ಕಳೆದುಕೊಂಡಿದ್ದಾರೆ. ಸರ್ಕಾರದ ಬೇಜವಾಬ್ದಾರಿಯಿಂದಲೇ ನಾಲ್ಕು ಜೀವಗಳು ಬಲಿಯಾಗಿವೆ. ಸರ್ಕಾರ ತಕ್ಷಣವೇ ತಾಲ್ಲೂಕು ಆಸ್ಪತ್ರೆಗಳಿಗೂ ವೆಂಟಿಲೇಟರ್ ಸೌಲಭ್ಯ ಕಲ್ಪಿಸಬೇಕು. ಅದಕ್ಕೆ ಅಗತ್ಯವಿರುವ ತಾಂತ್ರಿಕ ಸಿಬ್ಬಂದಿಯನ್ನು ನೇಮಿಸಬೇಕು. ಮೃತ ವ್ಯಕ್ತಿಗಳ ಕುಟುಂಬಕ್ಕೆ ಸೂಕ್ತ ಪರಿಹಾರ ವಿತರಿಸಬೇಕು’ ಎಂದು ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ ಆಗ್ರಹಿಸಿದ್ದಾರೆ.

# ಬೈಕ್‌ನಲ್ಲಿ ಶವ ಸಾಗಿಸಿ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

**ಚಾಮರಾಜನಗರ:** ಕೊಳ್ಳೇಗಾಲ ತಾಲ್ಲೂಕಿನ ಟಗರಪುರ ಗ್ರಾಮದಲ್ಲಿ ವೃದ್ಧರೊಬ್ಬರು ಮೃತಪಟ್ಟ ಎರಡು ದಿನಗಳ ನಂತರವೂ, ಗ್ರಾಮಸ್ಥರು ಅಂತ್ಯಕ್ರಿಯೆಗೆ ನೆರವಾಗದೇ ಹೋದುದರಿಂದ, ಪಿಎಫ್‌ಐ ಸಂಘಟನೆಯ ಸ್ವಯಂಸೇವಕರ ನೆರವಿನೊಂದಿಗೆ ಪೊಲೀಸರು ಶನಿವಾರ ರಾತ್ರಿ ಅಂತ್ಯಕ್ರಿಯೆ ನಡೆಸಿದ್ದಾರೆ.

ಗ್ರಾಮದ ಮಹದೇವಯ್ಯ (65) ಎಂಬುವವರು ಅನಾರೋಗ್ಯದಿಂದ ಮೃತಪಟ್ಟಿದ್ದರು. ಅವರ ಸಂಬಂಧಿಕರು ಯಾರೂ ಊರಿನಲ್ಲಿ ಇರಲಿಲ್ಲ. ಜ್ವರದಿಂದಾಗಿ ಮನೆಯಲ್ಲಿಯೇ ಮೃತಪಟ್ಟಿದ್ದಾರೆಂದು ಸುದ್ದಿ ಹರಡಿತ್ತು. ಕೋವಿಡ್ ಭಯದಿಂದ ಯಾರೂ ಆ ಮನೆಯತ್ತ ಸುಳಿದಿರಲಿಲ್ಲ. ವೃದ್ಧನ ತಮ್ಮನ ಮಗ ಲಕ್ಷ್ಮೀಕಾಂತ, ಬೆಂಗಳೂರಿನಿಂದ ಬಂದರಾದರೂ, ಗ್ರಾಮಸ್ಥರು ಅವರಿಗೆ ನೆರವಾಗಲಿಲ್ಲ. ಈ ವಿಷಯವನ್ನು ಪಿಎಫ್‌ಐ ಸ್ವಯಂಸೇವಕರ ಗಮನಕ್ಕೆ ತರಲಾಯಿತು.

ವಿಷಯ ತಿಳಿದು ಸ್ಥಳಕ್ಕೆ ಬಂದ ಸ್ವಯಂಸೇವಕರು, ಇರುವೆಗಳು ಮುತ್ತಿಕೊಂಡಿದ್ದ ಮೃತದೇಹವನ್ನು ಕೋವಿಡ್ ನಿಯಮಾನುಸಾರವಾಗಿ ಸುತ್ತಿದ್ದಾರೆ. ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸುವುದಕ್ಕಾಗಿ ಶವವನ್ನು ಏಣಿಯೊಂದಕ್ಕೆ ಕಟ್ಟಿ, ಬೈಕ್‌ನಲ್ಲಿಯೇ ಸಾಗಿಸಿದರು. ಆದರೆ, ಪಕ್ಕದ ಗ್ರಾಮದ ಬೀದಿಯೊಂದರ ಮಾರ್ಗವಾಗಿ ಜಮೀನಿಗೆ ತೆರಳಬೇಕಾಗಿದ್ದರಿಂದ, ಆ ದಾರಿಯಲ್ಲಿ ತೆರಳಲು ಅಲ್ಲಿನ ಗ್ರಾಮಸ್ಥರೂ ಅಡ್ಡಿ ಮಾಡಿದ್ದಾರೆ. ಬಳಿಕ, ಪೊಲೀಸರು ಮಧ್ಯ ಪ್ರವೇಶಿಸಿ ಸರ್ಕಾರಿ ಜಾಗದಲ್ಲಿ ಅಂತ್ಯಸಂಸ್ಕಾರವನ್ನು ನೆರವೇರಿಸಲು ಅವಕಾಶ ಮಾಡಿಕೊಟ್ಟರು ಎಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ)ದ ಚಾಮರಾಜನಗರ ಜಿಲ್ಲಾ ಘಟಕದ ಅಧ್ಯಕ್ಷ ಕಫೀಲ್ ಅಹಮ್ಮದ್ ‘ಪ್ರಜಾವಾಣಿ’ಗೆ ತಿಳಿಸಿದರು.



ವೃದ್ಧರೊಬ್ಬರ ಮೃತದೇಹವನ್ನು ಏಣಿಗೆ ಕಟ್ಟಿ, ಬೈಕ್ ಮೂಲಕ ಸಾಗಿಸಿದ ಪಿಎಫ್‌ಐ ಕಾರ್ಯಕರ್ತರು

‘ಕೋವಿಡ್ ಭಯದಿಂದ ಗ್ರಾಮಸ್ಥರು ನೆರವಾಗಲಿಲ್ಲ. ಕೊನೆಗೆ, ಸ್ವಯಂಸೇವಕರ ನೆರವಿನಿಂದ ಸರ್ಕಾರಿ ಜಾಗದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು’ ಎಂದು ಕೊಳ್ಳೇಗಾಲ ಗ್ರಾಮಾಂತರ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಅಶೋಕ್ ತಿಳಿಸಿದರು.

‘ಈ ವಿಚಾರವನ್ನು ಮೊದಲೇ ಯಾರೂ ಗಮನಕ್ಕೆ ತಂದಿಲ್ಲ. ಒಂದು ವೇಳೆ ಮಾಹಿತಿ ಸಿಕ್ಕಿದ್ದರೆ ತಕ್ಷಣವೇ ಒಂದು ಆಂಬುಲೆನ್ಸ್ ಕಳುಹಿಸಿ ಅಂತ್ಯಕ್ರಿಯೆಗೆ ವ್ಯವಸ್ಥೆ ಮಾಡಲಾಗುತ್ತಿತ್ತು’ ಎಂದು ಕೊಳ್ಳೇಗಾಲ ತಹಶೀಲ್ದಾರ್ ಕುನಾಲ್ ಪ್ರತಿಕ್ರಿಯಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಸುರೇಶ್‌ಕುಮಾರ್, ‘ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ತನಿಖೆ ನಡೆಸಿ ಮೇ 11ರ ಒಳಗೆ ವರದಿ ನೀಡುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಲಾಗಿದೆ’ ಎಂದು ಹೇಳಿದರು.

# ಕೋವಿಡ್: ಅಧ್ಯಕ್ಷರ ಆಯ್ಕೆ ಚುನಾವಣೆ ಮುಂದೂಡಿಕೆ

**ನವದೆಹಲಿ (ಪಿಟಿಐ):** ದೇಶದಲ್ಲಿ ಮೂಡಿರುವ ಕೋವಿಡ್ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪಕ್ಷದ ನೂತನ ಅಧ್ಯಕ್ಷರ ಆಯ್ಕೆಗೆ ಚುನಾವಣೆಯನ್ನು ಮುಂದೂಡಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸೋಮವಾರ ತೀರ್ಮಾನಿಸಿದೆ.



ಸೋನಿಯಾ ಗಾಂಧಿ

ನೂತನ ಅಧ್ಯಕ್ಷರ ಆಯ್ಕೆಗೆ 2021ರ ಜೂನ್‌ನಲ್ಲಿ ನಡೆಸಲು ಪಕ್ಷ ನಿರ್ಧರಿಸಿತ್ತು. ಮಧುಸೂಧನ್ ಮಿಸ್ತ್ರಿ ನೇತೃತ್ವದ ಪಕ್ಷದ ಕೇಂದ್ರ ಚುನಾವಣಾ ಪ್ರಾಧಿಕಾರವು ಜೂನ್ 23ರಂದು ಚುನಾವಣೆ ನಡೆಸಲು ನಿರ್ಧರಿಸಿತ್ತು. ಆದರೆ, ಈಗಿನ ಪರಿಸ್ಥಿತಿ ಹಿನ್ನೆಲೆಯಲ್ಲಿ ಚುನಾವಣೆ ನಡೆಸುವುದು ಸೂಕ್ತವಲ್ಲ ಎಂದು ಹೆಚ್ಚಿನ ಮುಖಂಡರು ಪ್ರತಿಪಾದಿಸಿದ್ದರು.

ಪ್ರಸ್ತುತ ಸನ್ನಿವೇಶದಲ್ಲಿ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಬಾರದು ಎಂದು ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಪ್ರಸ್ತಾಪಿಸಿದರೆ, ಹಿರಿಯ ಮುಖಂಡ ಗುಲಾಂ ನಬಿ ಅಜಾದ್ ಇದನ್ನು ಅನುಮೋದಿಸಿದ್ದಾರೆ.

ಈಗಿನ ವೇಳಾಪಟ್ಟಿ ಪ್ರಕಾರ, ಜೂನ್ 23ರಕ್ಕೆ ಚುನಾವಣೆ, 24ಕ್ಕೆ ಮತಎಣಿಕೆ ನಡೆಯಬೇಕಿತ್ತು. ಜೂನ್ 1ರಂದು ಅಧಿಸೂಚನೆ ಹೊರಡಿಸಿ, ನಾಮಪತ್ರಗಳನ್ನು ಜೂನ್ 2 ರಿಂದ7ರವರೆಗೆ ಸ್ವೀಕರಿಸಲು ನಿರ್ಧರಿಸಲಾಗಿತ್ತು.

**ಪಾಠ ಕಲಿಯಬೇಕಿದೆ– ಸೋನಿಯಾ ಗಾಂಧಿ:** ಇತ್ತೀಚೆಗೆ ಮುಕ್ತಾಯಗೊಂಡ ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷ ಎದುರಿಸಿದ ಗಂಭೀರವಾದ ಹಿನ್ನಡೆಗಳಿಂದ ಸರಿಯಾದ ಪಾಠಗಳನ್ನು ಕಲಿಯುವತ್ತ ಗಮನ ಹರಿಸಬೇಕು. ಸೋಲುಗಳಿಗೆ ಕಾರಣವಾದ ಅಂಶಗಳನ್ನು ಗುರುತಿಸಿ ಅವಲೋಕಿಸಲು ತಂಡವೊಂದನ್ನು ರಚಿಸಲಾಗುವುದು’ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹೇಳಿದರು.

ವಿಡಿಯೊ ಕಾನ್ಫರೆನ್ಸ್ ಮೂಲಕ ಸೋಮವಾರ ನಡೆದ ಮಹತ್ವದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯ ಉದ್ಘಾಟನಾ ಭಾಷಣ ಮಾಡಿದ ಅವರು, ‘ಈ ತಂಡ, ಹಿನ್ನಡೆಗೆ ಕಾರಣವಾಗುವ ಪ್ರತಿಯೊಂದು ಅಂಶವನ್ನೂ ಗುರುತಿಸಿ, ಅವಲೋಕಿಸಬೇಕು‘ ಎಂದು ಅವರು ಹೇಳಿದರು.

### ‘ಪ್ರಾಯಶ್ಚಿತ್ತ ಪಡಿ, ಜನರ ಸೇವೆಗೆ ಮುಂದಾಗಿ’

‘ಪ್ರಧಾನಮಂತ್ರಿ ನರೇಂದ್ರ ಮೋದಿ ತಮ್ಮ ಪ್ರಮಾದಗಳಿಗಾಗಿ ಪ್ರಾಯಶ್ಚಿತ್ತ ಪಡಬೇಕು ಮತ್ತು ಇನ್ನಾದರೂ ತಮ್ಮ ವೈಯಕ್ತಿಕ ಕಾರ್ಯಸೂಚಿ ಜಾರಿಗೆ ಒತ್ತು ನೀಡುವ ಬದಲಿಗೆ ಜನರ ಸೇವೆಗೆ ಮುಂದಾಗಬೇಕು‘ ಎಂದು ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿಯು (ಸಿಡಬ್ಲ್ಯುಸಿ) ಸೋಮವಾರ ಆಗ್ರಹಪಡಿಸಿದೆ.

## ಮತ್ತೆ ಏರಿದ ಮೃತರ ಸಂಖ್ಯೆ

**ಬೆಂಗಳೂರು:** ರಾಜ್ಯದಲ್ಲಿ ಕೋವಿಡ್‌ನಿಂದ ಸತ್ತವರ ಸಂಖ್ಯೆ ಮತ್ತೆ ಏರಿದೆ. 24 ಗಂಟೆಗಳಲ್ಲಿ 596 ಮಂದಿ ಅಸುನೀಗಿದ್ದಾರೆ. ಬೆಂಗಳೂರಿನಲ್ಲೇ (374) ಅಧಿಕ ಸಾವು ಪ್ರಕರಣಗಳು ದಾಖಲಾಗಿದ್ದು, ಮೃತರ ಒಟ್ಟು ಸಂಖ್ಯೆ 19,372ಕ್ಕೆ ಹೆಚ್ಚಿದೆ. ಹೀಗಾಗಿ ಮರಣ ಪ್ರಮಾಣ ದರ ಶೇ 1.51ಕ್ಕೆ ಮುಟ್ಟಿದೆ.

ಸೋಮವಾರ ಹೊಸದಾಗಿ 39,305 ಜನರಲ್ಲಿ ಸೋಂಕು ದೃಢಪಟ್ಟಿರುವ ಕಾರಣ ಸೋಂಕಿತರ ಒಟ್ಟು ಸಂಖ್ಯೆ 20 ಲಕ್ಷದ ಸನಿಹಕ್ಕೆ (19.73) ತಲುಪಿದೆ. 32,188 ಮಂದಿ ಗುಣಮುಖರಾಗಿರುವುದು ಸಮಾಧಾನ ತರಿಸಿದೆ.

ಬೆಂಗಳೂರಿನಲ್ಲಿ ಸೋಂಕಿತರ ಸಂಖ್ಯೆ ಇಳಿದಿದೆ. ಸೋಮವಾರ 16,747 ಜನರಿಗೆ ಸೋಂಕು ತಗುಲಿದೆ. ಬಳ್ಳಾರಿ (973), ಹಾಸನ (1,800), ಕಲಬುರ್ಗಿ (988), ಮಂಡ್ಯ (1,133) ಮತ್ತು ಮೈಸೂರಿನಲ್ಲೂ (1,537) ಸೋಂಕು ತಗ್ಗಿದೆ. ಆದರೆ ತುಮಕೂರು (2,168),ದಕ್ಷಿಣ ಕನ್ನಡ (1,175) ಮತ್ತು ಧಾರವಾಡದಲ್ಲಿ (1,006) ತುಸು ಹೆಚ್ಚಿದೆ.

# ಬೆಂಗಳೂರಿನಿಂದ ಮಳವಳ್ಳಿಗೆ ಆಟೊದಲ್ಲೇ ಅಮ್ಮನ ಶವ ಒಯ್ದ ಮಗ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮುಕ್ಕಾಲು ಗಂಟೆಯಿಂದ ಒಂದೇ ಸಮನೆ 108 ಗೆ ಕರೆ ಮಾಡಿದರೂ ಆಂಬುಲೆನ್ಸ್ ಸಿಗಲೇ ಇಲ್ಲ. ಇದರಿಂದ ಬೇಸತ್ತ ವ್ಯಕ್ತಿಯೊಬ್ಬರು ತನ್ನ ಸ್ನೇಹಿತನ ಆಟೊದಲ್ಲೇ ಅಮ್ಮನ ಶವ ಸಾಗಿಸಿದರು.

73 ವರ್ಷ ವಯಸ್ಸಿನ ಶಾರದಮ್ಮ ಮಧುಮೇಹ ಹಾಗೂ ರಕ್ತದೊತ್ತಡದಿಂದ ಬಳಲುತ್ತಿದ್ದರು. ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಅವರನ್ನು ಸೋಮವಾರ ಬೆಳಿಗ್ಗೆ ಹಲಸೂರಿನಲ್ಲಿರುವ ಜೋಸೆಫ್ ಕ್ಲಿನಿಕ್‌ಗೆ ಕರೆದೊಯ್ಯಲಾಗಿತ್ತು. ಆಸ್ಪತ್ರೆಯ ಸಿಬ್ಬಂದಿ ತಮ್ಮಲ್ಲಿ ಆಮ್ಲಜನಕ ಸೌಲಭ್ಯದ ಹಾಸಿಗೆ ಲಭ್ಯವಿಲ್ಲ ಎಂದು ಹೇಳಿದ್ದರಿಂದ ಶಿವಕುಮಾರ್ ಅವರು ತಾಯಿಯೊಂದಿಗೆ ತಕ್ಷಣವೇ ಸಿಎಂಎಚ್ ಆಸ್ಪತ್ರೆಯತ್ತ ಹೊರಟರು. ಆಸ್ಪತ್ರೆ ತಲುಪುವಷ್ಟರಲ್ಲೇ ಅಮ್ಮನ ಉಸಿರು ನಿಂತಿತ್ತು. ಪರೀಕ್ಷೆ ನಡೆಸಿದ ವೈದ್ಯರು, ಆಕೆ ಮೃತಪಟ್ಟಿರುವುದಾಗಿ ಹೇಳಿದರು.

ತಾಯಿಯ ಶವವನ್ನು ಮಂಡ್ಯದ ಮಳವಳ್ಳಿಯಲ್ಲಿರುವ ಸ್ವಗ್ರಾಮಕ್ಕೆ ತೆಗೆದುಕೊಂಡು ಹೋಗಲು ನಿಶ್ಚಯಿಸಿದ್ದ ಶಿವಕುಮಾರ್, ಆಂಬುಲೆನ್ಸ್‌ಗಾಗಿ ಸತತವಾಗಿ 108 ಸಂಖ್ಯೆಗೆ ಕರೆಮಾಡಿದರು. ‘ನೀವು ಸಂಪರ್ಕಿಸಲು ಪ್ರಯತ್ನಿಸುತ್ತಿರುವ ಚಂದಾದಾರರು ಮತ್ತೊಂದು ಕರೆಯಲ್ಲಿ ನಿರತರಾಗಿದ್ದಾರೆ’ ಎಂಬ ಅಶರೀರವಾಣಿ ಕೇಳಿತೇ ಹೊರತು, ಸಂಪರ್ಕ ಸಾಧ್ಯವಾಗಲೇ ಇಲ್ಲ.

ನಾಯಂಡಹಳ್ಳಿ ಜಂಕ್ಷನ್ ಬಳಿ ಲಾಕ್‌ಡೌನ್ ಬಂದೋಬಸ್ತ್‌ಗೆ ನಿಯೋಜನೆಗೊಂಡಿದ್ದ ಪೊಲೀಸರು ಆಟೊ ತಡೆದು ಪ್ರಶ್ನಿಸಿದಾಗ ಶಿವಕುಮಾರ್ ಅವರು ಸ್ವಗ್ರಾಮಕ್ಕೆ ತಾಯಿಯ ಶವ ಸಾಗಿಸುತ್ತಿದ್ದ ವಿಷಯ ತಿಳಿಸಿದರು.

**ಪೊಲೀಸರ ಪ್ರಯತ್ನವೂ ಫಲಿಸಲಿಲ್ಲ:** ಪೊಲೀಸರು ಕೂಡಲೇ 108 ಸಂಖ್ಯೆಗೆ ಕರೆ ಮಾಡಿದರು. ಹೀಗಿದ್ದರೂ ಸಂಪರ್ಕ ಸಾಧ್ಯವಾಗಲಿಲ್ಲ. ತಮಗೆ ಪರಿಚಯವಿದ್ದ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಆಂಬುಲೆನ್ಸ್ ತರಿಸಲು ಪ್ರಯತ್ನಿಸಿದರು. ಆಂಬುಲೆನ್ಸ್ ಸಿಗಲಿಲ್ಲ. ಇದರಿಂದ ಅಸಹಾಯಕರಾದ ಅವರು ಆಟೊದಲ್ಲೇ ಶವ ಸಾಗಿಸಲು ಅನುಮತಿಕೊಟ್ಟರು.

‘ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ ಅಮ್ಮ ನನ್ನ ಮನೆಯಲ್ಲೇ ಉಳಿದುಕೊಂಡಿದ್ದರು. ಎರಡು ಆಸ್ಪತ್ರೆಗೆ ಅಲೆದರೂ ಆಕೆಯನ್ನು ಉಳಿಸಿಕೊಳ್ಳಲು ಆಗಲಿಲ್ಲ. ಶವ ಸಾಗಿಸಲು ಆಂಬುಲೆನ್ಸ್ ಕೂಡ ಸಿಗಲಿಲ್ಲ’ ಎಂದು ಶಿವಕುಮಾರ್ ಬೇಸರ ವ್ಯಕ್ತಪಡಿಸಿದರು.

ಆಟೊ ಹಿಂಬದಿ ಆಸನದಲ್ಲಿ ಕುಳಿತಿದ್ದ ಶಿವಕುಮಾರ್ ತಾಯಿಯ ಶವವನ್ನು ಎಡಗೈಯಿಂದ ಬಿಗಿಯಾಗಿ ಅಪ್ಪಿ ಹಿಡಿದಿದ್ದ ದೃಶ್ಯ ಮನಕಲಕುವಂತಿತ್ತು.

# ಹೈಕೋರ್ಟ್ ಕಣ್ಗಾವಲಿನ ತನಿಖೆಯೇ ನಡೆಯಲಿ

ಒಂದನೇ ಪುಟದಿಂದ...

ಸರ್ಕಾರದ ಕ್ರಮಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ನಿವೃತ್ತ ನ್ಯಾಯಮೂರ್ತಿಗಳಾದ ಎ.ಎನ್. ವೇಣುಗೋಪಾಲಗೌಡ ಮತ್ತು ಕೆ.ಎನ್. ಕೇಶವ ನಾರಾಯಣ ಅವರನ್ನೊಳಗೊಂಡ ಸಮಿತಿ ನೇಮಿಸಿದೆ.

ಈ ಬೆಳವಣಿಗೆಗಳ ಕುರಿತು ‘ಪ್ರಜಾವಾಣಿ’ ಜತೆ ಅಭಿಪ್ರಾಯ ಹಂಚಿಕೊಂಡಿರುವ ಕಾನೂನು ತಜ್ಞರು, ಹೈಕೋರ್ಟ್ ಉಸ್ತುವಾರಿಯ ತನಿಖೆಯೇ ಮುಂದುವರಿಯುವುದು ಸೂಕ್ತ ಎಂದು ಹೇಳಿದ್ದಾರೆ.


### ತರಾತುರಿಯ ತೀರ್ಮಾನ ಹಿಂಪಡೆಯಲಿ

ಒಂದನೇ ಪುಟದಿಂದ..

ಈ ವಿಚಾರದಲ್ಲಿ ಆಡಳಿತ ವ್ಯವಸ್ಥೆಯ ಗಂಭೀರ ನಿರ್ಲಕ್ಷ್ಯವನ್ನು ಗಣನೆಗೆ ತೆಗೆದುಕೊಂಡು ಹೈಕೋರ್ಟ್ ವಿಚಾರಣೆ ಆರಂಭಿಸುತ್ತಿದ್ದಂತೆಯೇ ಸರ್ಕಾರ ಆಯೋಗ ರಚಿಸಿರುವುದು ಸಂಶಯಾಸ್ಪದ. ‘ಸರ್ಕಾರದ ಕಾರ್ಯವೈಖರಿ ಸರಿ ಇಲ್ಲ’ ಎಂದು ನ್ಯಾಯಾಲಯ ಹೇಳಿದ ಬಳಿಕ ಆಯೋಗ ನೇಮಿಸಿರುವುದು ಸರಿಯಲ್ಲ. ಹೈಕೋರ್ಟ್ ನೇಮಿಸಿದ ಸಮಿತಿಯೇ ತನಿಖೆ ನಡೆಸಬೇಕು.

**ಬಾನು ಮುಷ್ತಾಕ್,** ವಕೀಲೆ ಮತ್ತು ಬರಹಗಾರ್ತಿ

### ರಾಜ್ಯ ಸರ್ಕಾರದ ನಡೆ ತಪ್ಪು



ಈ ಪ್ರಕರಣದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ತನಿಖೆಗೆ ಆದೇಶಿಸುವ ಇಂಗಿತವನ್ನು ಹೈಕೋರ್ಟ್ ವ್ಯಕ್ತಪಡಿಸಿದ ಬಳಿಕ ರಾಜ್ಯ ಸರ್ಕಾರ ತರಾತುರಿಯಲ್ಲಿ ನ್ಯಾಯಾಂಗ ತನಿಖೆಗೆ ಆಯೋಗ ನೇಮಿಸಿರುವುದು ತಪ್ಪು. ಹೈಕೋರ್ಟ್ ಸಮಿತಿಯಲ್ಲಿರುವ ನ್ಯಾ. ಎ.ಎನ್. ವೇಣುಗೋಪಾಲ ಗೌಡ, ನ್ಯಾ. ಕೆ.ಎನ್. ಕೇಶವ ನಾರಾಯಣ ಮತ್ತು ರಾಜ್ಯ ಸರ್ಕಾರ ನೇಮಿಸಿರುವ ಆಯೋಗದ ಮುಖ್ಯಸ್ಥ ಬಿ.ಎ. ಪಾಟೀಲ್ ಮೂವರೂ ಉತ್ತಮ ನ್ಯಾಯಾಧೀಶರೇ. ಆದರೆ, ಒಂದೇ ವಿಚಾರಕ್ಕೆ ಎರಡು ತನಿಖೆ ನಡೆಸುವುದು ಸರಿಯಾದ ಕ್ರಮವಲ್ಲ.

ಹೈಕೋರ್ಟ್ ತೀರ್ಮಾನದಿಂದಾಗಿ ಸರ್ಕಾರ, ಆಯೋಗ ರಚನೆಯನ್ನು ಹಿಂದಕ್ಕೆ ಪಡೆಯಬಹುದು. ನ್ಯಾ.ಬಿ.ಎ. ಪಾಟೀಲ್ ಅವರೇ ಹಿಂದೆ ಸರಿಯಲೂಬಹುದು. ತೀರ್ಮಾನಗಳ ಸಂಘರ್ಷಕ್ಕೆ ಎಡೆಮಾಡುವ ಪರ್ಯಾಯ ತನಿಖೆಗಳನ್ನು ಮುಂದುವರಿಸುವುದು ಸೂಕ್ತವಲ್ಲ.

**ಉದಯ್ ಹೊಳ್ಳ,** ಹಿರಿಯ ವಕೀಲ

### ತರಾತುರಿಯಲ್ಲಿ ಆಯೋಗ ರಚಿಸಿದ್ದು ಏಕೆ?




ಚಾಮರಾಜನಗರ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಸಂಭವಿಸಿದ ದುರಂತ ರಾಜ್ಯ ಸರ್ಕಾರದ ಕರ್ತವ್ಯಲೋಪಕ್ಕೆ ಸಾಕ್ಷ್ಯ ಒದಗಿಸಿದೆ. ಕೋವಿಡ್ ಜನರನ್ನು ಕಾಡುತ್ತಿರುವ ಸಂಕಷ್ಟದ ಸಂದರ್ಭದಲ್ಲಿ ಸರ್ಕಾರ ಸರಿಯಾಗಿ ಕೆಲಸ ಮಾಡಿಲ್ಲ ಎಂಬ ಕಾರಣಕ್ಕಾಗಿಯೇ ಹೈಕೋರ್ಟ್ ಮಧ್ಯಪ್ರವೇಶ ಮಾಡಿದೆ. 24 ಜನರ ಸಾವಿಗೆ ಸಂಭವಿಸಿದ ಗಂಭೀರ ಪ್ರಕರಣವನ್ನು ತನಿಖೆಗೆ ಒಪ್ಪಿಸುವ ಕುರಿತು ಹೈಕೋರ್ಟ್ ವಿಚಾರಣೆ ನಡೆಸುತ್ತಿತ್ತು. ಆಗಲೇ, ತರಾತುರಿಯಲ್ಲಿ ಆಯೋಗ ನೇಮಿಸುವ ಅಗತ್ಯ ಏನಿತ್ತು?

ಸರ್ಕಾರ ತನ್ನ ತಪ್ಪನ್ನು ಅರಿತುಕೊಂಡು ಆಯೋಗ ರಚನೆಯ ಆದೇಶವನ್ನು ವಾಪಸ್ ಪಡೆಯಬೇಕು. ಹೈಕೋರ್ಟ್ ಉಸ್ತುವಾರಿಯಲ್ಲಿ ನಿವೃತ್ತ ನ್ಯಾಯಮೂರ್ತಿಗಳ ಸಮಿತಿ ತನಿಖೆ ನಡೆಸಲು ಮುಕ್ತ ಅವಕಾಶ ಕಲ್ಪಿಸಬೇಕು. ಆಗ ಮಾತ್ರ ದುರ್ಘಟನೆಯ ಹಿಂದಿರುವ ಎಲ್ಲ ಸತ್ಯಗಳೂ ಹೊರಬರಲು ಸಾಧ್ಯ.

**ಬಿ.ಟಿ. ವೆಂಕಟೇಶ್,** ಹೈಕೋರ್ಟ್ ವಕೀಲ

### ಹೈಕೋರ್ಟ್ ತನಿಖೆಗೆ ತೂಕ ಹೆಚ್ಚು



ತನ್ನ ಮೇಲ್ವಿಚಾರಣೆಯಲ್ಲಿಯೇ ಪ್ರಕರಣದ ತನಿಖೆ ನಡೆಸಲು ಖುದ್ದಾಗಿ ಹೈಕೋರ್ಟ್ ಮುಂದಾದ ಮೇಲೂ ಸರ್ಕಾರದಿಂದ ಪ್ರತ್ಯೇಕ ನ್ಯಾಯಾಂಗ ತನಿಖೆ ಅಗತ್ಯ ಇರಲಿಲ್ಲ. ಯಾರು ಏನೇ ಮಾಡಿದರೂ ಹೈಕೋರ್ಟ್ ಉಸ್ತುವಾರಿಯಲ್ಲಿ ನಡೆಯುವ ತನಿಖೆಗೇ ತೂಕ ಹೆಚ್ಚು. ಸರ್ಕಾರದ ತನಿಖಾ ಆಯೋಗ ಏನೇ ವರದಿ ಕೊಟ್ಟರೂ ಕೊನೆಯಲ್ಲಿ ನಿಲ್ಲುವುದು ಹೈಕೋರ್ಟ್ ನೀಡುವ ವರದಿಯೇ. ಜೊತೆಗೆ ಸರ್ಕಾರ ರಚಿಸಿದ ಆಯೋಗದ ವರದಿಯನ್ನು ಹೈಕೋರ್ಟ್ ತಿರಸ್ಕರಿಸಲೂಬಹುದು. ಎರಡೂ ವರದಿಗಳು ಒಂದೇ ರೀತಿ ಇರುತ್ತವೆಯೇ ಅಥವಾ ಬೇರೆ ಅಂಶಗಳನ್ನು ಒಳಗೊಂಡಿರುತ್ತವೆಯೇ ನೋಡೋಣ.

ಆಡಳಿತಾತ್ಮಕ ಲೋಪವೇ ಚಾಮರಾಜನಗರದ ಅನಾಹುತಕ್ಕೆ ಕಾರಣ. ಇದೊಂದು ನಾಚಿಕೆಗೇಡಿನ ಸಂಗತಿ. ಆಯಾ ಇಲಾಖೆಗಳು ಎಚ್ಚರ ವಹಿಸಿದ್ದರೆ, ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರೆ ಇಂಥ ಘಟನೆನು ತಪ್ಪಿಸಬಹುದಿತ್ತು.

**ಡಾ.ಎಚ್.ಸುದರ್ಶನ್,** ಆರೋಗ್ಯ ಕಾರ್ಯಪಡೆಯ ಮಾಜಿ ಅಧ್ಯಕ್ಷ,ವಿವೇಕಾನಂದ ಗಿರಿಜನ ಕಲ್ಯಾಣಕೇಂದ್ರದ ಗೌರವ ಕಾರ್ಯದರ್ಶಿ, ಬಿಳಿಗಿರಿರಂಗನಬೆಟ್ಟ



ತಾಯಿಯೊಂದಿಗೆ ಗರ್ಭಿಣಿ ಲಕ್ಷ್ಮಿ ಪೂಜಾರ

## ಚಿಕಿತ್ಸೆಗೆ 6 ಕಿ.ಮೀ. ನಡೆದ ಗರ್ಭಿಣಿ

ಪ್ರಜಾವಾಣಿ ವಾರ್ತೆ

**ಕೊಪ್ಪಳ:** ನರೇಗಲ್ ಗ್ರಾಮದ ಗರ್ಭಿಣಿ ಲಕ್ಷ್ಮಿ ಪೂಜಾರ ಚಿಕಿತ್ಸೆಗಾಗಿ ತಮ್ಮ ತಾಯಿಯೊಂದಿಗೆ ಸೋಮವಾರ 6 ಕಿ.ಮೀ ನಡೆದುಕೊಂಡು ಇಲ್ಲಿಗೆ ಬಂದರು.

ನರೇಗಲ್ ಗ್ರಾಮದಿಂದ ಕೊಪ್ಪಳಕ್ಕೆ ವಾಹನ ಸೌಲಭ್ಯವಿಲ್ಲದ ಕಾರಣ ಬಿಸಿಲಿನಲ್ಲಿಯೇ ನಡೆದುಕೊಂಡು ಬಂದಿದ್ದರು. ಎತ್ತ ಕಡೆ ಹೋಗಬೇಕು ಎಂದು ತಿಳಿಯದೇ ಇಲ್ಲಿಯ ರಸ್ತೆಯೊಂದರಲ್ಲಿ ನಿಂತಿದ್ದರು.

ಅವರನ್ನು ಕಂಡ ಮಾಧ್ಯಮದವರು ತಮ್ಮ ವಾಹನದಲ್ಲಿ ಮಂಗಳಾ ಆಸ್ಪತ್ರೆಗೆ ಸೇರಿಸಿದರು.

ಬಿಜೆಪಿಯ ಹತ್ತು, ಎಜಿಪಿಯ ಎರಡು, ಯುಪಿಪಿಎಲ್‌ನ ಒಬ್ಬರಿಗೆ ಸಚಿವ ಸಂಪುಟದಲ್ಲಿ ಸ್ಥಾನ

# ಹಿಮಂತ ಶರ್ಮಾ ಅಸ್ಸಾಂ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

**ಗುವಾಹಟಿ:** ಬಿಜೆಪಿಯ ಹಿರಿಯ ಮುಖಂಡ ಹಿಮಂತ ಬಿಸ್ವ ಶರ್ಮಾ ಅವರು ಅಸ್ಸಾಂನ 15ನೇ ಮುಖ್ಯಮಂತ್ರಿಯಾಗಿ ಸೋಮವಾರ ಮಧ್ಯಾಹ 12 ಗಂಟೆಗೆ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಜ್ಯಪಾಲ ಜಗದೀಶ್ ಮುಖಿ ಅವರು ಶರ್ಮಾ ಮತ್ತು ಇತರ 13 ಸಚಿವರಿಗೆ ಪ್ರಮಾಣವಚನ ಬೋಧಿಸಿದರು. ವೈಷ್ಣವ ಸಂಸ್ಕೃತಿಯ ಕೇಂದ್ರವಾದ ಶಂಕರದೇವ್ ಕಲಾಕ್ಷೇತ್ರದಲ್ಲಿ ಕಾರ್ಯಕ್ರಮ ನಡೆಯಿತು.

ಸಚಿವ ಸ್ಥಾನ ಪಡೆದುಕೊಂಡ 13 ಶಾಸಕರ ಪೈಕಿ ಬಿಜೆಪಿಯ ಮಿತ್ರಪಕ್ಷಗಳಾದ ಅಸ್ಸಾಂ ಗಣ ಪರಿಷತ್‌ನ (ಎಜಿಪಿ) ಇಬ್ಬರು ಮತ್ತು ಯುನೈಟೆಡ್ ಪೀಪಲ್ಸ್ ಪಾರ್ಟಿ ಲಿಬರಲ್(ಯುಪಿಪಿಎಲ್)ನ ಒಬ್ಬರು ಸೇರಿದ್ದಾರೆ. ಸರ್ವಾನಂದ ಸೋನೊವಾಲ್ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದ ಏಳು ಮಂದಿಗೆ ಹೊಸ ಸಚಿವ ಸಂಪುಟದಲ್ಲಿಯೂ ಅವಕಾಶ ಸಿಕ್ಕಿದೆ.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಸಚಿವ ಜಿತೇಂದ್ರ ಸಿಂಗ್, ಮಾಜಿ ಮುಖ್ಯಮಂತ್ರಿ ಸರ್ವಾನಂದ ಸೋನೊವಾಲ್, ತ್ರಿಪುರಾ ಮುಖ್ಯಮಂತ್ರಿ ವಿಪ್ಲವ್ ಕುಮಾರ್ ದೇವ್, ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ, ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್, ಬೋಡೊಲ್ಯಾಂಡ್ ಪೀಪಲ್ಸ್ ಫ್ರಂಟ್‌ನ ಮುಖ್ಯಸ್ಥ ಹಗ್ರಾಮ ಮೊಹಿಲಾರಿ ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

2014ರ ಲೋಕಸಭಾ ಚುನಾವಣೆಯಿಂದಲೇ ಬಿಜೆಪಿ ಅಸ್ಸಾಂನಲ್ಲಿ ನಡೆಸಿದ ಅಸ್ಮಿತೆ ಕೇಂದ್ರಿತ ರಾಜಕಾರಣದ ಮುಖವಾಗಿ ಸೋನೊವಾಲ್ ಇದ್ದರು. ಆದರೆ, 2015ರಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ ಶರ್ಮಾ ಅವರು ಈಶಾನ್ಯ ಭಾಗದಲ್ಲಿ ಬಿಜೆಪಿ ನೆಲೆ ಗಟ್ಟಿಗೊಳಿಸಲು ನೆರವಾಗಿದ್ದಾರೆ. ಹಾಗಾಗಿ, ಈ ಇಬ್ಬರ ನಡುವೆ ಮುಖ್ಯಮಂತ್ರಿ ಹುದ್ದೆಗೆ ಸ್ಪರ್ಧೆ ಇತ್ತು.

ಈ ಬಾರಿ ಚುನಾವಣೆಗೆ ಮುಂಚೆಯೇ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಬಿಜೆಪಿ ಘೋಷಿಸಿರಲಿಲ್ಲ. ಶರ್ಮಾ ಅವರನ್ನು ಈ ಹುದ್ದೆಗೆ ಪರಿಗಣಿಸುವ ಸಾಧ್ಯತೆ ಇದೆ ಎಂಬ ಸುಳಿವನ್ನು ಇದು ನೀಡಿತ್ತು.

ಕೋವಿಡ್ ಪರಿಸ್ಥಿತಿಯನ್ನು ನಿಭಾಯಿಸುವುದೇ ಸರ್ಕಾರದ ಆದ್ಯತೆ ಎಂದು ಪ್ರಮಾಣವಚನದ ಬಳಿಕ ಮಾತನಾಡಿದ ಶರ್ಮಾ ತಿಳಿಸಿದ್ದಾರೆ. ಸಣ್ಣ ಸಾಲ ಮನ್ನಾ ಮುಂತಾದ ಪ್ರಣಾಳಿಕೆಯ ಭರವಸೆಗಳನ್ನೂ ಈಡೇರಿಸಲಾಗುವುದು ಎಂದಿದ್ದಾರೆ. ಉಲ್ಫಾ ನಾಯಕ ಪರೇಶ್ ಬರುವಾಗೆ ಮಾತುಕತೆಗೆ ಬರುವಂತೆ ಕರೆ ಕೊಟ್ಟಿದ್ದಾರೆ.



ಪ್ರಮಾಣವಚನ ಸಮಾರಂಭಕ್ಕೆ ಮುನ್ನ ಹಿಮಂತ ಬಿಸ್ವ ಶರ್ಮಾ ಮತ್ತು ಹೆಂಡತಿ ರಿಂಕಿ ಶರ್ಮಾ ಪಿಟಿಐ ಚಿತ್ರ

ಪ್ರಜಾ ಮತ
ಜನತಂತ್ರದ ಹಬ್ಬ 2021

## ಪಳನಿಸ್ವಾಮಿ ವಿರೋಧ ಪಕ್ಷದ ನಾಯಕ: ಪನ್ನೀರಸೆಲ್ವಂ ವಿರೋಧ




**ಚೆನ್ನೈ:** ಪಕ್ಷದ ಸಂಚಾಲಕ ಒ. ಪನ್ನೀರಸೆಲ್ವಂ ಅವರ ತೀವ್ರ ವಿರೋಧದ ನಡುವೆಯೂ ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರನ್ನು ಎಐಎಡಿಎಂಕೆ ಶಾಸಕಾಂಗ ಪಕ್ಷದ ನಾಯಕನನ್ನಾಗಿ ಸೋಮವಾರ ಆಯ್ಕೆ ಮಾಡಲಾಗಿದೆ. ಹೀಗಾಗಿ ತಮಿಳುನಾಡು ವಿಧಾನಸಭೆಯಲ್ಲಿ ಅವರು ವಿರೋಧಪಕ್ಷದ ನಾಯಕ ಆಗಲಿದ್ದಾರೆ.

ಪಳನಿಸ್ವಾಮಿ ಅವರ ಆಯ್ಕೆ ನಡೆಯುತ್ತಿದ್ದಂತೆಯೇ ಉಳಿದ ಶಿಷ್ಟಾಚಾರಗಳು ಪೂರ್ಣಗೊಳ್ಳುವುದನ್ನೂ ಕಾಯದೆ, ಪನ್ನೀರಸೆಲ್ವಂ ಅವರು ಪಕ್ಷದ ಕಚೇರಿಯಿಂದ ಹೊರನಡೆದಿದ್ದಾರೆ ಎಂದು ತಿಳಿದುಬಂದಿದೆ. ಆದರೆ, 'ಪಳನಿಸ್ವಾಮಿ ಅವರನ್ನು ಶಾಸಕಾಂಗ ಪಕ್ಷದ ನಾಯಕನಾಗಿ 'ಅವಿರೋಧವಾಗಿ' ಆಯ್ಕೆ ಮಾಡಲಾಗಿದೆ' ಎಂದು ಪಕ್ಷದ ಪ್ರಕಟಣೆ ತಿಳಿಸಿದೆ. ಈ ಪ್ರಕಟಣೆಯಲ್ಲಿ ಪಳನಿಸ್ವಾಮಿ ಹಾಗೂ ಪನ್ನೀರಸೆಲ್ವಂ ಇಬ್ಬರೂ ಸಹಿ ಮಾಡಿರುವುದು ಕುತೂಹಲಕರವಾಗಿದೆ.

'ಮಾಜಿ ಮುಖ್ಯಮಂತ್ರಿಯ ಉಮೇದುವಾರಿಕೆಯನ್ನು ಪನ್ನೀರಸೆಲ್ವಂ ಅವರು ವಿರೋಧಿಸಿದ್ದರೂ, ಪಕ್ಷದ 66ರಲ್ಲಿ 60 ಶಾಸಕರು ಪಳನಿಸ್ವಾಮಿ ಅವರನ್ನು ಬೆಂಬಲಿಸಿದ್ದರು. ಈ ಮಧ್ಯದಲ್ಲಿ ಪನ್ನೀರಸೆಲ್ವಂ ಅವರು ಮಾಜಿ ಸ್ಪೀಕರ್ ಪಿ. ಧನಪಾಲ್ ಅವರ ಹೆಸರನ್ನು ಸೂಚಿಸಿದರು. ಆದರೆ ಪಳನಿಸ್ವಾಮಿ ಅವರ ಗುಂಪು ಇದನ್ನು ಒಪ್ಪಲಿಲ್ಲ. ಕೊನೆಗೆ ಪಳನಿಸ್ವಾಮಿ ಅವರನ್ನೇ ನಾಯಕರನ್ನಾಗಿ ಆಯ್ಕೆ ಮಾಡಲಾಯಿತು. ಇದಾಗುತ್ತಿದ್ದಂತೆಯೇ ಪನ್ನೀರಸೆಲ್ವಂ ಅವರು ಸಭಾಂಗಣದಿಂದ ತೆರಳಿದರು' ಎಂದು ಶಾಸಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಶಾಸಕಾಂಗಪಕ್ಷದ ನಾಯಕನ ಆಯ್ಕೆಗೆ ಶುಕ್ರವಾರವೂ ಒಂದು ಸಭೆ ನಡೆದಿತ್ತು. ಆ ಸಭೆಯಲ್ಲಿ ಇಬ್ಬರು ನಾಯಕರ ಮಧ್ಯೆ ಮಾತಿನ ಚಕಮಕಿ ನಡೆದಿತ್ತು ಎಂದು ಮೂಲಗಳು ತಿಳಿಸಿವೆ.

## ವಿರೋಧ ಪಕ್ಷದ ನಾಯಕನಾಗಿ ಸುವೇಂದು ಆಯ್ಕೆ



**ಕೋಲ್ಕತ್ತ:** ನಂದಿಗ್ರಾಮ ಶಾಸಕ ಸುವೇಂದು ಅಧಿಕಾರಿ ಅವರನ್ನು ಪಶ್ಚಿಮ ಬಂಗಾಳ ವಿಧಾನಸಭೆಯ ವಿರೋಧ ಪಕ್ಷದ ನಾಯಕನನ್ನಾಗಿ ಬಿಜೆಪಿ ಶಾಸಕರು ಸೋಮವಾರ ಆಯ್ಕೆ ಮಾಡಿದ್ದಾರೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಸುವೇಂದು ಅವರು ನಂದಿಗ್ರಾಮ ಕ್ಷೇತ್ರದಲ್ಲಿ 1,900 ಮತಗಳ ಅಂತರದಿಂದ ಸೋಲಿಸಿದ್ದಾರೆ.

ಮಮತಾ ನೇತೃತ್ವದ ಟಿಎಂಸಿಯಲ್ಲಿಯೇ ಇದ್ದ ಸುವೇಂದು ಅವರು ಚುನಾವಣೆಗೆ ಮುನ್ನ ಬಿಜೆಪಿ ಸೇರಿದ್ದರು.

ಸುವೇಂದು ಅವರನ್ನು ವಿರೋಧ ಪಕ್ಷ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಕೇಂದ್ರ ಸಚಿವ ರವಿಶಂಕರ್ ಪ್ರಸಾದ್ ಅವರು ಕೋಲ್ಕತ್ತದ ಬಿಜೆಪಿ ಕಚೇರಿಯಲ್ಲಿ ಪ್ರಕಟಿಸಿದರು.

'ಹಿಂಸೆಯಿಂದ ಮುಕ್ತವಾದ ಶಾಂತಿಯುತ ಪಶ್ಚಿಮ ಬಂಗಾಳ ಸೃಷ್ಟಿಸುವ ಗುರಿಗೆ ಬದ್ಧನಾಗಿದ್ದೇನೆ. ರಚನಾತ್ಮಕ ಕೆಲಸಗಳಿಗೆ ಸರ್ಕಾರಕ್ಕೆ ನಾವು ಸಹಕರಿಸಲಿದ್ದೇವೆ' ಎಂದು ಸುವೇಂದು ಹೇಳಿದ್ದಾರೆ. ಆದರೆ, ಪಶ್ಚಿಮ ಬಂಗಾಳದಲ್ಲಿನ ಈಗಿನ ಹಿಂಸಾಚಾರದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ನಂದಿಗ್ರಾಮದ ಸೋಲನ್ನು ಉಲ್ಲೇಖಿಸಿ ಮಮತಾ ಅವರನ್ನು ಸುವೇಂದು ಅವರು ಹಂಗಿಸಿದ್ದಾರೆ. ಪಶ್ಚಿಮ ಬಂಗಾಳ ರಾಜಕಾರಣದಲ್ಲಿ ಸೋತ ಬಳಿಕವೂ ಮುಖ್ಯಮಂತ್ರಿಯಾದ ಮೊದಲ ವ್ಯಕ್ತಿ ಮಮತಾ ಎಂದು ಅವರು ಹೇಳಿದ್ದಾರೆ.

ಹಿರಿಯ ಮುಖಂಡ ಮುಕುಲ್ ರಾಯ್ ಅವರು ಸುವೇಂದು ಅವರ ಹೆಸರನ್ನು ಶಾಸಕಾಂಗ ಪಕ್ಷದ ನಾಯಕನ ಸ್ಥಾನಕ್ಕೆ ಸೂಚಿಸಿದರು. 22 ಶಾಸಕರು ಅದನ್ನು ಬೆಂಬಲಿಸಿದರು. ಉಳಿದ ಶಾಸಕರು ಯಾವುದೇ ಹೆಸರು ಸೂಚಿಸದ ಕಾರಣ ಸುವೇಂದು ಅವರನ್ನು ಆಯ್ಕೆ ಮಾಡಲಾಯಿತು. ಪಶ್ಚಿಮ ಬಂಗಾಳ ವಿಧಾನಸಭೆಗೆ ಬಿಜೆಪಿಯ 77 ಮಂದಿ ಆಯ್ಕೆ ಆಗಿದ್ದಾರೆ.

# ಮಮತಾ ಸಂಪುಟಕ್ಕೆ 44 ಸಚಿವರ ಸೇರ್ಪಡೆ

ಪ್ರಜಾವಾಣಿ ವಾರ್ತೆ

**ಕೋಲ್ಕತ್ತ:** ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ನೇತೃತ್ವದ ಸಂಪುಟಕ್ಕೆ 44 ಸಚಿವರು ಸೋಮವಾರ ಸೇರ್ಪಡೆಯಾಗಿದ್ದಾರೆ. ಹಿಂದಿನ ಸಂಪುಟಕ್ಕೆ ಹೋಲಿಸಿದರೆ ಹಲವು ಬದಲಾವಣೆಗಳನ್ನು ಸಂಪುಟದಲ್ಲಿ ಗುರುತಿಸಬಹುದಾಗಿದೆ.

ಗೃಹ ಮತ್ತು ಗುಡ್ಡಗಾಡು ವ್ಯವಹಾರ, ಸಿಬ್ಬಂದಿ ಮತ್ತು ಆಡಳಿತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಭೂಮಿ ಮತ್ತು ಭೂ ಸುಧಾರಣೆ, ಮಾಹಿತಿ ಮತ್ತು ಸಂಸ್ಕೃತಿ ವ್ಯವಹಾರ, ಉತ್ತರ ಬಂಗಾಳ ಅಭಿವೃದ್ಧಿಯಂತಹ ಮಹತ್ವದ ಖಾತೆಗಳನ್ನು ಮಮತಾ ಅವರೇ ಇರಿಸಿಕೊಂಡಿದ್ದಾರೆ.

ಹೊಸ ಮುಖಗಳಾದ ಅಖಿಲ್ ಗಿರಿ ಅವರು ಸ್ವತಂತ್ರ ಹೊಣೆಗಾರಿಕೆಯ ರಾಜ್ಯ ಖಾತೆ ಸಚಿವರಾಗಿದ್ದಾರೆ. ಅವರಿಗೆ ಮೀನುಗಾರಿಕೆ ಖಾತೆ ಸಿಕ್ಕಿದೆ. ರತನ್ ದೇ ನಾಗ್ ಅವರು ಪರಿಸರ, ಹುಮಾಯೂನ್ ಕಬೀರ್ ಅವರು ತಾಂತ್ರಿಕ ಶಿಕ್ಷಣ, ಸಿಯುಲಿ ಸಹಾ ಅವರು ಪಂಚಾಯಿತಿ ಮತ್ತು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರಾಗಿದ್ದಾರೆ.

ಅತ್ಯಂತ ಹಿರಿಯ ಶಾಸಕ ಸುಬ್ರತಾ ಮುಖರ್ಜಿ ಅವರು ಪಂಚಾಯಿತಿ ಮತ್ತು ಗ್ರಾಮೀಣಾಭಿವೃದ್ಧಿ ಖಾತೆಯಲ್ಲಿಯೇ ಮುಂದುವರಿಯಲಿದ್ದಾರೆ. ಅನಾರೋಗ್ಯದಿಂದ ಚುನಾವಣೆಗೆ ಸ್ಪರ್ಧಿಸದ ಅಮಿತ್ ಮಿತ್ರಾ ಅವರು ಹಣಕಾಸು ಸಚಿವರಾಗಿ ಮುಂದುವರಿಯಲಿದ್ದಾರೆ.



**ಮತದಾನವು ವ್ಯಕ್ತಿಯ ಸಾವಿಗೆ ಕಾರಣವಾಗುತ್ತದೆ ಎಂದಾದರೆ ಪ್ರಜಾಪ್ರಭುತ್ವವು ಸಾಯುತ್ತಿದೆ ಎಂಬುದರ ಸೂಚನೆ ಅದು**

**ಜಗದೀಪ್ ಧನ್‌ಕರ್,** ಪಶ್ಚಿಮ ಬಂಗಾಳ ರಾಜ್ಯಪಾಲ

**ಮುಖ್ಯಾಂಶಗಳು**

- ಕೋವಿಡ್‌ನಿಂದಾಗಿ 6 ನಿಮಿಷದಲ್ಲಿ ಕಾರ್ಯಕ್ರಮ ಮುಕ್ತಾಯ
- ಮಮತಾ ಸಂಪುಟದಲ್ಲಿ ಅವರು ಸೇರಿ 9 ಮಹಿಳೆಯರು

## ಸರ್ಕಾರದ ವಿರುದ್ಧ ಹರಿಹಾಯ್ದ ರಾಜ್ಯಪಾಲ

ರಾಜ್ಯ ಸರ್ಕಾರದ ವಿರುದ್ದ ರಾಜ್ಯಪಾಲ ಜಗದೀಪ್ ಧನ್‌ಕರ್ ಅವರು ಸಚಿವರಿಗೆ ಪ್ರಮಾಣ ವಚನ ಬೋಧಿಸಿದ ಕೆಲವೇ ನಿಮಿಷಗಳ ಬಳಿಕ ಹರಿಹಾಯ್ದಿದ್ದಾರೆ. ಚುನಾವಣೋತ್ತರ ಹಿಂಸಾಚಾರ ನಡೆದ ಸ್ಥಳಗಳಿಗೆ ಭೇಟಿ ನೀಡುವುದಾಗಿಯೂ ಹೇಳಿದ್ದಾರೆ.

ಮತದ ಹಕ್ಕು ಚಲಾಯಿಸಿದ್ದಕ್ಕಾಗಿ ಜನರು ಜೀವ ಕೈಯಲ್ಲಿ ಹಿಡಿದು ಪ್ರಾರ್ಥನೆ ಮಾಡಬೇಕಾದ ಸ್ಥಿತಿ ರಾಜ್ಯದಲ್ಲಿ ನಿರ್ಮಾಣ ಆಗಿದೆ. ಚುನಾವಣೋತ್ತರ ಹಿಂಸಾಚಾರದ ಸ್ಥಿತಿಯು ಆಘಾತಕಾರಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

# ಪ್ರಮಾಣಪತ್ರ ಸೋರಿಕೆ: 'ಸುಪ್ರೀಂ' ಅತೃಪ್ತಿ

**ನವದೆಹಲಿ (ಪಿಟಿಐ):** ಕೋವಿಡ್–19ರ ಎರಡನೇ ಅಲೆಯ ನಿರ್ವಹಣೆಗೆ ಸಂಬಂಧಿಸಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಭಾನುವಾರ ರಾತ್ರಿ ಪ್ರಮಾಣಪತ್ರ ಸಲ್ಲಿಸಿದೆ. ಆದರೆ, ಈ ಪ್ರಮಾಣಪತ್ರವು ಮಾಧ್ಯಮಕ್ಕೆ ಸೋರಿಕೆ ಆಗಿದ್ದರ ಬಗ್ಗೆ ನ್ಯಾಯಮೂರ್ತಿ ಚಂದ್ರಚೂಡ್ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಈ ಪ್ರಮಾಣಪತ್ರವು ನನಗೆ ಭಾನುವಾರ ತಡರಾತ್ರಿ ಸಿಕ್ಕಿತು. ಆದರೆ, ಅದಕ್ಕೂ ಮೊದಲು ಪ್ರಮಾಣಪತ್ರವನ್ನು ನಾನು ಮಾಧ್ಯಮದಲ್ಲಿ ಓದಿದ್ದೇನೆ. ಪೀಠದಲ್ಲಿರುವ ನ್ಯಾಯಮೂರ್ತಿ ಎಲ್.ಎನ್. ರಾವ್ ಅವರಿಗೆ ಪ್ರಮಾಣಪತ್ರದ ಪ್ರತಿ ಸಿಕ್ಕಿಯೇ ಇಲ್ಲ' ಎಂದು ಚಂದ್ರಚೂಡ್ ಹೇಳಿದರು.

ಪ್ರಮಾಣಪತ್ರದ ಪ್ರತಿಯನ್ನು ರಾಜ್ಯಗಳಿಗೆ ನೀಡಲಾಗಿದೆ. ಹಾಗಾಗಿ, ಎಲ್ಲಿಂದ ಸೋರಿಕೆ ಆಯಿತು ಎಂಬುದನ್ನು ಪತ್ತೆ ಮಾಡುವುದು ಕಷ್ಟ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪ್ರತಿಕ್ರಿಯೆ ನೀಡಿದರು.

**ಗುರುತಿನ ಚೀಟಿ ಬೇಕಿಲ್ಲ:** ಗುರುತಿನ ಚೀಟಿ ಮತ್ತು ಕೋವಿಡ್ ಪರೀಕ್ಷೆಯ ವರದಿ ಇಲ್ಲ ಎಂಬ ಕಾರಣಕ್ಕೆ ರೋಗಿಗಳನ್ನು ದಾಖಲಿಸದಿರಬಾರದು ಎಂಬ ಸೂಚನೆಯನ್ನು ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಆಸ್ಪತ್ರೆಗಳಿಗೆ ನೀಡಲಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರವು ತಿಳಿಸಿದೆ.

ಕೋವಿಡ್ ಪ್ರಕರಣಗಳ ಸಮರ್ಪಕ ನಿರ್ವಹಣೆಗಾಗಿ ಮೂರು ಹಂತಗಳ ಆರೋಗ್ಯ ಮೂಲಸೌಕರ್ಯ ರೂಪಿಸುವಂತೆ ರಾಜ್ಯಗಳಿಗೆ ಸೂಚನೆ ನೀಡಲಾಗಿದೆ ಎಂದೂ ನ್ಯಾಯಾಲಯಕ್ಕೆ ಮಾಹಿತಿ ನೀಡಲಾಗಿದೆ.

ಸೌಮ್ಯ ಸ್ವರೂಪದ ಲಕ್ಷಣಗಳನ್ನು ಹೊಂದಿರುವವರಿಗಾಗಿ ಹಾಸ್ಟೆಲ್, ಹೋಟೆಲ್, ಶಾಲೆ, ಸ್ಟೇಡಿಯಂ ಮತ್ತು ಲಾಡ್ಜ್‌ಗಳನ್ನು ಕೋವಿಡ್ ಆರೈಕೆ ಕೇಂದ್ರಗಳಾಗಿ ಪರಿವರ್ತಿಸಬೇಕು. ಸಮುದಾಯ ಆರೋಗ್ಯ ಕೇಂದ್ರಗಳನ್ನೂ ಅಗತ್ಯ ಬಿದ್ದರೆ ಕೋವಿಡ್ ಆರೈಕೆ ಕೇಂದ್ರಗಳಾಗಿ ರೂಪಿಸಬೇಕು. ಮಧ್ಯಮ ಸ್ವರೂಪದ ಲಕ್ಷಣಗಳುಳ್ಳ ರೋಗಿಗಳಿಗಾಗಿ ಕೋವಿಡ್ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕು. ಇಡೀ ಆಸ್ಪತ್ರೆ ಅಥವಾ ಆಸ್ಪತ್ರೆಯ ಒಂದು ವಿಭಾಗವನ್ನು ಇದಕ್ಕಾಗಿ ಮೀಸಲು ಇರಿಸಬೇಕು ಎಂಬ ಸೂಚನೆ ನೀಡಲಾಗಿದೆ ಎಂದು ಪ್ರಮಾಣಪತ್ರದಲ್ಲಿ ವಿವರಿಸಲಾಗಿದೆ.

## ವಿಚಾರಣೆ ಮುಂದಕ್ಕೆ

ಕೋವಿಡ್–19ರ ನಿರ್ವಹಣೆಗೆ ಸಂಬಂಧಿಸಿ ಸುಪ್ರೀಂ ಕೋರ್ಟ್‌ನ ಸ್ವಯಂ ಪ್ರೇರಿತ ವಿಚಾರಣೆ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಕಾಣಿಸಿಕೊಂಡಿತು. ಇದರಿಂದಾಗಿ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಲಾಗಿದೆ.

'ನಮ್ಮ ಸರ್ವರ್ ಸ್ಥಗಿತಗೊಂಡಿದೆ. ಹಾಗಾಗಿ ನ್ಯಾಯಮೂರ್ತಿಗಳು ಪರಸ್ಪರ ಚರ್ಚಿಸಿ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಲು ನಿರ್ಧರಿಸಿದ್ದೇವೆ' ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಎಲ್. ಎನ್.ರಾವ್ ಮತ್ತು ಎಸ್. ರವೀಂದ್ರ ಭಟ್ ಅವರಿದ್ದ ಪೀಠವು ಹೇಳಿದೆ. ಕೇಂದ್ರ ಸರ್ಕಾರವು ಭಾನುವಾರ ರಾತ್ರಿ ಸಲ್ಲಿಸಿರುವ ಪ್ರಮಾಣಪತ್ರವನ್ನು ಪರಿಶೀಲಿಸಲು ಪೀಠಕ್ಕೆ ಹೆಚ್ಚಿನ ಸಮಯ ದೊರೆತಂತಾಗುತ್ತದೆ ಎಂದೂ ನ್ಯಾಯಮೂರ್ತಿಗಳು ಹೇಳಿದ್ದಾರೆ. ವಿಚಾರಣೆಯು ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆಯುತ್ತಿದೆ.

## ಔಷಧಿ ಕಾಳಸಂತೆ ಮಾರಾಟಕ್ಕೆ ಕಡಿವಾಣ: ಕೇಂದ್ರ ಸರ್ಕಾರ ಹೇಳಿಕೆ

**ನವದೆಹಲಿ:** ಕೋವಿಡ್ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅಗತ್ಯ ಔಷಧಗಳು ಕಾಳಸಂತೆಯಲ್ಲಿ ಮಾರಾಟವಾಗುವುದನ್ನು ಮುಲಾಜಿಗೆ ಒಳಗಾಗದೇ ಕಟ್ಟುನಿಟ್ಟಾಗಿ ತಡೆಯಲು ಎಲ್ಲ ರಾಜ್ಯಗಳು ವಿವಿಧ ಹಂತಗಳಲ್ಲಿ ವಿಶೇಷ ತಂಡಗಳನ್ನು ರಚಿಸಬೇಕಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿತು.

'ಮನುಷ್ಯನ ನೋವುಗಳ ವ್ಯಾಪಾರೀಕರಣ, ಶೋಷಣೆಯನ್ನು ಸಹಿಸುವುದಿಲ್ಲ' ಎಂಬ ಸಂದೇಶವನ್ನು ವಿಶೇಷ ತಂಡಗಳ ರಚನೆಯ ಮೂಲಕ ನೀಡಬೇಕಾಗಿದೆ. ಈ ಕುರಿತಂತೆ ಭಾರತದ ಪ್ರಧಾನ ಔಷಧ ನಿಯಂತ್ರಕರು (ಡಿಸಿಜಿಐ) ಎಲ್ಲ ರಾಜ್ಯಗಳಿಗೆ ಪತ್ರ ಬರೆದಿದ್ದಾರೆ' ಎಂದು ಕೋರ್ಟ್‌ಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ತಿಳಿಸಿದೆ.

ಔಷಧ ನಿಯಂತ್ರಣ ಕಾಯ್ದೆ, ಅಗತ್ಯ ವಸ್ತುಗಳ ಸೇವಾ ಕಾಯ್ದೆ ಹಾಗೂ ಸಂಬಂಧಿತ ಇತರೆ ಕಾಯ್ದೆಗಳ ಅನುಸಾರ ಔಷದಗಳ ಕಾಳಸಂತೆ ಮಾರಾಟಕ್ಕೆ ಕಡಿವಾಣ ಹೇರಬೇಕು. ಸ್ಥಳೀಯ ಆಡಳಿತ ಮತ್ತು ಪೊಲೀಸ್ ಇಲಾಖೆಯನ್ನು ಬಳಸಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಎಲ್ಲ ರಾಜ್ಯ ಸರ್ಕಾರಗಳಿಗೆ ತಿಳಿಸಿದೆ ಎಂದು ಹೇಳಿದೆ.

**157 ಪ್ರಕರಣ:** ದೇಶದಾದ್ಯಂತ ಈವರೆಗೆ 157 ಪ್ರಕರಣ ಪತ್ತೆಯಾಗಿದೆ. ಎಫ್‌ಐಆರ್ ದಾಖಲಿಸಲಾಗಿದೆ. ಕೃತ್ಯಗಳಲ್ಲಿ ಭಾಗಿಯಾಗಿದ್ದ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಕೇಂದ್ರವು ಕೋರ್ಟ್‌ಗೆ ಮಾಹಿತಿ ನೀಡಿದೆ.

ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಸ್ವಯಂಪ್ರೇರಿತವಾಗಿ ಈ ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಂಡಿದೆ. ಔಷಧಗಳ ಮಾರಾಟ ಮತ್ತು ವಿತರಣೆಯನ್ನು ಔಷದ ನಿಯಂತ್ರಣ ಕಾಯ್ದೆ 1940 ಮತ್ತು 1945ರ ಔಷಧ ನಿಯಮಗಳು ಅನ್ವಯ ನಿಯಂತ್ರಿಸಲಾಗುತ್ತಿದೆ ಎಂದು ತಿಳಿಸಿದೆ.

# ಸಿಗದ ಲಸಿಕೆ: ಗೋಳು ಮುಂದುವರಿಕೆ

ಒಂದನೇ ಪುಟದಿಂದ

'ಲಸಿಕೆ ಪಡೆಯಲು ಬೆಳಿಗ್ಗೆಯೇ ಬಂದು ನಿಂತಿದ್ದೇನೆ. ಸಿಬ್ಬಂದಿ ಈಗ ಆಗ ಎಂದು ಹೇಳುತ್ತಲೇ ಇದ್ದಾರೆ. ಇಲ್ಲಿ ಇಷ್ಟೊಂದು ಜನ ಸೇರಿದ್ದಾರೆ. ಇವರಲ್ಲಿ ಯಾರಿಗಾದರು ಸೋಂಕು ತಗುಲಿದ್ದರೆ ಏನು ಮಾಡೋದು. ಲಸಿಕೆ ಪಡೆಯಲು ಬಂದು ಸೋಂಕು ಹತ್ತಿಸಿಕೊಂಡತ್ತಾಗುತ್ತದೆಯಲ್ಲವೇ. ನಮ್ಮಂತಹ ಹಿರಿಯರಿಗೆ ಇಲ್ಲಿ ಕೂರಲೂ ವ್ಯವಸ್ಥೆಯಿಲ್ಲ. ಬಾಯಾರಿದರೆ ನೀರು ಸಹ ಸಿಗುವುದಿಲ್ಲ' ಎಂದು 82 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು ಅಳಲು ತೋಡಿಕೊಂಡರು.

**ಆನ್‌ಲೈನ್‌ನಲ್ಲೂ ಇಲ್ಲ:** ಲಸಿಕೆ ಪಡೆಯಲು ದಿನಾಂಕ ಪೂರ್ವನಿಗದಿಗಾಗಿ ನೋಂದಾಯಿಸಿಕೊಳ್ಳಲು ಆನ್‌ಲೈನ್(ಕೋವಿನ್) ಮೂಲಕ ಪ್ರಯತ್ನಿಸಿದರೆ ಮೇ ಅಂತ್ಯದವರೆಗೆ ಎಲ್ಲಿಯೂ ಖಾಲಿ ಇಲ್ಲ ಎಂಬ ಸಂದೇಶ ತೋರಿಸುತ್ತಿತ್ತು.

ಮಾಗಡಿ ರಸ್ತೆಯ ಕುಷ್ಠರೋಗ ಆಸ್ಪತ್ರೆ ಮತ್ತು ಬ್ಯಾಟರಾಯನಪುರದ ನಗರ ಆರೋಗ್ಯ ಕೇಂದ್ರ ಬಿಟ್ಟು ಉಳಿದೆಲ್ಲೂ ಮೇ 31ರವರೆಗೆ ಲಸಿಕೆ ಹಾಕಿಸಿಕೊಳ್ಳುವವರಿಗೆ ಅವಕಾಶವೇ ಕೋವಿನ್‌ನಲ್ಲಿ ತೆರೆದುಕೊಳ್ಳುತ್ತಿಲ್ಲ. ವಿಕ್ಟೋರಿಯಾ ಮತ್ತು ಕೆ.ಸಿ.ಜನರಲ್ ಆಸ್ಪತ್ರೆಗಳಲ್ಲಿ ಕೆಲವು ದಿನ ಮಾತ್ರ ಖಾಲಿ ಇದ್ದು, 'ಸ್ಲಾಟ್' ತೆರೆದಿದ್ದರೂ ಅಲ್ಲಿ 15 ಮಂದಿಗಷ್ಟೇ ಅವಕಾಶ ಎಂದು ತೋರಿಸುತ್ತಿತ್ತು. ಕೆಲವರು ಎರಡನೇ ಡೋಸ್ ಪಡೆಯಬೇಕಾದ ಗಡುವು ಸಮೀಪಿಸುತ್ತಿದೆ. ಲಸಿಕೆಯೇ ಲಭ್ಯವಿಲ್ಲದಿರುವುದರಿಂದ ಅವರೆಲ್ಲಾ ಸಂಕಷ್ಟಕ್ಕೆ ಸಿಲುಕಿದ್ದಾರೆ. ಎರಡನೇ ಡೋಸ್ ಪಡೆಯದಿದ್ದರೆ ಏನಾಗಬಹುದೋ ಎಂಬ ಆತಂಕವೂ ಅವರನ್ನು ಆವರಿಸಿದೆ.

**ಅಪಾಯಕ್ಕೆ ಆಹ್ವಾನ:** ರಾಜ್ಯದ ಬಹುತೇಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ನೀಡುವ ಮತ್ತು ಸೋಂಕಿತರಿಂದ ಮಾದರಿ ಸಂಗ್ರಹಿಸುವ ಕೌಂಟರ್‌ಗಳು ಅಕ್ಕಪಕ್ಕದಲ್ಲೇ ಇವೆ. ಅಂತಹ ಕೇಂದ್ರಗಳಿಗೆ ಲಸಿಕೆ ಪಡೆಯಲು ಹೋದವರಿಗೆ ಸೋಂಕು ತಗುಲುವ ಅಪಾಯ ಹೆಚ್ಚಿದೆ. ಸಿಬ್ಬಂದಿ ಕೂಡ ಆತಂಕದಲ್ಲೇ ಕೆಲಸ ನಿರ್ವಹಿಸಬೇಕಾಗಿದೆ.

ಬೆಂಗಳೂರಿನ ವಿಕ್ಟೋರಿಯಾ ಸೇರಿದಂತೆ ಬಹುತೇಕ ಆಸ್ಪತ್ರೆಗಳಲ್ಲಿ ಮೊದಲ ಡೋಸ್ ಪಡೆಯಲು ಹೋದವರಿಗೆ ಲಸಿಕೆ ನೀಡಲಿಲ್ಲ. 'ಎರಡನೇ ಡೋಸ್ ತೆಗೆದುಕೊಳ್ಳುತ್ತಿರುವವರಿಗೆ ಮಾತ್ರ ಲಸಿಕೆ ಕೊಡಬೇಕೆಂದು ಸರ್ಕಾರ ಆದೇಶಿಸಿದೆ' ಎಂದು ಸಿಬ್ಬಂದಿ ಹೇಳಿದರು. ವಯಸ್ಸಾದವರು ಪರಿಪರಿಯಾಗಿ ಬೇಡಿದರೂ ಅವರು ಕಿವಿಗೊಡಲಿಲ್ಲ.

**ಲಸಿಕೆ ಕೊರತೆ:** ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಲಸಿಕೆಯ ಕೊರತೆ ಕಾಡುತ್ತಿದೆ. ಬಳ್ಳಾರಿ, ಬೆಳಗಾವಿ, ಉತ್ತರ ಕನ್ನಡ, ಬಾಗಲಕೋಟೆ ಜಿಲ್ಲೆಗಳಲ್ಲಿ 2ನೇ ಡೋಸ್ ಲಸಿಕೆ ನೀಡಿಕೆ ಚಾಲನೆಯಲ್ಲಿದೆ. ಬೆಳಗಾವಿ, ಧಾರವಾಡ, ವಿಜಯಪುರ ಜಿಲ್ಲೆಗಳಲ್ಲಿ ಲಸಿಕೆ ಕೊರತೆ ಎದುರಾಗಿದೆ. ಗದಗ ಜಿಲ್ಲೆಯಲ್ಲಿ 45 ವರ್ಷ ಮೇಲ್ಪಟ್ಟವರಿಗೆ ಪ್ರಥಮ ಡೋಸ್ ಲಸಿಕೆ ಇಲ್ಲ.

**2ನೇ ಡೋಸ್‌ಗೆ ತೊಂದರೆಯಾಗಿಲ್ಲ:** ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ 2 ನೇ ಡೋಸ್ ಮಾತ್ರ ನೀಡಲಾಗುತ್ತಿದೆ.

## ಎಲ್ಲಿ ಹೋಗುತ್ತಿದೆ ಲಸಿಕೆ?

ಸರ್ಕಾರ ಲಸಿಕೆಯ ವಿಚಾರದಲ್ಲಿ ಗಂಟೆಗೊಂದು ನಿರ್ಧಾರ ಪ್ರಕಟಿಸುತ್ತಿರುವುದರಿಂದ ಜನ ಗೊಂದಲಕ್ಕೀಡಾಗಿದ್ದಾರೆ. ನಮ್ಮಲ್ಲಿ 6 ಲಕ್ಷ, 8 ಲಕ್ಷ ಲಸಿಕೆ ದಾಸ್ತಾನು ಇದೆ ಎಂದು ಆರೋಗ್ಯ ಸಚಿವ ಸುಧಾಕರ್ ಹೇಳುತ್ತಲೇ ಬಂದಿದ್ದಾರೆ. ಇಷ್ಟಾದರೂ ಲಸಿಕೆಗಾಗಿ ಜನ ಪರದಾಡುವುದು ತಪ್ಪಿಲ್ಲ.

'ನಮ್ಮಲ್ಲಿ 5 ಲಕ್ಷಕ್ಕೂ ಅಧಿಕ ಡೋಸ್ ಲಭ್ಯವಿದೆ ಎಂದು ಸುಧಾಕರ್ ಹೇಳಿದ್ದಾರೆ. ಅವರ ಮಾತು ಕೇಳಿ ಲಸಿಕೆ ಪಡೆಯಲು ಬಂದರೆ ಸಿಬ್ಬಂದಿ ವಾಪಾಸ್ ಕಳುಹಿಸುತ್ತಿದ್ದಾರೆ. ಹಾಗಾದರೆ ಸಚಿವರು ಹೇಳಿದ 5 ಲಕ್ಷ ಡೋಸ್ ಎಲ್ಲಿ ಹೋಯಿತು' ಎಂದು ವಿದ್ಯಾಪೀಠ ವೃತ್ತ ಆರೋಗ್ಯ ಕೇಂದ್ರಕ್ಕೆ ಬಂದಿದ್ದ ರಮ್ಯಾ ಪ್ರಶ್ನಿಸಿದರು. '18 ರಿಂದ 44 ವರ್ಷದೊಳಗಿನವರಿಗೆ ಸೋಮವಾರದಿಂದ ಲಸಿಕೆ ನೀಡುವುದಾಗಿ ಹೇಳಿದ್ದ ಸಚಿವರು ಈಗ ರಾಗ ಬದಲಿಸಿದ್ದಾರೆ. ಜನರ ಓಡಾಟಕ್ಕೆ ತೊಂದರೆಯಾಗುತ್ತಿದೆ. ಹೀಗಾಗಿ ಲಾಕ್‌ಡೌನ್ ಬಳಿಕ ಲಸಿಕೆ ನೀಡಲು ಚಿಂತಿಸುತ್ತಿದ್ದೇವೆ ಎಂದಿದ್ದಾರೆ. ಇದನ್ನು ಮೊದಲೇ ಹೇಳಿದ್ದರೆ ಮನೆಯಲ್ಲೇ ಇರುತ್ತಿದ್ದೇವಲ್ಲ' ಎಂದು ಕೇಳಿದರು.

### ಚಿಕ್ಕಬಳ್ಳಾಪುರಕ್ಕೇ ಅಧಿಕ ಡೋಸ್!

ಲಸಿಕೆ ಹಂಚಿಕೆ ವಿಚಾರದಲ್ಲಿ ಜಿಲ್ಲೆಗಳ ನಡುವೆ ಅಸಮಾನತೆ ಇರುವುದು ಸರ್ಕಾರದ ದತ್ತಾಂಶದಿಂದ ಬಹಿರಂಗಗೊಂಡಿದೆ.

ಆರೋಗ್ಯ ಸಚಿವರ ತವರು ಜಿಲ್ಲೆಯಾದ ಚಿಕ್ಕಬಳ್ಳಾಪುರಕ್ಕೆ ಆರು ದಿನಗಳಲ್ಲಿ 4,500 ಡೋಸ್‌ಗಳು ಹಂಚಿಕೆಯಾಗಿವೆ. ಇದೇ ಅವಧಿಯಲ್ಲಿ, ಅತಿ ಹೆಚ್ಚು ಕೋವಿಡ್ ಪ್ರಕರಣ ಹಾಗೂ ಸಾವು ಸಂಭವಿಸುತ್ತಿರುವ ಬಿಬಿಎಂಪಿ ವ್ಯಾಪ್ತಿಯ ಪ್ರದೇಶವೊಂದಕ್ಕೆ ಕೇವಲ 1,500 ಡೋಸ್‌ಗಳನ್ನು ನೀಡಲಾಗಿದೆ.

ಮುಖ್ಯಮಂತ್ರಿಗಳ ತವರು ಜಿಲ್ಲೆ ಶಿವಮೊಗ್ಗದಲ್ಲಿ ಸೋಂಕಿತರ ಸಂಖ್ಯೆ ಕಡಿಮೆ ಇದ್ದರೂ ಹೆಚ್ಚಿನ ಡೋಸ್ ಕೊಡಲಾಗಿದೆ. ಮೈಸೂರು ಮತ್ತು ತುಮಕೂರು ಜಿಲ್ಲೆಗಳಿಗೆ ಅಧಿಕ ಡೋಸ್ ಹಂಚಿಕೆ ಮಾಡಲಾಗಿದೆ.

# ಕೋವಿಡ್ ನಿರ್ವಹಣೆ: 'ಸುಪ್ರೀಂ' ಮಧ್ಯಪ್ರವೇಶ ಬೇಡ– ಕೇಂದ್ರ

ಒಂದನೇ ಪುಟದಿಂದ

ಆಮ್ಲಜನಕ ಮತ್ತು ಅಗತ್ಯ ಔಷಧ ಪೂರೈಕೆ ಸೇರಿದಂತೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ನೆರವಾಗಲು ವೈದ್ಯಕೀಯ ಕ್ಷೇತ್ರದ ತಜ್ಞರ ಹೆಸರನ್ನೂ ಸೂಚಿಸಿತ್ತು.

'ಒಳ್ಳೆಯ ಉದ್ದೇಶದ್ದೇ ಆದರೂ ಪರಿಣತರ ಸಲಹೆ ಅಥವಾ ಆಡಳಿತಾತ್ಮಕ ಅನುಭವ ಇಲ್ಲದ ನ್ಯಾಯಾಂಗದ ಅತ್ಯುತ್ಸಾಹದ ಮಧ್ಯಪ್ರವೇಶವು ಅನಿರೀಕ್ಷಿತ ಮತ್ತು ಉದ್ದೇಶಿತವಲ್ಲದ ಪರಿಣಾಮಗಳಿಗೆ ಕಾರಣ ಆಗಬಹುದು. ಇದು ವೈದ್ಯರು, ವಿಜ್ಞಾನಿಗಳು, ಪರಿಣತರು ಮತ್ತು ಕಾರ್ಯಾಂಗಕ್ಕೆ ನೂತನ ಪರಿಹಾರಗಳನ್ನು ಕಂಡುಕೊಳ್ಳಲು ಅವಕಾಶ ನಿರಾಕರಿಸುತ್ತದೆ' ಎಂದು ಕೇಂದ್ರ ಹೇಳಿದೆ.

ಸಾಂಕ್ರಾಮಿಕವು ದಿಢೀರ್ ಕಾಣಿಸಿಕೊಂಡಿತು. ಲಸಿಕೆಯ ಕೊರತೆ ಇದೆ. ಹಾಗಾಗಿ, ದೇಶದ ಎಲ್ಲರಿಗೂ ಒಂದೇ ಬಾರಿಗೆ ಲಸಿಕೆ ಹಾಕಿಸಲು ಸಾಧ್ಯವಿಲ್ಲ. ಯಾರಿಗೆ ಹೆಚ್ಚು ಅಪಾಯ ಇದೆಯೋ ಅವರಿಗೆ ಆದ್ಯತೆ ನೀಡಲಾಗುವುದು ಎಂದು ಪ್ರಮಾಣಪತ್ರದಲ್ಲಿ ಹೇಳಲಾಗಿದೆ.

ಈಗಿನ ಅಂದಾಜಿನ ಪ್ರಕಾರ ವೈದ್ಯಕೀಯ ಆಮ್ಲಜನಕದ ಬೇಡಿಕೆ ಎಷ್ಟಿದೆ ಮತ್ತು ಮುಂದಿನ ದಿನಗಳಲ್ಲಿ ಎಷ್ಟು ಬೇಕಾಗಬಹುದು, ತೀವ್ರವಾಗಿ ಬಾಧಿತವಾದ ರಾಜ್ಯಗಳಿಗೆ ಹೇಗೆ ಹಂಚಿಕೆ ಮಾಡಲಾಗುವುದು ಮತ್ತು ನಿಗಾ ವ್ಯವಸ್ಥೆ ಏನು ಎಂಬ ಪ್ರಶ್ನೆಗಳನ್ನು ಸುಪ್ರೀಂ ಕೋರ್ಟ್ ಕೇಳಿತ್ತು.

ಹಿಂದೆಂದೂ ಕಂಡಿಲ್ಲದ ರೀತಿಯ ಪಿಡುಗನ್ನು ಎದುರಿಸುವ ಸಂದರ್ಭದಲ್ಲಿ ಸಾರ್ವಜನಿಕ ಹಿತಾಸಕ್ತಿಯಿಂದ ನೀತಿಯನ್ನು ರೂಪಿಸುವ ವಿವೇಚನಾಧಿಕಾರ ಸರ್ಕಾರಕ್ಕೆ ಬೇಕು. ಇಂತಹ ಸಂದರ್ಭದಲ್ಲಿನ ಲಸಿಕೆ ಅಭಿಯಾನದ ನೀತಿಯನ್ನು ಕಾರ್ಯಾಂಗೀಯ ನೀತಿಯಾಗಿ ರೂಪಿಸಲಾಗಿದೆ. ಕಾರ್ಯಾಂಗದ ವಿವೇಕದ ಮೇಲೆ ಈಗ ನಂಬಿಕೆ ಇರಿಸಬೇಕು ಎಂದು ಪ್ರಮಾಣಪತ್ರವು ವಿವರಿಸಿದೆ.

**ಲಸಿಕೆ ಭಿನ್ನ ದರಕ್ಕೆ ಸಮರ್ಥನೆ:** ಕೋವಿಡ್ ತಡೆ ಲಸಿಕೆಗೆ ಭಿನ್ನ ದರ ನಿಗದಿಯನ್ನೂ ಸರ್ಕಾರವು ಸಮರ್ಥಿಸಿಕೊಂಡಿದೆ. ಖಾಸಗಿ ಸಂಸ್ಥೆಗಳು ಮತ್ತು ವಿದೇಶದ ಲಸಿಕೆ ತಯಾರಕರನ್ನು ದೇಶದಲ್ಲಿ ಲಸಿಕೆ ತಯಾರಿಸಲು ಆಕರ್ಷಿಸುವುದು ಮತ್ತು ಆ ಮೂಲಕ ಲಸಿಕೆ ಲಭ್ಯತೆ ಹೆಚ್ಚಿಸುವುದು ಇದರ ಉದ್ದೇಶ ಎಂದು ಹೇಳಿದೆ.

ಲಸಿಕೆಯನ್ನು ಉಚಿತವಾಗಿಯೇ ಪಡೆಯುವ ಆಯ್ಕೆಯನ್ನು ಜನರ ಮುಂದೆ ಇರಿಸುವುದು ಸರ್ಕಾರದ ಕಾರ್ಯತಂತ್ರ. ಲಸಿಕೆ ಮಾರಾಟದಿಂದ ತಯಾರಕರು ಅಸಾಧಾರಣವಾದ ಲಾಭವನ್ನೂ ಮಾಡಿಕೊಂಡಿಲ್ಲ ಎಂದು 218 ಪುಟಗಳ ಪ್ರಮಾಣಪತ್ರದಲ್ಲಿ ಹೇಳಲಾಗಿದೆ.

'ಎಲ್ಲರಿಗೂ ಉಚಿತವಾಗಿಯೇ ಲಸಿಕೆ ಹಾಕಿಸಲಾಗುವುದು ಎಂದು ಎಲ್ಲ ರಾಜ್ಯಗಳೂ ಘೋಷಿಸಿವೆ. ಹಾಗಾಗಿ, ಭಿನ್ನ ದರದಿಂದಾಗಿ ಫಲಾನುಭವಿಯ ಮೇಲೆ ಯಾವುದೇ ಪರಿಣಾಮ ಆಗುವುದಿಲ್ಲ' ಎಂದೂ ಹೇಳಿದೆ.

# ಲಾಕ್‌ಡೌನ್: ಎಲ್ಲೆಡೆ ಪೊಲೀಸರ ದಬ್ಬಾಳಿಕೆ

ಒಂದನೇ ಪುಟದಿಂದ

ಕೆಲವೆಡೆ ನಗರ, ಪಟ್ಟಣಗಳ ಹೊರ ವಲಯದಲ್ಲಿನ ತೆರೆದ ಪ್ರದೇಶದಲ್ಲಿ ಆರಂಭವಾಗಿದ್ದ ತರಕಾರಿ ಮಾರುಕಟ್ಟೆಗಳ ಮೇಲೆ ಪೊಲೀಸರು ದಾಳಿ ನಡೆಸಿ ಅಮಾನುಷವಾಗಿ ವರ್ತಿಸಿದ್ದಾರೆ. ತರಕಾರಿ ಮಾರುತ್ತಿದ್ದವರು ಮತ್ತು ಖರೀದಿಸಲು ಬಂದವರ ಮೇಲೆ ಮನಬಂದಂತೆ ಥಳಿಸಿದ್ದಾರೆ. ಲಾಕ್‌ಡೌನ್ ಜಾರಿ ಕರ್ತವ್ಯಕ್ಕೆ ನಿಯೋಜಿತರಾಗಿದ್ದ ಪೊಲೀಸ್ ಮತ್ತು ಗೃಹರಕ್ಷಕ ಸಿಬ್ಬಂದಿಯು ಕಿರಾಣಿ ಅಂಗಡಿಗಳ ವರ್ತಕರು, ಗ್ರಾಹಕರ ಮೇಲೆ ಲಾಠಿ ಬೀಸಿದ ಘಟನೆಗಳೂ ವ್ಯಾಪಕವಾಗಿ ನಡೆದಿವೆ.

ಕೋಲಾರದಲ್ಲಿ ಅಗತ್ಯ ವಸ್ತು ಖರೀದಿಗೆ ಬಂದಿದ್ದ ಸ್ಮಿತಾ ಎಂಬ ತೃತೀಯ ಲಿಂಗಿಯ ಮೇಲೆ ಸಬ್ ಇನ್‌ಸ್ಪೆಕ್ಟರ್ ವೇದಾವತಿ ಎಂಬುವವರು ಹಲ್ಲೆ ನಡೆಸಿ, ತಲೆಗೂದಲು ಹಿಡಿದು ಎಳೆದೊಯ್ಯುತ್ತಿದ್ದ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ 'ವೈರಲ್' ಆಗಿದೆ.



ಧಾರವಾಡದ ಮಾರುಕಟ್ಟೆ ಪ್ರದೇಶದಲ್ಲಿ ಸರ್ಕಾರ ಸೂಚಿಸಿದ ಸಮಯ ಮೀರಿ ಅಂಗಡಿ ತೆರೆದದ್ದವರಿಗೆ ಪೊಲೀಸರು ಲಘು ಲಾಠಿ ರುಚಿ ತೋರಿಸಿದರು

ಹಾವೇರಿಯಲ್ಲೂ ತರಕಾರಿ ಮಾರಾಟ ಮಾಡುತ್ತಿದ್ದ ಸ್ಥಳದ ಮೇಲೆ ಪೊಲೀಸರು ದಾಳಿ ನಡೆಸಿ ಜನರನ್ನು ಅಟ್ಟಾಡಿಸಿ ಹೊಡೆಯುತ್ತಿರುವ ವಿಡಿಯೊ ಕೂಡ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಶಿವಮೊಗ್ಗ ನಗರ, ಬೆಂಗಳೂರು ಸೇರಿದಂತೆ ಹಲವೆಡೆ ಇಂತಹ ಪ್ರಕರಣಗಳು ನಡೆದಿವೆ.

**ಸಾವಿರಾರು ವಾಹನ ವಶ:** ರಸ್ತೆಗೆ ಇಳಿದಿದ್ದ ಹತ್ತಾರು ಸಾವಿರ ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಬೆಂಗಳೂರಿನಲ್ಲಿ ವಾಹನ ಸವಾರರನ್ನು ರಸ್ತೆಯ ಮೇಲೆ ಕೂರಿಸಿದ, 'ಮತ್ತೊಮ್ಮೆ ರಸ್ತೆಗೆ ಇಳಿಯುವುದಿಲ್ಲ' ಎಂದು ಪ್ರಮಾಣ ಮಾಡಿಸಿದ ಹಾಗೂ ಬಸ್ಕಿ ಹೊಡೆಸಿದ ಘಟನೆಗಳೂ ನಡೆದಿವೆ.

ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಸೇರಿದಂತೆ ಕರಾವಳಿ ಹಾಗೂ ಮಲೆನಾಡಿನ ಜಿಲ್ಲೆಗಳಲ್ಲಿ ದೂರದ ಪೇಟೆಗಳಿಗೆ ತೆರಳಲು ಸಾಧ್ಯವಾಗದೇ ಜನರು ಅಗತ್ಯ ವಸ್ತುಗಳ ಖರೀದಿಗೂ ಪರದಾಡಿದರು. ಉಡುಪಿ ಜಿಲ್ಲೆಯ ಮಡಾಮಕ್ಕಿ ನಿವಾಸಿ ಗೋವಿಂದ ಎಂಬುವರು 18 ಕಿ.ಮೀ. ದೂರದ ಹೆಬ್ರಿ ಪಟ್ಟಣಕ್ಕೆ ಕಾಲ್ನಡಿಗೆಯಲ್ಲೇ ಹೋಗಿ, ಅಗತ್ಯ ವಸ್ತುಗಳನ್ನು ಖರೀದಿಸಿ ತಂದಿದ್ದಾರೆ. ಇಂತಹ ಹತ್ತಾರು ಘಟನೆಗಳು ಫೇಸ್ ಬುಕ್, ವಾಟ್ಸ್ ಆ್ಯಪ್ ಮತ್ತಿತರ ಸಾಮಾಜಿಕ ಮಾಧ್ಯಮಗಳಲ್ಲಿ ಜೋರಾಗಿ ಸದ್ದು ಮಾಡುತ್ತಿವೆ.

## ನತಾಶಾ ನರ್ವಾಲ್‌ಗೆ ಜಾಮೀನು

**ನವದೆಹಲಿ (ಪಿಟಿಐ):** ಈಶಾನ್ಯ ದೆಹಲಿ ಗಲಭೆಗೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿರುವ ಜೆಎನ್‌ಯು ವಿದ್ಯಾರ್ಥಿನಿ ನತಾಶಾ ನರ್ವಾಲ್ ತಂದೆ ಕೋವಿಡ್‌ನಿಂದ ಮೃತಪಟ್ಟಿದ್ದು, ಅವರ ಅಂತ್ಯಕ್ರಿಯೆಯಲ್ಲಿ ಭಾಗಿಯಾಗಲು ನತಾಶಾಗೆ ದೆಹಲಿ ಹೈಕೋರ್ಟ್ ಸೋಮವಾರ ಜಾಮೀನು ನೀಡಿದೆ.

ನ್ಯಾಯಮೂರ್ತಿಗಳಾದ ಸಿದ್ಧಾರ್ಥ್ ಮೃದುಲ್ ಮತ್ತು ಎ.ಜೆ. ಭಂಭಾನಿ ಅವರ ಪೀಠವು ನತಾಶಾ ನರ್ವಾಲ್‌ರಿಂದ ₹50,000 ವೈಯಕ್ತಿಕ ಬಾಂಡ್ ಬರೆಸಿಕೊಂಡು ಮೂರು ವಾರಗಳ ಮಧ್ಯಂತರ ಜಾಮೀನು ನೀಡಿದೆ.

## ಗಂಗಾ ನದಿಯಲ್ಲಿ ತೇಲುತ್ತಿರುವ ಮೃತದೇಹಗಳು: ಕೋವಿಡ್ ಸೋಂಕಿತರದ್ದೆಂಬ ಶಂಕೆ

**ಪಟ್ನಾ:** ಕೆಲವು ಮೃತದೇಹಗಳು ಕೊಳೆತ ಸ್ಥಿತಿಯಲ್ಲಿ ಗಂಗಾ ನದಿಯಲ್ಲಿ ತೇಲುತ್ತಿರುವುದು ಕಂಡುಬಂದಿದ್ದು, ಇವು ಕೋವಿಡ್ ಸೋಂಕಿನಿಂದ ಮೃತಪಟ್ಟವರದ್ದು ಇರಬಹುದು ಎಂದು ಶಂಕಿಸಲಾಗಿದೆ.

ಬಿಹಾರದ ಬಕ್ಸಾರ್ ಜಿಲ್ಲೆಯ ಪ್ರದೇಶದಲ್ಲಿ ಗಂಗಾ ನದಿಯಲ್ಲಿ ಶವಗಳು ಪತ್ತೆಯಾಗಿವೆ. ಈ ಜಿಲ್ಲೆಯು ಉತ್ತರ ಪ್ರದೇಶ ಗಡಿಗೆ ಹೊಂದಿಕೊಂಡಂತಿದೆ.

'ಶವಗಳು ತೇಲುತ್ತಿರುವ ಬಗ್ಗೆ ಕಾವಲುಗಾರರು ನಮಗೆ ಮಾಹಿತಿ ನೀಡಿದರು. ನದಿಯ ಮೇಲ್ಭಾಗದಿಂದ ಇವು ತೇಲಿ ಬಂದಿವೆ ಎಂದು ಅವರು ಮಾಹಿತಿ ನೀಡಿದರು. ಈವರೆಗೆ 15 ಶವಗಳನ್ನು ಪತ್ತೆಮಾಡಲಾಗಿದೆ. ಈ ಪೈಕಿ ಯಾವುದೂ ಜಿಲ್ಲೆಗೆ ಸೇರಿದವರದ್ದಲ್ಲ ಎಂದು ಬಕ್ಸಾರ್‌ನ ಚಸುವಾ ಗ್ರಾಮದ ಅಧಿಕಾರಿ ಅಶೋಕ್ ಕುಮಾರ್ ತಿಳಿಸಿದ್ದಾರೆ.

'ಉತ್ತರ ಪ್ರದೇಶದ ಅನೇಕ ಜಿಲ್ಲೆಗಳು ಗಂಗಾ ನದಿತಟದಲ್ಲಿವೆ. ಶವಗಳನ್ನು ನದಿಗೆ ಎಸೆಯಲು ಕಾರಣಗಳೇನಿರಬಹುದು ಎಂಬುದು ತಿಳಿದಿಲ್ಲ. ಮೃತದೇಹಗಳು ಕೋವಿಡ್‌ನಿಂದ ಸಾವಿಗೀಡಾದವರದ್ದೇ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಮೃತದೇಹಗಳು ಕೊಳೆಯಲು ಆರಂಭವಾಗಿದ್ದವು. ಆದರೆ, ಇವುಗಳನ್ನು ಯೋಗ್ಯ ರೀತಿಯಲ್ಲಿ ವಿಲೇವಾರಿ ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದರ ಜತೆಗೆ ನಾವು ಎಲ್ಲ ಮುನ್ನೆಚ್ಚರಿಕೆಗಳನ್ನು ಕೈಗೊಳ್ಳುತ್ತೇವೆ' ಎಂದು ಅವರು ಹೇಳಿದ್ದಾರೆ.

ಕೆಲವು ಸುದ್ದಿವಾಹಿನಿಗಳು 100ಕ್ಕೂ ಹೆಚ್ಚು ಶವಗಳು ನದಿಯಲ್ಲಿ ತೇಲುತ್ತಿವೆ ಎಂದು ವರದಿ ಮಾಡಿರುವುದನ್ನು ಅಲ್ಲಗಳೆದಿರುವ ಅವರು, ಇವು ಅತಿರಂಜಿತ ವರದಿಗಳು ಎಂದಿದ್ದಾರೆ.

'ಮೃತದೇಹಗಳ ದಹನಕ್ಕೆ ಕಟ್ಟಿಗೆ ಕೊರತೆ ಇದೆ. ಲಾಕ್‌ಡೌನ್‌ನಿಂದಾಗಿ ಇವುಗಳು ಲಭ್ಯವಾಗುತ್ತಿಲ್ಲ. ಇದರಿಂದ ದೇಹಗಳನ್ನು ನದಿಯಲ್ಲಿ ಮುಳುಗಿಸಲು ಮುಂದಾಗಲು ಪ್ರೇರೇಪಿಸುತ್ತಿದೆ' ಎಂದು ಸ್ಥಳೀಯರು ಆರೋಪಿಸಿದ್ದಾರೆ.

## ಅಧಿಕಾರಿ, ಸಿಬ್ಬಂದಿ ಕಡ್ಡಾಯ ಹಾಜರಿ


ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅತ್ಯಗತ್ಯ ಸೇವೆಗಳನ್ನು ಒದಗಿಸುವ ಏಳು ಇಲಾಖೆಗಳ ಎಲ್ಲ ವರ್ಗದ ಅಧಿಕಾರಿ, ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಬೇಕು. ಇತರ ಇಲಾಖೆಗಳಅಧಿಕಾರಿ,ಸಿಬ್ಬಂದಿಶೇ50ರಂತೆಪಾಳಿಯಲ್ಲಿ ಹಾಜರಾಗಬೇಕು ಎಂದು ರಾಜ್ಯ ಸರ್ಕಾರ ಸೋಮವಾರ ಆದೇಶಿಸಿದೆ.

ಸಚಿವಾಲಯದಲ್ಲಿ ಅತ್ಯಗತ್ಯ ಸೇವೆಗಳನ್ನು ಒದಗಿಸುತ್ತಿರುವ ಆರೋಗ್ಯ, ವೈದ್ಯಕೀಯ ಶಿಕ್ಷಣ, ಒಳಾಡಳಿತ, ಕಂದಾಯ, ಕಾರ್ಮಿಕ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಕ್ಕಳ ರಕ್ಷಣಾ ಸೇವೆಗಳನ್ನು ಒದಗಿಸುತ್ತಿರುವ ಮಕ್ಕಳ ರಕ್ಷಣಾ ನಿರ್ದೇಶನಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ, ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗುವಂತೆ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಉಳಿದಂತೆ, ನಗರಾಭಿವೃದ್ಧಿ, ಆಹಾರ, ಇಂಧನ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಆರ್ಥಿಕ, ಪಶುಸಂಗೋಪನೆ ಮತ್ತು ಮೀನುಗಾರಿಕೆ, ಕೃಷಿ, ತೋಟಗಾರಿಕೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ, ಸಿಬ್ಬಂದಿ ಶೇ 50ರಂತೆ ರೊಟೇಷನ್ ಆಧಾರದಲ್ಲಿ ಹಾಜರಾಗಬೇಕು. ಇದೇ 23ರವರೆಗೆ ಈ ಆದೇಶ ಜಾರಿಯಲ್ಲಿ ಇರಲಿದೆ ಎಂದೂ ತಿಳಿಸಲಾಗಿದೆ.

## ವಿಶ್ವಾಸಮತ ಸೋತ ಒಲಿ ನೇಪಾಳ ಸರ್ಕಾರ ಪದಚ್ಯುತಿ



**ಕಠ್ಮಂಡು:** ನೇಪಾಳದ ಪ್ರಧಾನಮಂತ್ರಿ ಕೆ.ಪಿ.ಶರ್ಮಾ ಒಲಿ ನೇತೃತ್ವದ ಅವರ ಸರ್ಕಾರ ಪದಚ್ಯುತಗೊಂಡಿದ್ದು, ಅವರು ವಿಶ್ವಾಸಮತ ಕಳೆದುಕೊಂಡಿದ್ದಾರೆ. ಪುಷ್ಪಕಮಲ್ ದಾಹಲ್ ನೇತೃತ್ವದ ಸಿಪಿಎನ್ (ಮಾವೋವಾದಿ ಕೇಂದ್ರ) ಬೆಂಬಲ ಹಿಂತೆಗೆದುಕೊಂಡ ನಂತರ ಸರ್ಕಾರ ಅಲ್ಪಮತಕ್ಕೆ ಕುಸಿದಿತ್ತು.

ವಿಶ್ವಾಸಮತ ಸಾಬೀತುಪಡಿಸಲು ರಾಷ್ಟ್ರಪತಿ ವಿದ್ಯಾದೇವಿ ಭಂಡಾರಿ ಸೋಮವಾರ ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆದಿದ್ದರು. ಕೇವಲ 93 ಸದಸ್ಯರ ಬೆಂಬಲ ಪಡೆಯಲಷ್ಟೇ ಪ್ರಧಾನಿ ಅಲಿ ಶಕ್ತರಾದರು.

275 ಸದಸ್ಯ ಬಲದ ಸಂಸತ್ತಿನಲ್ಲಿ ಬಹುಮತ ಸಾಬೀತುಪಡಿಸಲು ಕನಿಷ್ಠ 136 ಮತಗಳು ಅಗತ್ಯವಿತ್ತು. ನಾಲ್ಕು ಸದಸ್ಯರು ಅಮಾನತ್ತಿನಲ್ಲಿ ಇದ್ದು, 124 ಸದಸ್ಯರು ಒಲಿ ಸರ್ಕಾರದ ವಿರುದ್ಧ ಮತ ಚಲಾಯಿಸಿದರು.

ಆಡಳಿತರೂಢ ನೇಪಾಳ ಕಮ್ಯುನಿಸ್ಟ್ ಪಕ್ಷ (ಎನ್‌ಸಿಪಿ)ಯಲ್ಲಿ ಅಧಿಕಾರಕ್ಕೆ ಸಂಘರ್ಷ ಆರಂಭವಾದ ಹಿಂದೆಯೇ, ಕಳೆದ ಡಿಸೆಂಬರ್ 20ರಂದು ಅಧ್ಯಕ್ಷೆಯು ಸಂಸತ್ತನ್ನು ವಿಸರ್ಜಿಸಿದ್ದು, ಹೊಸದಾಗಿ ಚುನಾವಣೆಗೆ ಆದೇಶಿಸಿದ್ದರು.

## ಸಂಕ್ಷಿಪ್ತ ಸುದ್ದಿ

### ಜ್ವೆರೆವ್‌ಗೆ ಪ್ರಶಸ್ತಿ

ಮ್ಯಾಡ್ರಿಡ್ (ಎಪಿ): ಅದ್ಭುತ ಲಯ ಮುಂದುವರಿಸಿದ ಅಲೆಕ್ಸಾಂಡರ್ ಜ್ವೆರೆವ್ ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು. ಭಾನುವಾರ ರಾತ್ರಿ ನಡೆದ ಫೈನಲ್‌ನಲ್ಲಿ 6–7, 6–4, 6–3ರಿಂದ ಮ್ಯಾಟಿಯೊ ಬೆರೆಟಿನಿ ಅವರನ್ನು ಪರಾಭವಗೊಳಿಸಿದ ಜರ್ಮನಿಯ ಆಟಗಾರ ಎರಡನೇ ಬಾರಿ ಈ ಪ್ರಶಸ್ತಿಗೆ ಮುತ್ತಿಟ್ಟರು.

### ಕೋವಿಡ್ ಲಸಿಕೆ ಪಡೆದ ಕೊಹ್ಲಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ, ಸೋಮವಾರ ಮುಂಬೈನಲ್ಲಿ ಕೋವಿಡ್‌-19 ಲಸಿಕೆಯ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಎಲ್ಲರಿಗೂ ಆದಷ್ಟು ಬೇಗ ಲಸಿಕೆ ಪಡೆಯುವಂತೆ ಕರೆ ನೀಡಿದ್ದಾರೆ.

ಈ ಕುರಿತು ಇನ್‌ಸ್ಟಾಗ್ರಾಂನಲ್ಲಿ ಕೊಹ್ಲಿ ಬರೆದುಕೊಂಡಿದ್ದಾರೆ. ವೇಗದ ಬೌಲರ್ ಇಶಾಂತ್ ಶರ್ಮಾ ಮತ್ತು ಬ್ಯಾಟ್ಸ್‌ಮನ್ ಚೇತೇಶ್ವರ ಪೂಜಾರ ಸಹ ಲಸಿಕೆಯ ಮೊದಲ ಡೋಸ್ ಪಡೆದಿದ್ದಾರೆ.

### ಫುಟ್‌ಬಾಲ್ ಆಟಗಾರ ಫ್ರಾಂಕೊ ನಿಧನ


ಫ್ರಾಂಕೊ

ನವದೆಹಲಿ (ಪಿಟಿಐ): ಭಾರತವು ಏಷ್ಯನ್ ಗೇಮ್ಸ್‌ನಲ್ಲಿ ಕೊನೆಯ ಬಾರಿ ಚಿನ್ನ ಗೆದ್ದಾಗ ತಂಡದಲ್ಲಿದ್ದ ಫುಟ್‌ಬಾಲ್ ಆಟಗಾರ ಫಾರ್ಚುನೆಟೊ ಫ್ರಾಂಕೊ (84) ಗೋವಾದಲ್ಲಿ ಸೋಮವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

1962ರಲ್ಲಿ ಜಕಾರ್ತದಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಭಾರತ ತಂಡವು ಚಾಂಪಿಯನ್ ಆಗಿತ್ತು. ಆ ಸಂದರ್ಭದಲ್ಲಿ ಫ್ರಾಂಕೊ ತಂಡವನ್ನು ಪ್ರತಿನಿಧಿಸಿದ್ದರು. ಅವರ ನಿಧನ ಸುದ್ದಿಯನ್ನು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಖಚಿತಪಡಿಸಿದ್ದು, ಸಾವಿನ ನಿರ್ದಿಷ್ಟ ಕಾರಣ ತಿಳಿಸಿಲ್ಲ.

ಐಒಸಿ ಅಧ್ಯಕ್ಷ ಥಾಮಸ್ ಬಾಕ್ ಭೇಟಿ ಮುಂದೂಡಿಕೆ; ಜನರ ಜೀವ–ಆರೋಗ್ಯಕ್ಕೆ ಆದ್ಯತೆ: ಪ್ರಧಾನಿ

# ಒಲಿಂಪಿಕ್ಸ್: ಖಾಲಿ ಕುರ್ಚಿ, ಕೃತಕ ಚಪ್ಪಾಳೆ!

ಟೋಕಿಯೊ (ಎಎಫ್‌ಪಿ/ರಾಯಿಟರ್ಸ್): ಕೋವಿಡ್ ಕಾಲದಲ್ಲಿ ನಿರ್ಬಂಧಗಳೊಂದಿಗೆ ಒಲಿಂಪಿಕ್ಸ್ ಕೂಟ ನಡೆದರೆ ಹೇಗಿದ್ದೀತು? ಕುರ್ಚಿಗಳೆಲ್ಲ ಖಾಲಿ, ಖಾಲಿ; ಕ್ರೀಡಾಪಟುಗಳನ್ನು ಹುರಿದುಂಬಿಸಲು ಕೃತಕ ಚಪ್ಪಾಳೆಯಿಂದ ಕೂಡಿದ ವಾತಾವರಣ, ಸಂಭ್ರಮವಿಲ್ಲದ ಕ್ರೀಡಾಂಗಣ..

ಒಲಿಂಪಿಕ್ಸ್ ಅಂಗವಾಗಿ ಇಲ್ಲಿ ನಡೆಯುತ್ತಿರುವ ಪ್ರಾಯೋಗಿಕ ಸ್ಪರ್ಧೆಗಳ ಪೈಕಿ ಒಂದರ ನಡುವೆ ಭಾನುವಾರ ಕೋವಿಡ್ ಕಾಲದ ಒಲಿಂಪಿಕ್ಸ್‌ನ ಅಣಕು ಪ್ರದರ್ಶನ ನಡೆದಿದ್ದು ಈ ಬಾರಿಯ ಕೂಟ ಹೇಗೆ ಇರಲಿದೆ ಎಂಬುದನ್ನು ಜಪಾನ್ ಕ್ರೀಡಾಪ್ರಿಯರಿಗೆ ತೋರಿಸಿಕೊಡಲಾಗಿದೆ.

68 ಸಾವಿರ ಪ್ರೇಕ್ಷಕರಿಗೆ ಅವಕಾಶ ಇರುವ ಒಲಿಂಪಿಕ್ ಕ್ರೀಡಾಂಗಣದಲ್ಲಿ ನಡೆದ ಟ್ರ್ಯಾಕ್ ಸ್ಪರ್ಧೆಯಲ್ಲಿ ಕ್ರೀಡಾಪಟುಗಳ ಶೂಗಳ ಸದ್ದು ಬಿಟ್ಟರೆ ಬೇರೇನೂ ಇರಲಿಲ್ಲ. ಆದರೆ ಅವರು ಅಂತಿಮ ಗೆರೆಯ ಬಳಿ ತಲುಪಿದಾಗ ಮೊದಲೇ ಮುದ್ರಿತ ದನಿಯ ಚಪ್ಪಾಳೆ ಮತ್ತು ಜಯಘೋಷ ಕೇಳಿಸಿತು. ಮೋಹಕ ಸಂಗೀತವೂ ಕೇಳಿಬಂತು.

ಪುರುಷರ 100 ಮೀಟರ್ಸ್ ಓಟದಲ್ಲಿ ಮೊದಲಿಗರಾದ ಅಮೆರಿಕದ ಜಸ್ಟಿನ್ ಗ್ಯಾಟ್ಲಿನ್ ‘ಪ್ರೇಕ್ಷಕರಿಲ್ಲದ, ಖಾಲಿ ಅಂಗಣದ ಟ್ರ್ಯಾಕ್‌ನಲ್ಲಿ ಓಡುವಾಗ ವಿಚಿತ್ರ ಅನುಭವವಾಯಿತು. ಇದು ಅಭ್ಯಾಸ ಸಂದರ್ಭದ ವಾತಾವರಣದಂತಿತ್ತು’ ಎಂದರು.

ಪ್ರಾಯೋಗಿಕ ಸ್ಪರ್ಧೆಗಳ ಪೈಕಿ ಅಥ್ಲೆಟಿಕ್ಸ್‌ಗೆ ಆದ್ಯತೆ ನೀಡಲಾಗಿದೆ. ಇದರಲ್ಲಿ ಒಟ್ಟು 400 ಮಂದಿ ಪಾಲ್ಗೊಂಡಿದ್ದಾರೆ. ಆದರೆ ವಿದೇಶಿಯರು ಒಂಬತ್ತು ಮಂದಿ ಮಾತ್ರ.

**ಐಒಸಿ ಅಧ್ಯಕ್ಷರ ಭೇಟಿ ಮುಂದೂಡಿಕೆ:** ಈ ನಡುವೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಅಧ್ಯಕ್ಷ ಥಾಮಸ್ ಬಾಕ್ ಅವರ ಜಪಾನ್ ಭೇಟಿಯನ್ನು ಸೋಮವಾರ ಮುಂದೂಡಲಾಗಿದೆ. ಈ ತಿಂಗಳಲ್ಲಿ ಅವರು ಇಲ್ಲಿಗೆ ಬರಬೇಕಾಗಿತ್ತು. ಆದರೆ ಜೂನ್ ತಿಂಗಳಲ್ಲಿ ಬರುವುದಾಗಿ ಅವರು ತಿಳಿಸಿದ್ದಾರೆ.

ಕೋವಿಡ್ ಕಾಲದಲ್ಲಿ ಒಲಿಂಪಿಕ್ಸ್‌ಗೆ ಆದ್ಯತೆ ನೀಡಲಿಲ್ಲ ಎಂದು ಹೇಳುವ ಮೂಲಕ ಜಪಾನ್ ಪ್ರಧಾನಮಂತ್ರಿ ಯೊಶಿಹಿಡೆ ಸುಗಾ ಸೋಮವಾರ ಆತಂಕ ಹೆಚ್ಚಿಸಿದ್ದಾರೆ.

‘ಜಪಾನ್ ಜನತೆಯ ಜೀವ ಮತ್ತು ಆರೋಗ್ಯವೇ ಮುಖ್ಯ. ಒಲಿಂಪಿಕ್ಸ್ ನಮಗೆ ಅದಕ್ಕಿಂತಲೂ ಮುಖ್ಯವಲ್ಲ’ ಎಂದು ಅವರು ಹೇಳಿದ್ದಾರೆ.


ಟೋಕಿಯೊ ಟವರ್ ಮತ್ತು ರೇನ್‌ಬೋ ಸೇತುವೆ ಹಿನ್ನೆಲೆಯಲ್ಲಿ ಸೋಮವಾರ ಕಂಡುಬಂದ ಒಲಿಂಪಿಕ್ಸ್ ಲಾಂಛನ –ಎಎಫ್‌ಪಿ ಚಿತ್ರ

### ಒಲಿಂಪಿಕ್ಸ್ ರದ್ದತಿಗೆ ಸಮೀಕ್ಷೆಯಲ್ಲಿ ಒಲವು

ಟೋಕಿಯೊ (ರಾಯಿಟರ್ಸ್): ಒಲಿಂಪಿಕ್ಸ್ ನಡೆಸಬೇಕೇ ಬೇಡವೇ ಎಂಬುದಕ್ಕೆ ಸಂಬಂಧಿಸಿ ಮಾಧ್ಯಮ ಸಂಸ್ಥೆಯೊಂದು ನಡೆಸಿರುವ ಸಮೀಕ್ಷೆಯಲ್ಲಿ 60 ಶೇಕಡಾ ಮಂದಿ ಕೂಟವನ್ನು ರದ್ದುಗೊಳಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಒಲಿಂಪಿಕ್ಸ್ ಆರಂಭವಾಗಲು ಎರಡೂವರೆ ತಿಂಗಳು ಬಾಕಿ ಇರುವಾಗ ಜನರಿಂದ ಈ ಅಭಿಪ್ರಾಯ ವ್ಯಕ್ತವಾಗಿದೆ.

ಯೊಮಿಯುರಿ ಶಿಂಬನ್ ಪತ್ರಿಕೆ ಈ ತಿಂಗಳ ಏಳರಿಂದ ಒಂಬತ್ತರ ವರೆಗೆ ಸಮೀಕ್ಷೆ ನಡೆಸಿತ್ತು. ಕೂಟ ನಡೆಸಬೇಕು ಎಂದು ಬಯಸಿದವರಲ್ಲಿ 23 ಶೇಕಡಾ ಮಂದಿ ಪ್ರೇಕ್ಷಕರಿಗೆ ಅನುಮತಿ ನೀಡಬಾರದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಟಿಬಿಎಸ್ ನ್ಯೂಸ್‌ನವರು ನಡೆಸಿದ ಸಮೀಕ್ಷೆಯಲ್ಲಿ 65 ಶೇಕಡಾ ಮಂದಿ ಕೂಟವನ್ನು ರದ್ದು ಮಾಡಬೇಕು ಎಂದು ಆಗ್ರಹಿಸಿದ್ದಾರೆ. 28 ಶೇಕಡಾ ಮಂದಿ ಸ್ವಲ್ಪ ಕಾಲ ಮುಂದೂಡಬೇಕು ಎಂದು ಬಯಸಿದ್ದಾರೆ. ಏಪ್ರಿಲ್‌ನಲ್ಲಿ ಕ್ಯೊಡೊ ನ್ಯೂಸ್‌ನವರು ನಡೆಸಿದ ಸಮೀಕ್ಷೆಯಲ್ಲಿ ಒಲಿಂಪಿಕ್ಸ್ ರದ್ದು ಮಾಡಬೇಕು ಎಂದು 70 ಶೇಕಡಾ ಮಂದಿ ಬಯಸಿದ್ದರು.

ಕಳೆದ ವರ್ಷ ನಡೆಯಬೇಕಾಗಿದ್ದ ಒಲಿಂಪಿಕ್ಸ್ ಕೂಟವನ್ನು ಈ ವರ್ಷಕ್ಕೆ ಮುಂದೂಡಲಾಗಿದೆ. ಜುಲೈ 23ರಂದು ಉದ್ಘಾಟನೆಯಾಗಲಿರುವ ಕೂಟಕ್ಕೆ ವಿದೇಶಿ ಪ್ರೇಕ್ಷಕರ ಮೇಲೆ ಈಗಾಗಲೇ ನಿರ್ಬಂಧ ಹೇರಲಾಗಿದೆ. ಸ್ಥಳೀಯ ಪ್ರೇಕ್ಷಕರ ವಿಷಯದಲ್ಲಿ ಇನ್ನೂ ಅಂತಿಮ ತೀರ್ಮಾನ ಕೈಗೊಂಡಿಲ್ಲ.

## ಸುದ್ದಿ 2 ನಿಮಿಷ

### ಸುಶೀಲ್ ಪತ್ತೆಗೆ ನೋಟಿಸ್

ನವದೆಹಲಿ (ಪಿಟಿಐ): ಭಾರತದ ಕುಸ್ತಿಗೆ ವಿಶ್ವಮಟ್ಟದಲ್ಲಿ ಹೆಸರು ಗಳಿಸಿಕೊಟ್ಟವರು ಸುಶೀಲ್ ಕುಮಾರ್. ಈಗ ಕೊಲೆ ಪ್ರಕರಣವೊಂದಕ್ಕೆ ಸಂಬಂಧಿಸಿ ಅವರನ್ನು ಪೊಲೀಸರು ಹುಡುಕಾಡುತ್ತಿರುವುದರಿಂದಾಗಿ ಕುಸ್ತಿಯ ಗೌರವಕ್ಕೆ ಧಕ್ಕೆ ಬಂದಿದೆ ಎಂದು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಭಿಪ್ರಾಯಪಟ್ಟಿದೆ.

2010ರಲ್ಲಿ ವಿಶ್ವ ಚಾಂಪಿಯನ್ ಆಗುವ ಮೂಲಕ ಈ ಸಾಧನೆ ಮಾಡಿದ ಭಾರತದ ಏಕೈಕ ಕುಸ್ತಿಪಟು ಎಂದೆನಿಸಿಕೊಂಡಿರುವ ಸುಶೀಲ್ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಅಪರೂಪದ ಸಾಧನೆಯನ್ನೂ ಮಾಡಿದ್ದರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಅವರು ಗಳಿಸಿರುವ ಖ್ಯಾತಿ ಈಗ ಇಲ್ಲವಾಗಿದೆ ಎಂದು ಫೆಡರೇಷನ್ ಹೇಳಿದೆ.

‘ಸುಶೀಲ್ ಪ್ರಕರಣದಿಂದಾಗಿ ಭಾರತ ಕುಸ್ತಿಗೆ ಕೆಟ್ಟ ಹೆಸರು ಬಂದಿರುವುದು ನಿಜ. ಆದರೆ ಕುಸ್ತಿಪಟುಗಳ ಅಂಗಣದ ಹೊರಗಿನ ಚಟುವಟಿಕೆಯನ್ನು ನಿಯಂತ್ರಿಸಲು ನಮಗೆ ಸಾಧ್ಯವಿಲ್ಲ. ಅವರು ಕ್ರೀಡೆಯಲ್ಲಿ ಮಾಡುವ ಸಾಧನೆಯ ಮೇಲಷ್ಟೇ ಕಣ್ಣಿಡಲು ಸಾಧ್ಯ’ ಎಂದು ಡಬ್ಲ್ಯುಎಫ್‌ಐ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ಹೇಳಿದ್ದಾರೆ.

2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗಳಿಸುವುದರೊಂದಿಗೆ ಕುಸ್ತಿಯಲ್ಲಿ ಪದಕ ಗೆಲ್ಲುವ 56 ವರ್ಷಗಳ ಭಾರತದ ಕನಸನ್ನು ಸುಶೀಲ್ ಕುಮಾರ್ ನನಸು ಮಾಡಿದ್ದರು.

ಈ ತಿಂಗಳ 4ರಂದು ಛತ್ರಸಾಲ ಕ್ರೀಡಾಂಗಣದಲ್ಲಿ ನಡೆದ ಗಲಾಟೆಯಲ್ಲಿ 23 ವರ್ಷದ ಕುಸ್ತಿಪಟು ಸಾಗರ್ ರಾಣಾ ಸಾವಿಗೀಡಾಗಿದ್ದರು. ಇದರಲ್ಲಿ ಸುಶೀಲ್ ಕುಮಾರ್ ಭಾಗಿಯಾಗಿದ್ದಾರೆ ಎಂಬ ಆರೋಪ ಬಂದ ಹಿನ್ನೆಲೆಯಲ್ಲಿ ಅವರು ನಾಪತ್ತೆಯಾಗಿದ್ದಾರೆ. ಪೊಲೀಸರು ಸೋಮವಾರ ‘ಲುಕ್ ಔಟ್’ ನೋಟಿಸ್ ಹೊರಡಿಸಿದ್ದಾರೆ.



### ಬಾಬರ್, ಅಲಿಸಾ ತಿಂಗಳ ಆಟಗಾರರು

ದುಬೈ (ಪಿಟಿಐ): ಪಾಕಿಸ್ತಾನದ ನಾಯಕ ಬಾಬರ್ ಆಜಂ ಮತ್ತು ಆಸ್ಟ್ರೇಲಿಯಾ ಮಹಿಳಾ ತಂಡದ ವಿಕೆಟ್ ಕೀಪರ್ ಅಲಿಸಾ ಹೀಲಿ ಅವರನ್ನು ತಿಂಗಳ ಆಟಗಾರರಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಸೋಮವಾರ ಆಯ್ಕೆ ಮಾಡಿದೆ. ಏಪ್ರಿಲ್‌ನಲ್ಲಿ ಇಬ್ಬರೂ ತೋರಿದ ಅಮೋಘ ಸಾಮರ್ಥ್ಯಕ್ಕೆ ಈ ಮನ್ನಣೆ ದೊರಕಿದೆ.

ದಕ್ಷಿಣ ಆಫ್ರಿಕಾದಲ್ಲಿ ನಡೆದ ಕ್ರಿಕೆಟ್ ಸರಣಿಗಳ ಮೂರೂ ಮಾದರಿಗಳಲ್ಲಿ ಬಾಬರ್ ಆಜಂ ಅತ್ಯುತ್ತಮ ಆಟ ಆಡಿದ್ದರು. ಕ್ರಿಕೆಟ್ ಪ್ರಿಯರು ಮತ್ತು ಐಸಿಸಿ ಮತದಾರರ ಅಕಾಡೆಮಿ ಅವರ ಪರವಾಗಿ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದೆ.

## ‘ಕೊರೊನಾ ಅಪಾಯಕಾರಿ’


ವೇದಾ ಕೃಷ್ಣಮೂರ್ತಿ

ನವದೆಹಲಿ (ಪಿಟಿಐ): ‘ಕುಟುಂಬವು ಎಲ್ಲ ಪ್ರಯತ್ನಗಳನ್ನೂ ಮಾಡಿತು. ಆದರೂ ಅಮ್ಮ ಮತ್ತು ಅಕ್ಕನನ್ನು ಉಳಿಸಿಕೊಳ್ಳಲು ಆಗಲಿಲ್ಲ. ಕೋವಿಡ್–19 ಅವರಿಬ್ಬರ ಪ್ರಾಣ ಅಪಹರಿಸಿತು...’

ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ವೇದಾ ಕೃಷ್ಣಮೂರ್ತಿ ಅವರ ಮಾತುಗಳು ಇವು. ಎರಡು ವಾರಗಳ ಅಂತರದಲ್ಲಿ ವೇದಾ ಅವರು ತಾಯಿ ಚೆಲುವಾಂಬ ದೇವಿ ಹಾಗೂ ಸಹೋದರಿ ವತ್ಸಲಾ ಶಿವಕುಮಾರ್ ಅವರನ್ನು ಕಳೆದುಕೊಂಡಿದ್ದರು. ಅವರಿಬ್ಬರನ್ನು ನೆನೆದುಕೊಂಡು ಭಾವುಕರಾಗಿರುವ 28 ವರ್ಷದ ವೇದಾ ‘ಇದು ಅತ್ಯಂತ ಅಪಾಯಕಾರಿ ವೈರಸ್. ಕುಟುಂಬದವರ ಪ್ರಯತ್ನಗಳನ್ನೆಲ್ಲ ವಿಫಲಗೊಳಿಸಿ ಮೇಲುಗೈ ಸಾಧಿಸಿತ್ತು. ನನ್ನ ಹಾಗೆ ಕುಟುಂಬ ಸದಸ್ಯರನ್ನು ಕಳೆದುಕೊಂಡವರ ಸಂಕಟ ಹೇಳತೀರದು. ಹೀಗಾಗಿ ಯಾರೂ ಕೊರೊನಾ ವೈರಸನ್ನು ಲಘುವಾಗಿ ಕಾಣಬೇಡಿ. ಸುರಕ್ಷಿತವಾಗಿರಿ, ಸುಭದ್ರವಾಗಿರಿ’ ಎಂದು ಹೇಳಿದ್ದಾರೆ.

ಸಾಮಾಜಿಕ ತಾಣಗಳ ಮೂಲಕ ಜನರಿಗೆ ನೆರವಾಗುತ್ತಿರುವ ವೇದಾ ಕುಟುಂಬದಲ್ಲಿ ಸಂಭವಿಸಿರುವ ದುರಂತದ ಆಘಾತದಿಂದ ನಿಧಾನಕ್ಕೆ ಚೇತರಿಸಿಕೊಳ್ಳುತ್ತಿದ್ದಾರೆ.

‘ನಿಮ್ಮಿಬ್ಬರ ಅಗಲಿಕೆ ಅಸಹನೀಯ. ನೀವಿಲ್ಲದೆ ಕುಟುಂಬದಲ್ಲಿ ಸಂಭ್ರಮ ಮೂಡುವುದಾದರೂ ಹೇಗೆ. ನಿಮ್ಮ ನಷ್ಟವನ್ನು ಭರಿಸುವುದು ಕಷ್ಟ. ನಾವು ದು:ಖದ ಮಡುವಿನಲ್ಲಿದ್ದೇವೆ’ ಎಂದು ವೇದಾ ಹೇಳಿಕೊಂಡಿದ್ದಾರೆ.

## ಭಾರತದಲ್ಲಿ ಐಪಿಎಲ್ ಮುಂದುವರಿಕೆ ಸಾಧ್ಯವೇ ಇಲ್ಲ: ಸೌರವ್ ಗಂಗೂಲಿ


ಸೌರವ್ ಗಂಗೂಲಿ

ನವದೆಹಲಿ (ಎಎಫ್‌ಪಿ): ಕೋವಿಡ್ ಸೋಂಕು ಏರುಗತಿಯಲ್ಲೇ ಸಾಗುತ್ತಿರುವುದರಿಂದಾಗಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಉಳಿದಿರುವ ಪಂದ್ಯಗಳನ್ನು ಭಾರತದಲ್ಲಿ ಮುಂದುವರಿಸಲು ಸಾಧ್ಯವೇ ಇಲ್ಲ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ಸೌರವ್ ಗಂಗೂಲಿ ಅಭಿಪ್ರಾಯಪಟ್ಟಿದ್ದಾರೆ.

ಬಯೋಬಬಲ್‌ನಲ್ಲಿದ್ದ ಆಟಗಾರರಲ್ಲೂ ಸೋಂಕು ಕಾಣಿಸಿಕೊಂಡ ಕಾರಣ ಐಪಿಎಲ್ ಟೂರ್ನಿಯನ್ನು ಕಳೆದ ವಾರ ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿತ್ತು. ಒಟ್ಟು 60 ಪಂದ್ಯಗಳ ಪೈಕಿ 29 ಪಂದ್ಯಗಳು ಮಾತ್ರ ಈ ವರೆಗೆ ನಡೆದಿವೆ.

ಆಂಗ್ಲ ಕ್ರೀಡಾ ನಿಯತಕಾಲಿಕವೊಂದಕ್ಕೆ ನೀಡಿದ ಸಂದರ್ಶನದಲ್ಲಿ ‘ಟೂರ್ನಿಯನ್ನು ಎಲ್ಲಿ, ಹೇಗೆ ಮುಂದುವರಿಸಬೇಕು ಎಂಬುದನ್ನು ಈಗಲೇ ಹೇಳಲು ಸಾಧ್ಯವಿಲ್ಲ. ಇಂಗ್ಲೆಂಡ್‌ನಲ್ಲಿ ಜೂನ್ 18ರಂದು ಆರಂಭವಾಗಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ವರೆಗಂತೂ ಟೂರ್ನಿಯನ್ನು ಪುನರಾರಂಭಿಸಲು ಸಾಧ್ಯವೇ ಇಲ್ಲ’ ಎಂದು ಅವರು ತಿಳಿಸಿದ್ದಾರೆ.

‘14 ದಿನಗಳ ಕ್ವಾರಂಟೈನ್ ಸೇರಿದಂತೆ ಟೂರ್ನಿ ಆಯೋಜಿಸಲು ಅನೇಕ ತೊಡಕುಗಳಿವೆ. ಭಾರತದಲ್ಲಿ ಕಠಿಣ ಕ್ವಾರಂಟೈನ್ ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಆದ್ದರಿಂದ ಇಲ್ಲಿ ಟೂರ್ನಿ ಮುಂದುವರಿಸುವುದು ಕೂಡ ಕಷ್ಟ’ ಎಂದು ಗಂಗೂಲಿ ವಿವರಿಸಿದ್ದಾರೆ.

‘ಬಯೋಬಬಲ್ ಬದುಕು ದುಷ್ಕರ. ಕಳೆದ ಸೆಪ್ಟೆಂಬರ್‌ನಿಂದ ಜಗತ್ತಿನ ಬಹುತೇಕ ಆಟಗಾರರು ಬಯೊಬಬಲ್‌ನಲ್ಲಿದ್ದಾರೆ. ಅದಕ್ಕೆ ಬೇರೆ ಪರ್ಯಾಯವಿಲ್ಲ. ಸದ್ಯ ಬಯೊಬಬಲ್ ವ್ಯವಸ್ಥೆ ಇಲ್ಲದೆ ಕ್ರಿಕೆಟ್ ಆಡಲು ಸಾಧ್ಯವಿಲ್ಲ’ ಎಂದು ಹೇಳಿದ್ದಾರೆ

## ಚುಟುಕು ಸುದ್ದಿ

### ಮರಳಿ ಬಂದ ಬಿಎಫ್‌ಸಿ ಆಟಗಾರರು

ನವದೆಹಲಿ (ಪಿಟಿಐ): ಕೋವಿಡ್ ನಿಯಮ ಉಲ್ಲಂಘಿಸಿದ ಕಾರಣದಿಂದ ಮಾಲ್ಡಿವ್ಸ್‌ನಿಂದ ವಾಪಸ್ ಕಳುಹಿಸಿದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಆಟಗಾರರು ಸೋಮವಾರ ಬೆಂಗಳೂರಿಗೆ ಬಂದಿದ್ದು ಕಡ್ಡಾಯ ಕ್ವಾರಂಟೈನ್‌ಗೆ ಒಳಗಾಗಿದ್ದಾರೆ.


ಎಎಫ್‌ಸಿ ಕಪ್ ಪ್ಲೇ ಆಫ್ ಪಂದ್ಯದಲ್ಲಿ ಮಾಲ್ಡಿವ್ಸ್‌ನ ಈಗಲ್ಸ್ ಎಫ್‌ಸಿಯನ್ನು ಎದುರಿಸಬೇಕಾಗಿದ್ದ ಬಿಎಫ್‌ಸಿಯ ಮೂವರು ವಿದೇಶಿ ಆಟಗಾರರು ನಿಯಮ ಉಲ್ಲಂಘಿಸಿ ರಸ್ತೆಗಿಳಿದಿದ್ದರು. ಹೀಗಾಗಿ ತಂಡವನ್ನು ವಾಪಸ್ ಹೋಗುವಂತೆ ಸೂಚಿಸಲಾಗಿತ್ತು.

### ‘ಕ್ರೀಡಾಪಟುಗಳಿಗೆ ಲಸಿಕೆ ಕೊಡಿ’

ಬೆಂಗಳೂರು: ರಾಜ್ಯದ ಕ್ರೀಡಾಪಟುಗಳಿಗೆ ಕೋವಿಡ್ ಲಸಿಕೆ ನೀಡಲು ತುರ್ತಾಗಿ ಸರ್ಕಾರ ಮುಂದಾಗಬೇಕು ಎಂದು ರಾಜ್ಯ ಒಲಿಂಪಿಕ್ ಸಂಸ್ಥೆ ಆಗ್ರಹಿಸಿದೆ.

ಈ ಕುರಿತು ಬರೆದಿರುವ ಪತ್ರದಲ್ಲಿ ಬೆಂಗಳೂರು ಸುತ್ತಮುತ್ತಲ ಕ್ರೀಡಾಪಟುಗಳಿಗೆ ಕಂಠೀರವ ಕ್ರೀಡಾಂಗಣದಲ್ಲಿ, ವಿವಿಧ ಜಿಲ್ಲೆಗಳ ಕ್ರೀಡಾಪಟುಗಳಿಗೆ ಜಿಲ್ಲೆ ಮತ್ತು ತಾಲ್ಲೂಕು ಕ್ರೀಡಾಂಗಣಗಳಲ್ಲಿ ಲಸಿಕೆ ನೀಡಬೇಕು ಎಂದು ಅಧ್ಯಕ್ಷ ಕೆ.ಗೋವಿಂದರಾಜ್ ಕೋರಿದ್ದಾರೆ.

### ಷೇರುಪೇಟೆ ವಹಿವಾಟು




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 14,823 |
| ಇಂದಿನ ಅಂತ್ಯ | 14,942 |
| ▲ | 119 |
| ದಿನದ ಗರಿಷ್ಠ | 14,967 |

### ವಿನಿಮಯ ದರ

| | |
|---|---|
| $ ಡಾಲರ್ | 73.35 |
| £ ಪೌಂಡ್ | 103.37 |
| € ಯುರೊ | 89.24 |
| ¥ ಯೆನ್ (100ಕ್ಕೆ) | 67 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹460 |
| 12 ಮೊಟ್ಟೆಗೆ | ₹62 |
| ಮೈಸೂರು | |
| 100 ಮೊಟ್ಟೆಗೆ | ₹460 |

### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1600 (1600) |
| ಸೋಯಾ (ರಿಫೈನ್ಡ್) | ₹1460 (1455) |
| ಸೂರ್ಯಕಾಂತಿ (ರಿಫೈನ್ಡ್) | ₹1730 (1730) |
| ಪಾಮೋಲಿನ್ | ₹1360(1365) |

### ರಾಮನಗರ ರೇಷ್ಮೆ ಗೂಡು ಧಾರಣೆ

| | |
|---|---|
| ಮಿಶ್ರತಳಿ (ಸಿ.ಬಿ) | ₹211-358 |
| ದ್ವಿತಳಿ (ಬಿ.ವಿ) | ₹200-368 |

### ಚಿನ್ನ, ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನ, ಬೆಳ್ಳಿ ದರ ಏರಿಕೆ ಆಗಿದೆ. 10 ಗ್ರಾಂ ಚಿನ್ನದ ದರ ₹ 179ರಷ್ಟು ಹೆಚ್ಚಾಗಿ ₹ 47,452ರಂತೆ ಮತ್ತು ಬೆಳ್ಳಿ ಧಾರಣೆ ಕೆ.ಜಿಗೆ ₹ 826ರಷ್ಟು ಹೆಚ್ಚಾಗಿ ₹ 71,541ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

### ಓಲಾದಿಂದ ಕಾನ್ಸನ್‌ಟ್ರೇಟರ್

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ ಆಮ್ಲಜನಕದ ಕಾನ್ಸನ್‌ಟ್ರೇಟರ್ ಅನ್ನು ಗ್ರಾಹಕರ ಮನೆಬಾಗಿಲಿಗೆ ಉಚಿತವಾಗಿ ಪೂರೈಕೆ ಮಾಡುವ ಸೇವೆಯನ್ನು ಶೀಘ್ರವೇ ಆರಂಭಿಸುವುದಾಗಿ ಓಲಾ ಫೌಂಡೇಷನ್ ಸೋಮವಾರ ತಿಳಿಸಿದೆ. ಮೊದಲ ಹಂತದಲ್ಲಿ 500 ಆಕ್ಸಿಜನ್ ಕಾನ್ಸನ್‌ಟ್ರೇಟರ್‌ಗಳು ಲಭ್ಯವಿರಲಿವೆ ಎಂದು ಹೇಳಿದೆ.

ಈ ಸೇವೆಗಾಗಿ ದೇಣಿಗೆ ನೀಡುವ ವೇದಿಕೆ ಆಗಿರುವ ‘ಗಿವ್ ಇಂಡಿಯಾ’ ಸಂಸ್ಥೆಯ ಜೊತೆ ಒಪ್ಪಂದ ಮಾಡಿಕೊಂಡಿರುವುದಾಗಿ ಓಲಾ ತಿಳಿಸಿದೆ.

ಓಲಾ ಆ್ಯಪ್ ಮೂಲಕ ಆಮ್ಲಜನಕದ ಕಾನ್ಸನ್‌ಟ್ರೇಟರ್‌ಗೆ ಮನವಿ ಸಲ್ಲಿಸಬೇಕು. ಈ ವೇಳೆ ಕೆಲವು ಸಾಮಾನ್ಯ ವಿವರಗಳನ್ನು ನೀಡಬೇಕಾಗುತ್ತದೆ. ಮನವಿ ಸ್ವೀಕಾರ ಆದ ಬಳಿಕ ವಿಶೇಷ ತರಬೇತಿ ಪಡೆದಿರುವ ಓಲಾ ಚಾಲಕ ಗ್ರಾಹಕರ ಮನೆ ಬಾಗಿಲಿಗೆ ಆಕ್ಸಿಜನ್ ಕಾನ್ಸನ್‌ಟ್ರೇಟರ್ ತಲುಪಿಸಲಿದ್ದಾರೆ. ರೋಗಿಯ ಆರೋಗ್ಯ ಸುಧಾರಿಸಿದ ಬಳಿಕ ಓಲಾ ಅದನ್ನು ಹಿಂದಕ್ಕೆ ಪಡೆದು ‘ಗಿವ್ ಇಂಡಿಯಾ’ ಸಂಸ್ಥೆಗೆ ಮರಳಿಸಲಿದೆ.

### ಮುಂಬೈ ಧಾರಣೆ

**ಶೇಂಗಾ**

10-5-2021

| | |
|---|---|
| ಜಾವಾ 70/80(ಹೊಸ) | 9850-9900 |
| ಜಾವಾ 80/90(ಹೊಸ) | 9350-9100 |
| ದಪ್ಪ ಮಧ್ಯಪ್ರದೇಶ(ಹೊಸ) | 10150-10200 |
| ದಪ್ಪ ಗುಜರಾತ್(ಹೊಸ) | 9400-9500 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1610 (1610) |
| ಒಂದು ವಾರದ ಡೆಲಿವರಿ | 1605 (1605) |
| ಸೋಯಾ ಕಚ್ಚಾ | 1445 (1450) |
| ಪಾಮ್ ವಾರದ ಡೆಲಿವರಿ | 1358 (1363) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1680 (1680) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10 ಗ್ರಾಂ
47,750 (47,900)
ಬೆಳ್ಳಿ ಕೆ.ಜಿ 71,750 (71,200)

ಆವರಣದಲ್ಲಿ ಶನಿವಾರದ ಧಾರಣೆ

## ಸಣ್ಣ ಉದ್ಯಮಕ್ಕೆ ಸಮಸ್ಯೆಗಳೇ ದೊಡ್ಡವು

### ದುಡಿಯುವ ಬಂಡವಾಳದ ಕೊರತೆ, ಜಮೀನು ಮಂಜೂರಾತಿ ವಿಳಂಬ

• ವಿಶ್ವನಾಥ ಎಸ್.

ಬೆಂಗಳೂರು: ದುಡಿಯುವ ಬಂಡವಾಳದ ಕೊರತೆ, ಸಾಲ ಸಿಗದೇ ಇರುವುದು, ಜಮೀನು ಮಂಜೂರಾತಿಯಲ್ಲಿ ವಿಳಂಬ ... ಇಂತಹ ಸಮಸ್ಯೆಗಳನ್ನು ರಾಜ್ಯದ ಸಣ್ಣ ಉದ್ದಿಮೆಗಳು ಎದುರಿಸುತ್ತಿವೆ. ಈ ಬಗ್ಗೆ ಸರ್ಕಾರದ ಗಮನ ಸೆಳೆದರೂ ಪ್ರಯೋಜನ ಆಗುತ್ತಿಲ್ಲ ಎಂದು ಉದ್ಯಮ ವಲಯ ಅಸಮಾಧಾನ ವ್ಯಕ್ತಪಡಿಸಿದೆ.


‘ಕಾರ್ಮಿಕರಿಗೆ ವೇತನ ನೀಡಲು, ಕಚ್ಚಾ ಸಾಮಗ್ರಿ ಖರೀದಿಸಲು ಅಗತ್ಯ ಇರುವ ದುಡಿಯುವ ಬಂಡವಾಳ ಹೊಂದಿಸಿಕೊಳ್ಳುವುದೇ ಸಣ್ಣ ಉದ್ದಿಮೆಗಳಿಗೆ ಸವಾಲು. ಆದರೆ, ಯಾರಿಗೆ ಸಾಲದ ಅಗತ್ಯ ಇದೆಯೋ ಅವರಿಗೆ ಬ್ಯಾಂಕುಗಳಲ್ಲಿ ಸಾಲ ಸಿಗುತ್ತಿಲ್ಲ. ಯಾರು ಆರ್ಥಿಕವಾಗಿ ಸಬಲರಾಗಿದ್ದಾರೋ ಅವರಿಗೆ ಮಾತ್ರ ಸಾಲ ಸಿಗುತ್ತಿದೆ. ಕಳೆದ ವರ್ಷದ ಲಾಕ್‌ಡೌನ್ ಪರಿಣಾಮಗಳಿಂದ ಹೊರಬರುವ ನಿರೀಕ್ಷೆಯಲ್ಲಿದ್ದ ಉದ್ದಿಮೆಗಳಿಗೆ ವಿದ್ಯುತ್ ದರ ಏರಿಕೆ ಎದುರಾಯಿತು. ಕಚ್ಚಾ ವಸ್ತುಗಳ ಬೆಲೆ ಹೆಚ್ಚುತ್ತಲೇ ಇದೆ. ಇಂಧನ ದರ ಏರಿಕೆಯಿಂದ ಸರಕು ಸಾಗಣೆ ವೆಚ್ಚ ಹೆಚ್ಚಾಗಿದೆ. ಹೀಗಾಗಿ, ತಯಾರಿಕಾ ವೆಚ್ಚ ಗಣನೀಯ ಏರಿಕೆ ಆಗುತ್ತಿದೆ. ಹೀಗಾದರೆ ರಾಜ್ಯದಲ್ಲಿ ಸಣ್ಣ ಉದ್ದಿಮೆಗಳು ಉಳಿಯುವುದೇ ಕಷ್ಟವಾಗುತ್ತದೆ’ ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಕೆ.ಬಿ. ಅರಸಪ್ಪ ಅವರು ಸಮಸ್ಯೆಯನ್ನು ವಿವರಿಸಿದರು.

ರಾಜ್ಯದಲ್ಲಿ ಶೇಕಡ 98ರಷ್ಟು ಸಣ್ಣ ಕೈಗಾರಿಕೆಗಳು ಖಾಸಗಿ ಕೈಗಾರಿಕಾ ಪ್ರದೇಶಗಳಲ್ಲಿವೆ. ಅವುಗಳಿಗೆ ಸರ್ಕಾರದಿಂದ ಸಬ್ಸಿಡಿ ದರದಲ್ಲಿ ಜಾಗ ಕೊಡುವಂತೆ ಆಗಬೇಕು. ಪರ್ಚೇಸ್ ಪ್ರೊಕ್ಯೂರ್‌ಮೆಂಟ್ ನಿಯಮದಂತೆ ದೊಡ್ಡ ಕೈಗಾರಿಕೆಗಳು ಎಂಎಸ್‌ಎಂಇಗಳಿಂದ ಶೇಕಡ 20ರಷ್ಟು ಸರಕುಗಳನ್ನು ಖರೀದಿಸಬೇಕು. ಆದರೆ ವಾಸ್ತವದಲ್ಲಿ ಇದು ಜಾರಿಯಾಗುತ್ತಿಲ್ಲ. ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು ಎಂದು ಅವರು ಒತ್ತಾಯಿಸಿದರು.

‘ಸಣ್ಣ ಉದ್ದಿಮೆಗಳಿಗೆ ಅಗತ್ಯವಿರುವ ನೆರವು ಸಿಗುತ್ತಿಲ್ಲ. ಸಾಲ ಅಥವಾ ಯಾವುದೇ ಪ್ಯಾಕೇಜ್ ಮಂಜೂರು ಮಾಡಿದಾಕ್ಷಣ ಅದು ಸಂಬಂಧಪಟ್ಟವರಿಗೆ ತಲುಪಿದೆ ಎಂದು ಭಾವಿಸಲಾಗುತ್ತದೆ. ಆದರೆ ವಾಸ್ತವದಲ್ಲಿ ವಿತರಣೆಯೇ ಆಗುತ್ತಿಲ್ಲ’ ಎಂದು ಅಸೋಸಿಯೇಷನ್ ಚೇಂಬರ್ಸ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯ (ಎಎಸ್‌ಎಸ್‌ಒಸಿಸಿಐ) ಅಧ್ಯಕ್ಷ ಆರ್. ಶಿವಕುಮಾರ್ ಪರಿಸ್ಥಿತಿ ವಿವರಿಸಿದರು.

‘ಸರ್ಕಾರಗಳ ನೆರವಿನ ಪ್ರಯೋಜನ ಪಡೆಯಲು ನಾನಾ ನಿಯಮಗಳಿವೆ. ಕಳೆದ ಬಾರಿ ಕೈಗಾರಿಕೆಗಳ ಆರ್ಥಿಕ ಸ್ಥಿತಿ ಹೇಗಿತ್ತು, ಸಾಲದ ಕಂತುಗಳನ್ನು ತಪ್ಪದೆ ಪಾವತಿ ಮಾಡಲಾಗಿದೆಯೇ ಎಂಬುದನ್ನು ಪರಿಗಣಿಸಲಾಗುತ್ತದೆ. ಕ್ರಿಸಿಲ್ ಮತ್ತು ಸಿಬಿಲ್ ರೇಟಿಂಗ್ ಉತ್ತಮವಾಗಿದ್ದರೆ ಮಾತ್ರ ಸಾಲ ದೊರೆಯುತ್ತದೆ. ಆದರೆ, ಒಂದಲ್ಲಾ ಒಂದು ಕಾರಣಕ್ಕೆ ಸಣ್ಣ ಉದ್ದಿಮೆಗಳು ಸಂಕಷ್ಟ ಎದುರಿಸುತ್ತಲೇ ಇರುವುದರಿಂದ ಅವುಗಳ ಸ್ಥಿತಿ ಉತ್ತಮವಾಗಿರಲು ಹೇಗೆ ಸಾಧ್ಯ’ ಎಂದು ಶಿವಕುಮಾರ್ ಪ್ರಶ್ನೆ ಮಾಡಿದರು.

ಈ ಕುರಿತು ಪ್ರತಿಕ್ರಿಯೆಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಧಿಕಾರಿಗಳು ಲಭ್ಯರಾಗಲಿಲ್ಲ.



ಸರ್ಕಾರದ ಕಡೆಯಿಂದ ಸಣ್ಣಪುಟ್ಟ ನೆರವು ಸಿಗುತ್ತಿದೆ ಎಂದಷ್ಟೇ ಹೇಳಬಹುದು. ಉದ್ದಿಮೆಗಳು ಉಳಿದು, ಬೆಳೆಯಲು ಆ ಮೂಲಕ ರಾಜ್ಯದ ಜಿಡಿಪಿಗೆ ಕೊಡುಗೆ ನೀಡುವಂತಹ ದೊಡ್ಡ ಮಟ್ಟದ ಯಾವುದೇ ಸಹಾಯ ಸಿಗುತ್ತಿಲ್ಲ
**ಕೆ.ಬಿ. ಅರಸಪ್ಪ**, ಕಾಸಿಯಾ ಅಧ್ಯಕ್ಷ



ಹೊಸದಾಗಿ ಸಣ್ಣ ಕೈಗಾರಿಕೆ ಸ್ಥಾಪಿಸಲು ರಾಜ್ಯದಲ್ಲಿ ಪೂರಕ ವಾತಾವರಣ ಇಲ್ಲ. ಜಮೀನು ಮಂಜೂರಾತಿ, ನೀರು, ವಿದ್ಯುತ್ ಸೌಲಭ್ಯಗಳು ಸುಲಭಕ್ಕೆ ಸಿಗುವುದಿಲ್ಲ.
**ಆರ್. ಶಿವಕುಮಾರ್**
ಎಎಸ್‌ಎಸ್‌ಒಸಿಸಿಐ ಅಧ್ಯಕ್ಷ

**ಸಮಸ್ಯೆಗಳು**

- ಗರಿಷ್ಠ ಮಟ್ಟದಲ್ಲಿರುವ ಇಂಧನ ದರ
- ಏರುತ್ತಿರುವ ಕಚ್ಚಾ ಸಾಮಗ್ರಿಗಳ ಬೆಲೆ
- ಸರಕು ಸಾಗಣೆ ವೆಚ್ಚ ಹೆಚ್ಚಳ

### ಕ್ಯಾಂಪ್ಕೊ ಖರೀದಿ ಸ್ಥಗಿತ

ಮಂಗಳೂರು: ಕರ್ನಾಟಕ ಮತ್ತು ಕೇರಳ ರಾಜ್ಯಗಳಲ್ಲಿ ಲಾಕ್‌ಡೌನ್ ಜಾರಿಯಾಗಿರುವುದರಿಂದ ಮೇ 11ರಿಂದ ಮೇ15ರವರೆಗೆ ಎರಡೂ ರಾಜ್ಯಗಳಲ್ಲಿ ಎಲ್ಲ ವಹಿವಾಟುಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಕ್ಯಾಂಪ್ಕೊ ನಿರ್ಧರಿಸಿದೆ. ಕ್ಯಾಂಪ್ಕೊ ಶಾಖೆಗಳಲ್ಲಿ ಸರಕು ಖರೀದಿ, ವಹಿವಾಟುಗಳು ನಡೆಯುವುದಿಲ್ಲ. ನಿರ್ಬಂಧಗಳ ಸಡಿಲಿಕೆ ಅನುಗುಣವಾಗಿ ಖರೀದಿ ಪ್ರಕ್ರಿಯೆಯನ್ನು ಪುನರಾರಂಭಿಸುವ ಪ್ರಯತ್ನಗಳನ್ನು ಸಂಸ್ಥೆ ಮಾಡಲಿದೆ ಎಂದು ಕ್ಯಾಂಪ್ಕೊ ಅಧ್ಯಕ್ಷ ಎ. ಕಿಶೋರ್ ಕುಮಾರ್ ಕೊಡ್ಗಿ ತಿಳಿಸಿದ್ದಾರೆ.

## ಪರಿಹಾರಕ್ಕೆ ಕಾಸಿಯಾ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಅತಿಸಣ್ಣ ಮತ್ತು ಸಣ್ಣ ಉದ್ಯಮಗಳಿಗೆ ಸರ್ಕಾರ ನೆರವಿನ ಹಸ್ತ ಚಾಚಬೇಕು ಎಂದು ಕರ್ನಾಟಕ ಸಣ್ಣ ಉದ್ಯಮಗಳ ಒಕ್ಕೂಟ (ಕಾಸಿಯಾ) ಒತ್ತಾಯಿಸಿದೆ. ‘ಈ ವರ್ಗದ ಉದ್ಯಮಗಳ ಹಿತ ಕಾಯಲು ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ನಿಗದಿತ ವಿದ್ಯುತ್ ಶುಲ್ಕವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು’ ಎಂದು ಕಾಸಿಯಾ ಅಧ್ಯಕ್ಷ ಕೆ.ಬಿ. ಅರಸಪ್ಪ ಆಗ್ರಹಿಸಿದ್ದಾರೆ.

ಏಪ್ರಿಲ್ ಮತ್ತು ಮೇ ತಿಂಗಳ ಮಾಸಿಕ ವಿದ್ಯುತ್ ಬಿಲ್ ಮೊತ್ತವನ್ನು ಬಡ್ಡಿ ಹಾಗೂ ದಂಡರಹಿತವಾಗಿ ಪಾವತಿಸಲು ಜೂನ್‌ವರೆಗೆ ಅವಕಾಶ ನೀಡಬೇಕು ಎಂದೂ ಅವರು ಮನವಿ ಮಾಡಿದ್ದಾರೆ.

‘ಅಗತ್ಯ ವಸ್ತುಗಳ ಉತ್ಪಾದನಾ ಘಟಕಗಳು, 24 ಗಂಟೆ ಕಾರ್ಯ ನಿರ್ವಹಿಸುವ ಕೈಗಾರಿಕೆಗಳ ಮಾಲೀಕರು ಮತ್ತು ಅವುಗಳ ಕಾರ್ಮಿಕರ ಸಂಚಾರಕ್ಕೆ ಪೊಲೀಸರು ನಿರ್ಬಂಧ ವಿಧಿಸಿದ್ದಾರೆ, ಅವರ ವಾಹನಗಳನ್ನು ಜಪ್ತಿ ಮಾಡುತ್ತಿದ್ದಾರೆ. ಪೊಲೀಸರ ಇಂತಹ ಕ್ರಮದಿಂದಾಗಿ ಸರ್ಕಾರ ಅನುಮತಿ ನೀಡಿದ್ದರೂ ಕೈಗಾರಿಕೋದ್ಯಮಿಗಳು ಘಟಕಗಳಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗದೆ ಸಂಕಷ್ಟಕ್ಕೀಡಾಗಿದ್ದಾರೆ’ ಎಂದು ಅರಸಪ್ಪ ದೂರಿದ್ದಾರೆ.

‘ಹಿಂದಿನ ಬಾರಿ ಜಾರಿಗೆ ತಂದ ಲಾಕ್‌ಡೌನ್‌ನಿಂದಾಗಿ ಅಂದಾಜು ಶೇಕಡ 20ರಷ್ಟು ಅತಿಸಣ್ಣ ಮತ್ತು ಸಣ್ಣ ಕೈಗಾರಿಕೆಗಳು ರಾಜ್ಯದಲ್ಲಿ ಈಗಾಗಲೇ ಮುಚ್ಚಿವೆ. ಈಗ ಮತ್ತೆ ಲಾಕ್‌ಡೌನ್ ಜಾರಿಯಾಗಿದೆ. ಸರ್ಕಾರ ಸೂಕ್ತ ಪರಿಹಾರ ಘೋಷಿಸದಿದ್ದರೆ ಶೇ.25ರಿಂದ 30ರಷ್ಟು ಕೈಗಾರಿಕೆಗಳು ಸ್ಥಗಿತಗೊಳ್ಳುವ ಸಾಧ್ಯತೆ ಇದೆ’ ಎಂದಿದ್ದಾರೆ.

## ವಾಹನ ನೋಂದಣಿ ಶೇ 30ರಷ್ಟು ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ವಾಹನಗಳ ನೋಂದಣಿಯು 2019–20ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ 2020–21ನೇ ಹಣಕಾಸು ವರ್ಷದಲ್ಲಿ ಶೇಕಡ 29.85ರಷ್ಟು ಇಳಿಕೆ ಆಗಿದೆ ಎಂದು ಭಾರತೀಯ ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಹೇಳಿದೆ.

2019–20ರಲ್ಲಿ 2.17 ಕೋಟಿ ವಾಹನಗಳು ನೋಂದಣಿ ಆಗಿದ್ದವು. 2020–21ರಲ್ಲಿ ವಾಹನಗಳ ನೋಂದಣಿಯು 1.52 ಕೋಟಿಗೆ ಇಳಿಕೆ ಕಂಡಿದೆ. ಇದು ಕಳೆದ ಎಂಟು ವರ್ಷಗಳ ಅತ್ಯಂತ ಕನಿಷ್ಠ ಮಟ್ಟವಾಗಿದೆ.

ಟ್ರ್ಯಾಕ್ಟರ್ ಹೊರತುಪಡಿಸಿ ಉಳಿದೆಲ್ಲ ವಾಹನಗಳ ನೋಂದಣಿಯು 2020–21ರಲ್ಲಿ ನಕಾರಾತ್ಮಕ ಬೆಳವಣಿಗೆ ಕಂಡಿದೆ ಎಂದು ಎಫ್‌ಎಡಿಎ ತಿಳಿಸಿದೆ. ಟ್ರ್ಯಾಕ್ಟರ್ ನೋಂದಣಿಯಲ್ಲಿ ಶೇ 16.11ರಷ್ಟು ಬೆಳವಣಿಗೆ ಕಂಡುಬಂದಿದೆ.

2020ರ ಏಪ್ರಿಲ್‌ನಲ್ಲಿ ದೇಶದಾದ್ಯಂತ ಸಂಪೂರ್ಣ ಲಾಕ್‌ಡೌನ್ ಜಾರಿಯಲ್ಲಿತ್ತು. ಒಂದೇ ಒಂದು ವಾಹನವೂ ನೋಂದಣಿ ಆಗಿರಲಿಲ್ಲ. ಹೀಗಾಗಿ 2021ರ ಏಪ್ರಿಲ್ ತಿಂಗಳ ನೋಂದಣಿಯ ಅಂಕಿ–ಅಂಶವನ್ನು ಅದರೊಂದಿಗೆ ಹೋಲಿಸಲು ಆಗುವುದಿಲ್ಲ. 2021ರ ಮಾರ್ಚ್‌ಗೆ ಹೋಲಿಸಿದರೆ ಶೇ 28.15ರಷ್ಟು ಇಳಿಕೆ ಆಗಿದೆ ಎಂದು ತಿಳಿಸಿದೆ.

ಭಾರತವು ಸದ್ಯ ಅತ್ಯಂತ ಕಷ್ಟಕರವಾದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಕೋವಿಡ್‌ನ ಎರಡನೇ ಅಲೆಯು ಪ್ರತಿಯೊಬ್ಬರ ಜೀವನವನ್ನೂ ಸಂಕಷ್ಟಕ್ಕೆ ದೂಡಿದೆ. ಈ ಬಾರಿ, ಸೋಂಕು ಹರಡುವಿಕೆಯು ನಗರ ಪ್ರದೇಶಗಳಿಗಷ್ಟೇ ಸೀಮಿತವಾಗಿರದೆ, ಗ್ರಾಮೀಣ ಪ್ರದೇಶಗಳಿಗೂ ಹಬ್ಬುತ್ತಿದೆ ಎಂದು ಒಕ್ಕೂಟದ ಅಧ್ಯಕ್ಷ ವಿಂಕೇಶ್ ಗುಲಾಟಿ ತಿಳಿಸಿದ್ದಾರೆ.

ಕಳೆದ ವರ್ಷದಂತೆಯೇ ಈ ವರ್ಷವೂ ಆರ್ಥಿಕ ಕೊಡುಗೆ ಘೋಷಿಸಿ ಎಂದು ಅವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

**ನೋಂದಣಿ ಮಾಹಿತಿ**

| ವಿಭಾಗ | 2019-20 | 2021-22 | ಇಳಿಕೆ (%) |
|---|---|---|---|
| ಪ್ರಯಾಣಿಕ ವಾಹನ | 27,73,514 | 23,86,316 | 13.96 |
| ದ್ವಿಚಕ್ರ | 1,68,38,965 | 1,15,33,336 | 31.51 |
| ತ್ರಿಚಕ್ರ | 7,19,594 | 2,58,174 | 64.12 |
| ವಾಣಿಜ್ಯ ವಾಹನ | 8,81,114 | 4,48,914 | 49.05 |



## ಮಹಾರಾಷ್ಟ್ರದಲ್ಲೂ ₹ 100ರ ಗಡಿ ದಾಟಿದ ಪೆಟ್ರೋಲ್

ನವದೆಹಲಿ (ಪಿಟಿಐ): ಲೀಟರ್ ಪೆಟ್ರೋಲ್ ದರವು ₹ 100ರ ಗಡಿ ದಾಟಿರುವ ರಾಜಸ್ಥಾನ ಮತ್ತು ಮಧ್ಯಪ್ರದೇಶ ರಾಜ್ಯಗಳ ಸಾಲಿಗೆ ಇದೀಗ ಮಹಾರಾಷ್ಟ್ರವೂ ಸೇರಿದೆ.

ಎರಡು ದಿನಗಳ ಬಿಡುವಿನ ಬಳಿಕ ದೇಶದಾದ್ಯಂತ ಪೆಟ್ರೋಲ್, ಡೀಸೆಲ್ ದರವನ್ನು ಸೋಮವಾರ ಮತ್ತೆ ಹೆಚ್ಚಿಸಲಾಗಿದೆ. ಇದರಿಂದಾಗಿ ಮಹಾರಾಷ್ಟ್ರದ ಪರ್ಭಾನಿ ಜಿಲ್ಲೆಯಲ್ಲಿ ಪೆಟ್ರೋಲ್ ದರ ಲೀಟರ್‌ಗೆ ₹100.20ಕ್ಕೆ ಏರಿಕೆ ಆಗಿದೆ.

ರಾಜಸ್ಥಾನದ ಶ್ರೀಗಂಗಾನಗರ ಜಿಲ್ಲೆಯಲ್ಲಿ ಲೀಟರ್ ಪೆಟ್ರೋಲ್ ₹ 102.42 ಮತ್ತು ಮಧ್ಯಪ್ರದೇಶ ರಾಜ್ಯದ ಅನುಪ್ಪುರನಲ್ಲಿ ₹ 102.12ರಂತೆ ಮಾರಾಟವಾಗುತ್ತಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ದರ 27 ಪೈಸೆ ಹೆಚ್ಚಾಗಿ ₹ 94.57ರಂತೆ ಮತ್ತು ಡೀಸೆಲ್ ದರ 35 ಪೈಸೆ ಹೆಚ್ಚಾಗಿ ₹ 86.99ರಂತೆ ಮಾರಾಟವಾಗಿದೆ.